# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 11-01-2021



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಜಯಕಿರಣ
11. ಸಂಜೆ ವಾಣಿ
12. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ಬಿಬಿಎಂಪಿ ಕಾಯ್ದೆ: ಬೈಲಾ ಗೊಂದಲ

• ಪ್ರವೀಣ್ ಕುಮಾರ್ ಪಿ.ವಿ.

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದ ಆಡಳಿತಕ್ಕೆ ಸಂಬಂಧಿಸಿದಂತೆ 'ಬಿಬಿಎಂಪಿ ಕಾಯ್ದೆ 2020' ಇಂದಿನಿಂದ ಅಧಿಕೃತವಾಗಿ ಜಾರಿಯಾಗುತ್ತಿದೆ. ಆದರೆ, 1976ರ ಕರ್ನಾಟಕ ಮುನ್ಸಿಪಾಲಿಟಿ ಕಾಯ್ದೆಯ ಅನ್ವಯ ಈ ಹಿಂದೆ ಬಿಬಿಎಂಪಿಯು ರೂಪಿಸಿ ಜಾರಿಗೊಳಿಸಿದ್ದ ಕೆಲವು ಉಪವಿಧಿಗಳನ್ನು ಮುಂದುವರಿಸುವ ಕುರಿತು ಗೊಂದಲಗಳನ್ನು ಹೊಸ ಕಾಯ್ದೆ ಸೃಷ್ಟಿಸಿದೆ.

ಹೊಸ ಕಾಯ್ದೆಯನ್ವಯ ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸುವ ಸಂಕ್ರಮಣ ಕಾಲದಲ್ಲಿ ಸೃಷ್ಟಿಯಾಗುವ ಗೊಂದಲಗಳನ್ನು ನಿವಾರಿಸುವ ಬಗ್ಗೆ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 375 ವಿವರಿಸುತ್ತದೆ. ಆದರೆ, ಈ ಸೆಕ್ಷನ್‌ನಲ್ಲಿ ರುವ ಕೆಲವು ಅಂಶಗಳು ಗೊಂದಲಗಳನ್ನು ನಿವಾರಿಸುವ ಬದಲು ಮತ್ತಷ್ಟು ಹೆಚ್ಚಿಸುವಂತಿವೆ.

ಬಿಬಿಎಂಪಿ ಕಾಯ್ದೆ ರೂಪುಗೊಳ್ಳುವ ಮುನ್ನ ಕೆಎಂಸಿ ಕಾಯ್ದೆಯಡಿ ಜಾರಿಯಾದ ಯಾವುದೇ ನಿಯಮ, ಪ್ರಕಟವಾದ ಅಧಿಸೂಚನೆ, ಆದೇಶ ಅಥವಾ ಮಾಡಲಾದ ನೇಮಕಾತಿಗಳು ಈ ಕಾಯ್ದೆಯ ಪ್ರಕಾರ ಅಸಮಂಜಸ ಅಲ್ಲದಿದ್ದರೆ ಅಥವಾ ಅವುಗಳನ್ನು ರದ್ದುಪಡಿಸಲು ಕ್ರಮಕೈಗೊಳ್ಳದಿದ್ದರೆ ಅವು ಈ ಕಾಯ್ದೆ ಜಾರಿಗೆ ಬಂದ ಬಳಿಕ ಹೊಸತಾಗಿ ನಿಯಮಗಳನ್ನು ರೂಪಿಸುವವರೆಗೆ, ಹೊಸ ಅಧಿಸೂಚನೆ ಅಥವಾ ಆದೇಶ ಪ್ರಕಟಿಸುವವರೆಗೆ ಅಥವಾ ಹೊಸ ನೇಮಕಾತಿ ಮಾಡುವವರೆಗೆ ಯಥಾಪ್ರಕಾರ ಮುಂದುವರಿಯಲಿವೆ ಎನ್ನುತ್ತದೆ ಸೆಕ್ಷನ್ 375 (1). ಹಳೆ ನಿಯಮಗಳು ಹೊಸ ಕಾಯ್ದೆ ಪ್ರಕಾರ ಅಸಮಂಜಸವಾಗಿದ್ದರೆ ಅವು ಮುಂದುವರಿಯುವುದಿಲ್ಲ ಎನ್ನುವುದು ಈ ಸೆಕ್ಷನ್‌ನ ತಾತ್ಪರ್ಯ. ಈ ಅಂಶವೇ ಗೊಂದಲಕ್ಕೆಡೆ ಮಾಡಿಕೊಟ್ಟಿದೆ.

2ನೇ ಪುಟ ನೋಡಿ

# ಬಿಬಿಎಂಪಿ ಕಾಯ್ದೆ: ಬೈಲಾ ಗೊಂದಲ

ಒಂದನೇ ಪುಟದಿಂದ...

ಸಾರ್ವಜನಿಕ ಸ್ಥಳಗಳಲ್ಲಿ ವಾಣಿಜ್ಯ ಉದ್ದೇಶದ ಹೋರ್ಡಿಂಗ್‌ಗಳನ್ನು ಸಂಪೂರ್ಣ ನಿಷೇಧಿಸುವ ಉದ್ದೇಶದಿಂದ ಪಾಲಿಕೆಯು ಹೈಕೋರ್ಟ್ ಸೂಚನೆ ಮೇರೆಗೆ 'ಹೊರಾಂಗಣ ಸೈನೇಜ್ ಮತ್ತು ಸಾರ್ವಜನಿಕ ಸಂದೇಶ ನೀತಿ'ಯನ್ನು ಮತ್ತು 'ಹೊರಾಂಗಣ ಜಾಹೀರಾತು ಮತ್ತು ಸಾರ್ವಜನಿಕ ಸಂದೇಶ ಬೈಲಾ -2018' ಅನ್ನು ಜಾರಿಗೊಳಿಸಿದೆ. ಅದರ ಪ್ರಕಾರ ಸಾರ್ವಜನಿಕ ಪ್ರದೇಶದಲ್ಲಿ ವಾಣಿಜ್ಯ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ಇಲ್ಲ. ಆದರೆ, ಬಿಬಿಎಂಪಿ ಕಾಯ್ದೆಯ ಸೆಕ್ಷನ್ 157 ಹೊರಾಂಗಣದಲ್ಲೂ ವಾಣಿಜ್ಯ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ಕಲ್ಪಿಸುತ್ತದೆ.

ಬಿಬಿಎಂಪಿ ಕಾಯ್ದೆಯ ಸೆಕ್ಷನ್ 157ರ ಪ್ರಕಾರ, 'ಯಾವುದೇ ಕಟ್ಟಡದಲ್ಲಿ, ಜಾಗದಲ್ಲಿ, ಗೋಡೆಯಲ್ಲಿ ಅಥವಾ ಯಾವುದೇ ರಚನೆಯಲ್ಲಿ ಅಳವಡಿಸುವ, ಪ್ರದರ್ಶಿಸುವ ಅಥವಾ ಸಾರ್ವಜನಿಕರಿಗೆ ತೋರಿಸುವ ಯಾವುದೇ ಜಾಹೀರಾತಿಗೆ, ಅದು ಸರ್ಕಾರಿ ಅಥವಾ ಖಾಸಗಿ ಜಾಗದಲ್ಲಿದ್ದರೂ ಶುಲ್ಕ ವಿಧಿಸಲಾಗುತ್ತದೆ. ಈ ಶುಲ್ಕವನ್ನು ಬಿಬಿಎಂಪಿಯು ಸರ್ಕಾರದ ಒಪ್ಪಿಗೆ ಪಡೆದು ನಿಗದಿಪಡಿಸಬಹುದು. ಇದು ಸರ್ಕಾರ ಗೊತ್ತುಪಡಿಸುವ ಗರಿಷ್ಠ ಅಥವಾ ಕನಿಷ್ಠ ಮೊತ್ತದ ಮಿತಿಯಲ್ಲಿರಬೇಕು. ಯಾವ ರೀತಿಯ ಜಾಹೀರಾತುಗಳಿಗೆ ಶುಲ್ಕ ವಿನಾಯಿತಿ ನೀಡಬಹುದು' ಎಂಬ ಅಂಶಗಳನ್ನೂ ವಿವರಿಸಲಾಗಿದೆ.

ಆಯುಕ್ತರ ಲಿಖಿತ ಪರವಾನಗಿ ಇಲ್ಲದೇ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ಇಲ್ಲ ಎಂದು ಹೊಸ ಕಾಯ್ದೆಯ ಸೆಕ್ಷನ್ 158 ಹೇಳುತ್ತದೆ. ಪಾಲಿಕೆಯು ಜಾರಿಗೊಳಿಸಿರುವ ಯಾವುದೇ ಉಪವಿಧಿಗಳಿಗೆ ಜಾಹೀರಾತು ವ್ಯತಿರಿಕ್ತವಾಗಿದ್ದರೆ ಹಾಗೂ ಸಂಸ್ಥೆ ಅಥವಾ ವ್ಯಕ್ತಿಯು ಪಾಲಿಕೆಗೆ ಶುಲ್ಕ ಮತ್ತಿತರ ಯಾವುದೇ ಬಾಕಿ ಉಳಿಸಿಕೊಂಡಿದ್ದರೆ ಅದಕ್ಕೆ ಆಯುಕ್ತರು ಅನುಮತಿ ನೀಡುವಂತಿಲ್ಲ ಎಂದು ಸೆಕ್ಷನ್ 158 (2) ಹೇಳುತ್ತದೆ. ಪಾಲಿಕೆಯು ಜಾರಿಗೊಳಿಸಿರುವ ಯಾವುದೇ ಉಪವಿಧಿಗೆ ಜಾಹೀರಾತು ವ್ಯತಿರಿಕ್ತವಾಗಿದ್ದು, ಅದಕ್ಕೆ ಆಯುಕ್ತರು ಅನುಮತಿ ನೀಡಿದರೂ ಅದು ಊರ್ಜಿತವಾಗುವುದಿಲ್ಲ ಎಂದು ಸೆಕ್ಷನ್ 159 (ಎ) ಹೇಳುತ್ತದೆ.

ಸೆಕ್ಷನ್ 158 ಮತ್ತು 159ಕ್ಕೆ ವಿರುದ್ಧವಾಗಿ ಯಾವುದಾದರೂ ಜಾಗದಲ್ಲಿ, ಕಟ್ಟಡದಲ್ಲಿ, ಗೋಡೆಯಲ್ಲಿ ಅಥವಾ ಹೋರ್ಡಿಂಗ್‌ನಲ್ಲಿ ಜಾಹೀರಾತನ್ನು ಅಳವಡಿಸಿದ್ದರೆ, ಅದಕ್ಕೆ ಆ ಜಾಗದ ಅಥವಾ ಕಟ್ಟಡದ ಮಾಲೀಕರೇ ಹೊಣೆ ಎನ್ನುತ್ತದೆ ಸೆಕ್ಷನ್ 160. ಆ ಜಾಹೀರಾತನ್ನು ತಾನಾಗಲೀ ಅಥವಾ ತಾನು ನೇಮಿಸಿದ ಸಿಬ್ಬಂದಿಯಾಗಲೀ ಅಳವಡಿಸಿಲ್ಲ ಎಂಬುದನ್ನು ಅಥವಾ ತಮ್ಮ ಗಮನಕ್ಕೆ ಬಾರದೆ ಅದನ್ನು ಅಳವಡಿಸಲಾಗಿದೆ ಎಂಬುದನ್ನು ಸಾಬೀತುಪಡಿಸುವವರೆಗೂ ಜಾಗದ ಅಥವಾ ಕಟ್ಟಡ ಮಾಲೀಕರನ್ನೇ ಜವಾಬ್ದಾರರನ್ನಾಗಿ ಮಾಡಲು ಈ ಸೆಕ್ಷನ್ ಅವಕಾಶ ಕಲ್ಪಿಸುತ್ತದೆ.

'ಬಿಬಿಎಂಪಿಯ ಜಾಹೀರಾತು ಬೈಲಾಗಳು ಹೊಸ ಕಾಯ್ದೆಯ ಅಂಶಗಳಿಗೆ ವ್ಯತಿರಿಕ್ತವಾಗಿವೆ. ಕಟ್ಟಡ ಬೈಲಾಗಳು, ಕಸ ನಿರ್ವಹಣೆ ಬೈಲಾಗಳೂ ಸೇರಿದಂತೆ ಇತರ ಉಪವಿಧಿಗಳು ಬಿಬಿಎಂಪಿ ಕಾಯ್ದೆಗೆ ವ್ಯತಿರಿಕ್ತವಾಗಿಲ್ಲ. ಹಾಗಾಗಿ ಅವುಗಳ ಬಗ್ಗೆ ಯಾವುದೇ ಗೊಂದಲಗಳಿಲ್ಲ. ಜಾಹೀರಾತು ಬೈಲಾಗಳ ಅನುಷ್ಠಾನ ಸಂಬಂಧ ಸರ್ಕಾರದ ನಿರ್ದೇಶನವನ್ನು ಎದುರು ನೋಡುತ್ತಿದ್ದೇವೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಬಿಬಿಎಂಪಿಯ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

## 'ಹುದ್ದೆ ಹೆಸರು ಬದಲಾವಣೆಗೆ ಪ್ರತ್ಯೇಕ ಅಧಿಸೂಚನೆ ಅಗತ್ಯ'

ಸೋಮವಾರದಿಂದ ಜಾರಿಗೆ ಬರುತ್ತಿರುವ ಬಿಬಿಎಂಪಿ ಕಾಯ್ದೆ ಅಧಿಕಾರಿಗಳ ಹುದ್ದೆಯ ಕುರಿತೂ ಗೊಂದಲಗಳನ್ನು ಸೃಷ್ಟಿಸಿದೆ.

ಬಿಬಿಎಂಪಿ ಕಾಯ್ದೆ ಪ್ರಕಾರ ಪಾಲಿಕೆಗೆ ಪ್ರಧಾನ ಕಾರ್ಯದರ್ಶಿ ಶ್ರೇಣಿಯ ಅಧಿಕಾರಿ ಮುಖ್ಯ ಆಯುಕ್ತರಾಗಿರುತ್ತಾರೆ. ಪ್ರಸ್ತುತ ಬಿಬಿಎಂಪಿ ಆಯುಕ್ತರಾಗಿರುವ ಎನ್.ಮಂಜುನಾಥ ಪ್ರಸಾದ್ ಅವರೂ ಪ್ರಧಾನ ಕಾರ್ಯದರ್ಶಿ ಶ್ರೇಣಿಯ ಅಧಿಕಾರಿ. ಅವರನ್ನು ಆಯುಕ್ತರು ಎಂದು ಕರೆಯಬೇಕೋ ಅಥವಾ ಮುಖ್ಯ ಆಯುಕ್ತರೆಂದು ಕರೆಯಬೇಕೋ ಎಂಬ ಗೊಂದಲ ಬಿಬಿಎಂಪಿ ಅಧಿಕಾರಿಗಳನ್ನು ಕಾಡುತ್ತಿದೆ. ಅದೇ ರೀತಿ, ಬಿಬಿಎಂಪಿಯ ಪ್ರತಿ ವಲಯಗಳ ಆಡಳಿತ ನಿರ್ವಹಣೆ ಜಂಟಿ ಆಯುಕ್ತರ ಉಸ್ತುವಾರಿಯಲ್ಲಿ ನಡೆಯುತ್ತಿದೆ. ಹೊಸ ಕಾಯ್ದೆ ಪ್ರಕಾರ ವಲಯ ಆಯುಕ್ತರು ಆಯಾ ವಲಯಗಳ ಆಡಳಿತ ವ್ಯವಸ್ಥೆಯ ಹೊಣೆ ಹೊರಬೇಕು.

'ಈಗಿರುವ ಆಯುಕ್ತರನ್ನೇ ಮುಖ್ಯ ಆಯುಕ್ತರನ್ನಾಗಿ ಮುಂದುವರಿಸಲು ಹಾಗೂ ವಲಯಗಳ ಜಂಟಿ ಆಯುಕ್ತರನ್ನೇ ವಲಯ ಆಯುಕ್ತರನ್ನಾಗಿ ಮುಂದುವರಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಪ್ರತ್ಯೇಕ ಅಧಿಸೂಚನೆ ಹೊರಡಿಸಬೇಕಾಗುತ್ತದ' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು. ಆದರೆ, ಸರ್ಕಾರ ಹುದ್ದೆಗಳ ಹೆಸರು ಬದಲಾವಣೆಗೆ ಇದುವರೆಗೂ ಕ್ರಮಕೈಗೊಂಡಿಲ್ಲ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

ಬಿಡ್ ಸಾಮರ್ಥ್ಯ ಕೂಲಂಕಷವಾಗಿ ಪರಿಶೀಲಿಸಿ: ಬಿಬಿಎಂಪಿಗೆ ನಗರಾಭಿವೃದ್ಧಿ ಇಲಾಖೆ ಸೂಚನೆ

# ಬಿಡ್ ಸಾಮರ್ಥ್ಯಕ್ಕಿಂತ ಹೆಚ್ಚು ಮೊತ್ತದ ಕಾಮಗಾರಿ ಗುತ್ತಿಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಗುತ್ತಿಗೆದಾರರನ್ನು ಅವರ ಬಿಡ್ ಸಾಮರ್ಥ್ಯಕ್ಕೆ ಅನುಗುಣವಾಗಿ ಆಯ್ಕೆ ಮಾಡುತ್ತಿಲ್ಲ. ಕೆಲವು ಗುತ್ತಿಗೆದಾರರಿಗೆ ಅವರ ಬಿಡ್ ಸಾಮರ್ಥ್ಯಕ್ಕಿಂತ ಹೆಚ್ಚು ಕಾಮಗಾರಿಗಳ ಗುತ್ತಿಗೆ ವಹಿಸುವ ಮೂಲಕ ತಾರತಮ್ಯ ಮಾಡಲಾಗುತ್ತಿದೆ ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘ ಆರೋಪಿಸಿದೆ.

ಈ ಕುರಿತು ಉಪ ಮುಖ್ಯಮಂತ್ರಿ ಸಿ.ಎನ್.ಅಶ್ವತ್ಥನಾರಾಯಣ ಅವರಿಗೆ ಇತ್ತೀಚೆಗೆ ದೂರು ನೀಡಿದ್ದ ಸಂಘವು, ಎಂಎಸ್‌ವಿ ಕನ್‌ಸ್ಟ್ರಕ್ಷನ್ ಕಂಪನಿಗೆ ಅರ್ಹತೆಗಿಂತ ಹೆಚ್ಚು ಕಾಮಗಾರಿ ಗುತ್ತಿಗೆ ನೀಡಲಾಗಿದೆ ಎಂದೂ ಆರೋಪಿಸಿತ್ತು.

**ಬಿಬಿಎಂಪಿ ಸುದ್ದಿ**

ಇದನ್ನು ಗಂಭೀರವಾಗಿ ಪರಿಗಣಿಸಿರುವ ಅಶ್ವತ್ಥನಾರಾಯಣ ಅವರು, 'ಕೆಲವು ಗುತ್ತಿಗೆದಾರರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಗುತ್ತಿಗೆದಾರರ ಪ್ರಮಾಣೀಕೃತ ಬಿಡ್ ಟೆಂಡರ್ ದಾಖಲಾತಿಗಳನ್ನು ಅಧಿಕಾರಿಗಳು ಸರಿಯಾಗಿ ಪರಿಶೀಲಿಸುತ್ತಿಲ್ಲ. ಗುತ್ತಿಗೆದಾರರ ಬಿಡ್ ಸಾಮರ್ಥ್ಯಕ್ಕಿಂತ ಹೆಚ್ಚಿನ ಕಾಮಗಾರಿಗಳನ್ನು ಅವರಿಗೆ ವಹಿಸಬಾರದು' ಎಂದು ನಿರ್ದೇಶನ ನೀಡಿ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಎಸಿಎಸ್) ರಾಕೇಶ್ ಸಿಂಗ್ ಅವರಿಗೆ 2020ರ ಡಿ. 28ರಂದು ಪತ್ರ ಬರೆದಿದ್ದರು.

ಈ ಪತ್ರದ ಸಾರಾಂಶವನ್ನು ಉಲ್ಲೇಖಿಸಿ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ಅವರಿಗೆ 2021ರ ಜ.5ರಂದು ಪತ್ರ ಬರೆದಿದ್ದಾರೆ. 'ಪ್ರಮಾಣೀಕೃತ ದಾಖಲೆಗಳ ಪ್ರಕಾರ ಬಿಡ್ ಸಾಮರ್ಥ್ಯ ಇಲ್ಲದ ಗುತ್ತಿಗೆದಾರರ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲು ಕ್ರಮ ಕೈಗೊಳ್ಳಬೇಕು' ಎಂದೂ ಎಸಿಎಸ್ ಸೂಚನೆ ನೀಡಿದ್ದಾರೆ.

**ಮುಖ್ಯಾಂಶಗಳು**

- ಟೆಂಡರ್ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸದ ಅಧಿಕಾರಿಗಳು
- ಅಕ್ರಮದ ಬಗ್ಗೆ ಉಪಮುಖ್ಯಮಂತ್ರಿಗೆ ದೂರು ನೀಡಿದ್ದ ಬಿಬಿಎಂಪಿ ಗುತ್ತಿಗೆದಾರರ ಸಂಘ

**ಗುತ್ತಿಗೆದಾರರ ಸಾಮರ್ಥ್ಯಕ್ಕೆ ಅನುಗುಣವಾಗಿ ಕಾಮಗಾರಿ ಗುತ್ತಿಗೆ ನೀಡಬೇಕು. ಈ ಕುರಿತ ನಿಯಮಗಳನ್ನು ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸುವ ಮೂಲಕ ಪಾರದರ್ಶಕವಾಗಿ ನಡೆದುಕೊಳ್ಳಬೇಕು**

**ಆರ್.ಅಂಬಿಕಾಪತಿ**
ಅಧ್ಯಕ್ಷ ಬಿಬಿಎಂಪಿ ಗುತ್ತಿಗೆದಾರರ ಸಂಘ

'ಎಂಎಸ್‌ವಿ ಕನ್‌ಸ್ಟ್ರಕ್ಷನ್ ಕಂಪನಿಯ ಟೆಂಡರ್ ಬಿಡ್ ಅರ್ಹತೆಯನ್ನೂ ಗುತ್ತಿಗೆದಾರರ ಸಾಮರ್ಥ್ಯ ಅಳೆಯುವ ಸೂತ್ರದ ಪ್ರಕಾರ ಮತ್ತೊಮ್ಮೆ ಖಾತರಿ ಪಡಿಸಿಕೊಳ್ಳಬೇಕು' ಎಂದು ನಿರ್ದೇಶನ ನೀಡಿದ್ದಾರೆ.

'ಗುತ್ತಿಗೆದಾರರಿಗೆ ಎಷ್ಟು ಮೊತ್ತದವರಗಿನ ಗುತ್ತಿಗೆ ನೀಡಬೇಕು ಎಂಬುದನ್ನು ಲೆಕ್ಕ ಹಾಕಲೆಂದೇ ಸಿದ್ಧ ಸೂತ್ರವಿದೆ. ಅದನ್ನು ಬಿಬಿಎಂಪಿ ಅಧಿಕಾರಿಗಳು ಉಲ್ಲಂಘಿಸುತ್ತಿದ್ದಾರೆ. ಎಂಎಸ್‌ವಿ ಕನ್‌ಸ್ಟ್ರಕ್ಷನ್ ಕಂಪನಿಗೆ ಅದರ ಸಾಮರ್ಥ್ಯಕ್ಕಿಂತ ಹೆಚ್ಚು ಮೊತ್ತದ ಕಾಮಗಾರಿ ನೀಡಲಾದ ಬಗ್ಗೆ ಅನೇಕ ಗುತ್ತಿಗೆದಾರರು ಸಂಘಕ್ಕೆ ದೂರು ನೀಡಿದ್ದರು. ಹಾಗಾಗಿ ಈ ಬಗ್ಗೆ ಸಂಘದಿಂದ ಉಪ ಮುಖ್ಯಮಂತ್ರಿಗೆ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೂ ದೂರು ನೀಡಿದ್ದೆವು' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್.ಅಂಬಿಕಾಪತಿ 'ಪ್ರಜಾವಾಣಿ'ಗೆ ತಿಳಿಸಿದರು.

'ಎಂಎಸ್‌ವಿ ಕನ್‌ಸ್ಟ್ರಕ್ಷನ್ ಸಂಸ್ಥೆಗೆ ಬೇರೆ ಬೇರೆ ವಲಯಗಳಲ್ಲಿ ಡಾಂಬರೀಕರಣ ಹಾಗೂ ಇತರ ಮೂಲಸೌಕರ್ಯ ಕಾಮಗಾರಿಗಳು ಸೇರಿ ಅನೇಕ ಸಿವಿಲ್ ಕಾಮಗಾರಿಗಳನ್ನು ಗುತ್ತಿಗೆ ನೀಡಲಾಗಿದೆ. ಅವರ ಬಿಡ್ ಸಾಮರ್ಥ್ಯವನ್ನು ಕೂಲಂಕಷವಾಗಿ ಪರಿಶೀಲಿಸಿದರೆ ಒಂದೇ ಸಂಸ್ಥೆಗೆ ಅಷ್ಟೊಂದು ಪ್ರಮಾಣದ ಕಾಮಗಾರಿ ನೀಡಲು ಸಾಧ್ಯವೇ ಇಲ್ಲ. ಇದರಿಂದ ಕಾಮಗಾರಿಯ ಗುತ್ತಿಗೆ ಪಡೆಯಲು ಅರ್ಹತೆ ಹೊಂದಿರುವ ಅನ್ಯ ಗುತ್ತಿಗೆದಾರರಿಗೆ ಅನ್ಯಾಯವಾಗುತ್ತಿದೆ' ಎಂದು ಅವರು ದೂರಿದರು.

'ಎಂಎಸ್‌ವಿ ಕನ್‌ಸ್ಟ್ರಕ್ಷನ್ ಕಂಪನಿಯು ಬಿಬಿಎಂಪಿಗೆ ಸಲ್ಲಿಸಿರುವ ದಾಖಲೆಗಳ ಪ್ರಕಾರ 2018–19ನೇ ಸಾಲಿನಲ್ಲಿ ಹಿಂದಿನ ಐದು ವರ್ಷಗಳ ಒಟ್ಟು ವಾರ್ಷಿಕ ವಹಿವಾಟು ಗರಿಷ್ಠ ₹ 154 ಕೋಟಿ. ಈ ಕಂಪನಿಯು ₹ 115 ಕೋಟಿ ಮೊತ್ತದ ಕಾಮಗಾರಿಗಳನ್ನು ನಿರ್ವಹಿಸುವ ಅರ್ಹತೆ ಹೊಂದಿದೆ. ಆದರೆ, ಕಂಪನಿಗೆ ಅದರ ಅರ್ಹತೆಗಿಂತ ₹ 92 ಕೋಟಿಗಳಷ್ಟು ಹೆಚ್ಚು ಮೊತ್ತದ ಕಾಮಗಾರಿಗಳ ಗುತ್ತಿಗೆ ವಹಿಸಲಾಗಿದೆ' ಎಂದು ಸಂಘವು ಎಸಿಎಸ್ ಅವರಿಗೆ ಸಲ್ಲಿಸಿದ್ದ ದೂರಿನಲ್ಲಿ ಆರೋಪಿಸಿತ್ತು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

ಬೆಂಗಳೂರು, ಬೆಳಗಾವಿಯಲ್ಲಿ ರಾಜ್ಯಮಟ್ಟದ ದಾಸ್ತಾನು ಕೇಂದ್ರ • ಸಚಿವರಿಂದ ಪರಿಶೀಲನೆ

# ಕೋವಿಡ್: ಲಸಿಕೆ ವಿತರಣೆಗೆ ಸಜ್ಜು



ಕೋವಿಡ್ ಲಸಿಕೆ ದಾಸ್ತಾನು ಕೇಂದ್ರದಲ್ಲಿ ಡಾ.ಕೆ. ಸುಧಾಕರ್ ಪರಿಶೀಲನೆ ನಡೆಸಿದರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದೇಶದಾದ್ಯಂತ ಜ.16 ರಿಂದ ಕೋವಿಡ್ ಲಸಿಕೆ ಅಭಿಯಾನ ಪ್ರಾರಂಭವಾಗಲಿದೆ ಎಂದು ಕೇಂದ್ರ ಸರ್ಕಾರ ಘೋಷಿಸಿದ್ದು, ರಾಜ್ಯಕ್ಕೆ ಮೊದಲ ಹಂತದಲ್ಲಿ 'ಕೋವಿಶೀಲ್ಡ್' ಲಸಿಕೆ ಬರಲಿದೆ. ಈ ನಿಟ್ಟಿನಲ್ಲಿ ಬೆಂಗಳೂರು ಮತ್ತು ಬೆಳಗಾವಿಯಲ್ಲಿ ರಾಜ್ಯಮಟ್ಟದ ಲಸಿಕೆ ದಾಸ್ತಾನು ಕೇಂದ್ರವನ್ನು ಸಜ್ಜುಗೊಳಿಸಲಾಗಿದೆ.

ದೇಶದಲ್ಲಿ ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆ ವಿತರಣೆಗೆ ಅನುಮತಿ ದೊರೆತಿದೆ. ಮೊದಲ ಕಂತಿನಲ್ಲಿ 13.90 ಲಕ್ಷ ಡೋಸ್ 'ಕೋವಿಶೀಲ್ಡ್' ಲಸಿಕೆ ರಾಜ್ಯಕ್ಕೆ ಸೋಮವಾರ ಬರಲಿದೆ ಎಂದು ಆರೋಗ್ಯ ಇಲಾಖೆಯ ಮೂಲಗಳು ತಿಳಿಸಿವೆ. ಈ ಸಂಬಂಧ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಇಲ್ಲಿನ ಆನಂದರಾವ್ ವೃತ್ತದಲ್ಲಿರುವ ದಾಸ್ತಾನು ಕೇಂದ್ರಕ್ಕೆ ತೆರಳಿ ಭಾನುವಾರ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಲಸಿಕೆ ವಿತರಣೆಗೆ ಎಲ್ಲ ಸಿದ್ಧತೆ ಆಗಿದೆ. ಲಸಿಕೆ ಇಲ್ಲಿಗೆ ಬಂದ ಬಳಿಕ ಜಿಲ್ಲೆಗಳಿಗೆ ಸರಬರಾಜು ಮಾಡಲಾಗುತ್ತದೆ. ಸದ್ಯ, ಹೆಸರು ನೋಂದಣಿ ಆಗಿರುವ 6.30 ಲಕ್ಷ ಆರೋಗ್ಯ ಕಾರ್ಯಕರ್ತರಿಗೆ ಮೊದಲ ಹಂತದಲ್ಲಿ ಲಸಿಕೆ ನೀಡಲಾಗುತ್ತದೆ' ಎಂದರು.

'ಆರೋಗ್ಯ ಕಾರ್ಯಕರ್ತರಿಗೆ ವಿತರಿಸಿದ ಬಳಿಕ 50 ವರ್ಷ ಮೇಲ್ಪಟ್ಟವರು ಹಾಗೂ ಅಪಾಯದಲ್ಲಿರುವವರಿಗೆ ಲಸಿಕೆ ನೀಡಲಾಗುತ್ತದೆ. ಈ ಸಂಬಂಧ ಕೇಂದ್ರ ಆರೋಗ್ಯ ಸಚಿವಾಲಯದ ಮಾರ್ಗಸೂಚಿ ಸೋಮವಾರವೇ ಹೊರಬೀಳಬಹುದು. ಲಸಿಕೆ ವಿತರಣೆ ಕುರಿತು ಯಾವುದೇ ಗೊಂದಲವಿಲ್ಲ. ತಾಲೀಮಿನಲ್ಲಿ ಕಂಡುಬಂದಿದ್ದ ಕೆಲ ತಾಂತ್ರಿಕ ಸಮಸ್ಯೆಗಳನ್ನು ಸರಿಪಡಿಸಿಕೊಳ್ಳಲಾಗುತ್ತದೆ. ಎಲ್ಲರಿಗೂ ಲಸಿಕೆ ನೀಡಬೇಕೋ ಬೇಡವೋ ಎಂಬುದರ ಬಗ್ಗೆ ತಜ್ಞರ ಸಲಹೆ ಪಡೆಯಲಾಗುವುದು. ಎಲ್ಲರಿಗೂ ಲಸಿಕೆ ತಲುಪಿಸಬೇಕಾದಲ್ಲಿ ಸುಮಾರು 2 ತಿಂಗಳು ಬೇಕಾಗಲಿದೆ' ಎಂದರು.

**5 ಪ್ರಾದೇಶಿಕ ಕೇಂದ್ರಗಳು:** 'ಲಸಿಕೆ ಸಂಗ್ರಹಕ್ಕೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಿ ಎರಡು ವಾಕ್-ಇನ್ ಕೂಲರ್‌ಗಳಿವೆ. ಒಂದರಲ್ಲಿ 45 ಲಕ್ಷ ಡೋಸ್ ಸಂಗ್ರಹಿಸಲು ಅವಕಾಶವಿದೆ. ಇದೇ ರೀತಿ ಒಂದು ವಾಕ್-ಇನ್ ಫ್ರೀಜರ್ ಇದೆ. ಅದರ ಸಂಗ್ರಹ ಸಾಮರ್ಥ್ಯ 40 ಲಕ್ಷ ಡೋಸ್‌ಗಳು. ಕೇಂದ್ರ ಇನ್ನೂ ಒಂದು ವಾಕ್-ಇನ್ ಫ್ರೀಜರ್ ನೀಡಲಿದೆ. ಚಿತ್ರದುರ್ಗ, ಕಲಬುರ್ಗಿ, ದಕ್ಷಿಣ ಕನ್ನಡ, ಮೈಸೂರು ಮತ್ತು ಬಾಗಲಕೋಟೆಯಲ್ಲಿ ಪ್ರಾದೇಶಿಕ ದಾಸ್ತಾನು ಕೇಂದ್ರ ಇರಲಿದೆ' ಎಂದು ವಿವರಿಸಿದರು.

'ಜಿಲ್ಲೆಗಳಿಗೆ ಲಸಿಕೆಗಳನ್ನು ಸಾಗಿಸಲು 900 ಲಾಜಿಸ್ಟಿಕ್ ವಾಹನಗಳನ್ನು ಬಳಕೆ ಮಾಡಿಕೊಳ್ಳಲಾಗುತ್ತದೆ. ಈಗಾಗಲೇ 24 ಲಕ್ಷ ಸಿರಿಂಜ್‌ಗಳು ಬಂದಿದ್ದು, ಅವುಗಳನ್ನು ದಾಸ್ತಾನು ಮಾಡಲಾಗಿದೆ' ಎಂದರು.

**ಲಸಿಕೆ ವಿತರಣೆಗೆ ಗುರುತಿಸಲಾದ ಕೇಂದ್ರಗಳು**

| | |
|---|---|
| 02 | ರಾಜ್ಯಮಟ್ಟದ ದಾಸ್ತಾನು ಕೇಂದ್ರಗಳು |
| 05 | ಪ್ರಾದೇಶಿಕ ದಾಸ್ತಾನು ಕೇಂದ್ರಗಳು |
| 30 | ಜಿಲ್ಲಾ ಮಟ್ಟದ ದಾಸ್ತಾನು ಕೇಂದ್ರಗಳು |
| 01 | ಕಾರ್ಪೋರೇಶನ್ ದಾಸ್ತಾನು ಕೇಂದ್ರ |
| 50 | ಬ್ಲಾಕ್ ಮಟ್ಟದ ದಾಸ್ತಾನು ಕೇಂದ್ರಗಳು |
| 2,767 | ಕೋಲ್ಡ್ ಚೈನ್ ಕೇಂದ್ರಗಳು |

## 'ಫಲಾನುಭವಿಗಳನ್ನು ಖಾತರಿಪಡಿಸಿಕೊಳ್ಳಿ'

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕೋವಿಡ್ ಲಸಿಕಾ ಅಭಿಯಾನದ ಸಂದರ್ಭದಲ್ಲಿ, ಗುರುತಿಸಲಾದ ಫಲಾನುಭವಿಗಳಿಗೆ ಮಾತ್ರ ಲಸಿಕೆ ನೀಡಬೇಕು. ಅವರ ಬದಲು ಬೇರೆಯವರು ಲಸಿಕೆ ಪಡೆಯುತ್ತಿಲ್ಲ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರವು ಭಾನುವಾರ ಸೂಚಿಸಿದೆ.

ಲಸಿಕೆಯ ಅಣಕು ಕಾರ್ಯಾಚರಣೆಯ ಸಂದರ್ಭದಲ್ಲಿ ಬಳಸಲಾಗಿದ್ದ 'ಕೋ-ವಿನ್' ಸಾಫ್ಟ್‌ವೇರ್‌ನ ಕಾರ್ಯನಿರ್ವಹಣೆಯ ಬಗ್ಗೆ ಪ್ರತಿಕ್ರಿಯೆ ಪಡೆಯಲು ವಿವಿಧ ರಾಜ್ಯಗಳ ಆರೋಗ್ಯ ಕಾರ್ಯದರ್ಶಿಗಳು, ಲಸಿಕಾ ಅಧಿಕಾರಿಗಳು ಹಾಗೂ ಇತರರ ಜತೆಗೆ ಭಾನುವಾರ ವರ್ಚುವಲ್ ಸಭೆ ಆಯೋಜಿಸಲಾಗಿತ್ತು. ಕೋವಿಡ್-19 ನಿರ್ವಹಣೆ ಕುರಿತು ರಚಿಸಲಾಗಿದ್ದ ತಂತ್ರಜ್ಞಾನ ಹಾಗೂ ದತ್ತಾಂಶ ನಿರ್ವಹಣಾ ಸಮಿತಿಯ ಅಧ್ಯಕ್ಷ ರಾಮ್‌ಸೇವಕ್ ಶರ್ಮಾ ಅವರು ಅಧ್ಯಕ್ಷತೆ ವಹಿಸಿದ್ದರು.

'ಲಸಿಕಾ ಕಾರ್ಯಕ್ರಮದ ದತ್ತಾಂಶಗಳನ್ನು ನಿಗದಿತ ಸಮಯದೊಳಗೆ ದಾಖಲೀಕರಣ ಮಾಡಬೇಕು ಎಂಬ ವಿಚಾರದಲ್ಲಿ ಯಾವುದೇ ಸಡಿಲಿಕೆ ಇರುವುದಿಲ್ಲ. ಅಣಕು ಕಾರ್ಯಾಚರಣೆಯ ಸಂದರ್ಭದಲ್ಲಿ ಕೆಲವು ರಾಜ್ಯಗಳು ಇಂಟರ್‌ನೆಟ್ ಸಂಪರ್ಕದ ಸಮಸ್ಯೆ ಇರುವುದನ್ನು ಉಲ್ಲೇಖಿಸಿದ್ದವು. ಅಂಥ ಪ್ರದೇಶಗಳ ಮಾಹಿತಿಯನ್ನು ಮಾತ್ರ ತಡವಾಗಿ ದಾಖಲಿಸಬಹುದು ಎಂದು ಶರ್ಮಾ ಸ್ಪಷ್ಟಪಡಿಸಿದರು.

'ಲಸಿಕೆ ಪಡೆದವರ ಮೇಲೆ ಮುಂದೆಯೂ ನಿಗಾ ಇರಿಸಬೇಕಾಗುವುದರಿಂದ ಅವರ ವಿರಗಳನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸಬೇಕಾಗುತ್ತದೆ. ಆದ್ದರಿಂದ, ಫಲಾನುಭವಿಗಳನ್ನು ಅನುಮಾನಕ್ಕೆ ಎಡೆ ಇಲ್ಲದ ರೀತಿಯಲ್ಲಿ ಗುರುತಿಸುವುದು ಅಗತ್ಯ. ಫಲಾನುಭವಿಗಳ ಜತೆ ಮುಂದಿನ ಸಂವಹನವನ್ನು ಎಸ್‌ಎಂಎಸ್ ಮೂಲಕ ಮಾಡಬೇಕಾಗುವುದರಿಂದ, ಆಧಾರ್ ಜತೆಗೆ ಜೋಡಿಸಲಾಗಿರುವ ಅವರ ಮೊಬೈಲ್ ಸಂಖ್ಯೆಯನ್ನು ದಾಖಲಿಸಿಕೊಳ್ಳಬೇಕು' ಎಂದು ಅವರು ರಾಜ್ಯದ ಪ್ರತಿನಿಧಿಗಳಿಗೆ ಸೂಚಿಸಿದರು.

ಎರಡು ಕೋವಿಡ್ ಲಸಿಕೆಗಳ ತುರ್ತು ಬಳಕೆಗೆ ಸರ್ಕಾರ ಇತ್ತೀಚೆಗೆ ಅನುಮತಿ ನೀಡಿದ್ದು, ಜ.16ರಿಂದ ದೇಶದಲ್ಲಿ ಲಸಿಕಾ ಕಾರ್ಯಕ್ರಮ ಆರಂಭವಾಗಲಿದೆ. ಮೊದಲ ಹಂತದಲ್ಲಿ ಸುಮಾರು ಮೂರು ಕೋಟಿ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡಲಾಗುತ್ತದೆ. ಜುಲೈ ವೇಳೆಗೆ 30 ಕೋಟಿ ಜನರಿಗೆ ಲಸಿಕೆ ನೀಡುವ ಗುರಿಯನ್ನು ಹೊಂದಲಾಗಿದೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

## ವಲಸಿಗರ ಕೈಗಳಿಗೆ ಮುದ್ರೆ, ಸಿಮ್ ಕಾರ್ಡ್ ವಿತರಣೆ

# ಬ್ರಿಟನ್‌ನಿಂದ ಬಂದಿಳಿದ 273 ಪ್ರಯಾಣಿಕರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಭಾನುವಾರ ಬೆಳಿಗ್ಗೆ 4 ಗಂಟೆಗೆ ಬ್ರಿಟನ್‌ನಿಂದ ಮೊದಲ ವಿಮಾನ ಬಂದಿದ್ದು, ಇದರಲ್ಲಿ 32 ಮಕ್ಕಳು ಸೇರಿದಂತೆ 273 ಪ್ರಯಾಣಿಕರು ಬಂದಿದ್ದಾರೆ.

ಬ್ರಿಟನ್‌ನಲ್ಲಿ ರೂಪಾಂತರ ಕೊರೊನಾ ವೈರಾಣು ಕಾಣಿಸಿಕೊಂಡ ಕಾರಣ ಡಿ.23ರಿಂದ ವಿಮಾನಯಾನವನ್ನು ಕೇಂದ್ರ ಸರ್ಕಾರ ಸ್ಥಗಿತಗೊಳಿಸಿತ್ತು. ಇದೀಗ ಮತ್ತೆ ವಿಮಾನಗಳ ಹಾರಾಟಕ್ಕೆ ಅವಕಾಶ ನೀಡಲಾಗಿದೆ. ವಿಮಾನದಲ್ಲಿ ಬಂದವರಲ್ಲಿ 196 ಪುರುಷರು ಹಾಗೂ 95 ಮಹಿಳೆಯರು. ಇವರ ಜತೆಗೆ ವಿಮಾನದಲ್ಲಿನ 16 ಸಿಬ್ಬಂದಿಯ ಗಂಟಲಿನ ದ್ರವದ ಮಾದರಿಯನ್ನೂ ವಿಮಾನ ನಿಲ್ದಾಣದಲ್ಲಿ ಸಂಗ್ರಹಿಸಿ, ಆರ್‌ಟಿ–ಪಿಸಿಆರ್ ಪರೀಕ್ಷೆ ನಡೆಸಲಾಗಿದೆ.

ಕೆಲ ದಿನಗಳ ಹಿಂದೆ ಬ್ರಿಟನ್‌ನಿಂದ ಬಂದವರಲ್ಲಿ ಕೆಲವರು 14 ದಿನಗಳ ಮನೆ ಕ್ವಾರಂಟೈನ್ ನಿಯಮ ಉಲ್ಲಂಘಿಸಿ, ವಿವಿಧೆಡೆ ಪ್ರಯಾಣಿಸಿದ್ದರು. ಇದರಿಂದ ಆರೋಗ್ಯ ಸಿಬ್ಬಂದಿಗೆ ಅವರ ಮೇಲೆ ನಿಗಾ ಇಡುವುದು ಸವಾಲಾಗಿತ್ತು. ಈಗ ಬ್ರಿಟನ್‌ನಿಂದ ಬಂದ ಎಲ್ಲ ಪ್ರಯಾಣಿಕರಿಗೆ 14 ದಿನಗಳ ಮನೆ ಕ್ವಾರಂಟೈನ್‌ನ ಮುದ್ರೆ ಹಾಕಿ, ಕಳುಹಿಸಲಾಗಿದೆ. ಅದೇ ರೀತಿ, ಈ ಹಿಂದೆ ಕೆಲ ಪ್ರಯಾಣಿಕರು ಬ್ರಿಟನ್‌ನ ದೂರವಾಣಿ ಸಂಖ್ಯೆ ಹಾಗೂ ತಪ್ಪು ವಿಳಾಸ ನೀಡಿದ್ದರು. ಇದರಿಂದಾಗಿ 70ಕ್ಕೂ ಅಧಿಕ ಮಂದಿಯ ಪತ್ತೆ ಸಾಧ್ಯವಾಗಿರಲಿಲ್ಲ. ಹೀಗಾಗಿ ಇಲ್ಲಿನ ಸ್ಥಳೀಯ ದೂರವಾಣಿ ಸಂಖ್ಯೆ ಹೊಂದಿರದವರಿಗೆ ಗುರುತಿನ ಚೀಟಿಯ ಪ್ರತಿಗಳನ್ನು ಪಡೆದು, ಸಿಮ್ ಕಾರ್ಡ್ ನೀಡಲಾಗಿದೆ.

‘ಕಡ್ಡಾಯವಾಗಿ ಮುಂದಿನ 14 ದಿನಗಳು ನಿಗದಿತ ಸ್ಥಳದಲ್ಲಿಯೇ ವಾಸವಿರಬೇಕು. ನೀಡಲಾದ ದೂರವಾಣಿ ಸಂಖ್ಯೆ ಎಲ್ಲ ಅವಧಿಯಲ್ಲಿಯೂ ಸಕ್ರಿಯವಾಗಿರಬೇಕು. ಈ ಅವಧಿಯಲ್ಲಿ ಆರೋಗ್ಯದಲ್ಲಿ ಯಾವುದೇ ರೀತಿಯ ವ್ಯತ್ಯಾಸ ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿದಲ್ಲಿ ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ವಿಮಾನ ನಿಲ್ದಾಣದ ಸಿಬ್ಬಂದಿ ತಿಳಿಸಿದರು.

**ವರದಿಗಾಗಿ ಕಾದ ವಲಸಿಗರು:** ಸರ್ಕಾರದ ಮಾರ್ಗಸೂಚಿ ಅನುಸಾರ ಬ್ರಿಟನ್‌ನಿಂದ ಬಂದವರು ಕೋವಿಡ್ ಪರೀಕ್ಷೆಯ ನಕಾರಾತ್ಮಕ ವರದಿ ತಂದಿದ್ದರೂ ಎಲ್ಲರನ್ನೂ ಆರ್‌ಟಿ–ಪಿಸಿಆರ್ ಪರೀಕ್ಷೆಗೆ ಒಳಪಡಿಸಲಾಯಿತು. ವಿಮಾನ ನಿಲ್ದಾಣ ಪ್ರವೇಶಿಸುತ್ತಿದ್ದಂತೆಯೇ ಥರ್ಮಲ್ ಸ್ಕ್ಯಾನರ್ ಹಾಗೂ ಪಲ್ಸ್ ಆಕ್ಸಿಮೀಟರ್ ನೆರವಿನಿಂದ ತಪಾಸಣೆ ನಡೆಸಲಾಯಿತು. ಆರ್‌ಟಿ–ಪಿಸಿಆರ್ ಪರೀಕ್ಷೆಗೆ ಮಾದರಿಗಳನ್ನು ಸಂಗ್ರಹಿಸಿ, ಅಲ್ಲಿನ ಪ್ರಯೋಗಾಲಯಕ್ಕೆ ರವಾನಿಸಲಾಯಿತು. ಎಲ್ಲ ದಾಖಲಾತಿಗಳನ್ನು ಪರಿಶೀಲಿಸಿದ ಸಿಬ್ಬಂದಿ, ವಿಶ್ರಾಂತಿ ಕೊಠಡಿಯಲ್ಲಿ ವರದಿಗೆ ಕಾಯುವಂತೆ ಸೂಚಿಸಿದರು.

ಕೋವಿಡ್ ಪರೀಕ್ಷಾ ವರದಿ ಬರಲು 4ರಿಂದ 5 ಗಂಟೆಗಳು ತಗುಲಿದ ಕಾರಣ ಕೆಲ ಪ್ರಯಾಣಿಕರು ಸಿಬ್ಬಂದಿಯ ಮೇಲೆ ಆಕ್ರೋಶ ವ್ಯಕ್ತಪಡಿಸಿದರು. ಕೆಲವರು ಪರೀಕ್ಷೆ ಫಲಿತಾಂಶ ಬರುವ ಮುನ್ನವೇ ತೆರಳಲು ಮುಂದಾದರೂ ಸಿಬ್ಬಂದಿ ಅವಕಾಶ ನೀಡಲಿಲ್ಲ. ಸೋಂಕಿತರಾಗಿಲ್ಲ ಎನ್ನುವುದು ಪರೀಕ್ಷಾ ವರದಿಯಿಂದ ದೃಢಪಟ್ಟ ಬಳಿಕ ಖಾಸಗಿ ವಾಹನಗಳಲ್ಲಿ ತೆರಳಲು ಅವಕಾಶ ನೀಡಲಾಯಿತು.



ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬ್ರಿಟನ್‌ನಿಂದ ಬಂದವರನ್ನು ತಪಾಸಣೆ ಮಾಡಲಾಯಿತು.

### ನಗರದ ಕೋವಿಡ್ ಪ್ರಕರಣಗಳು

**3,92,581** ಒಟ್ಟು ಸೋಂಕಿತರು




**ಭಾನುವಾರದ ಏರಿಕೆ**

**453** ದೃಢಪಟ್ಟ ಪ್ರಕರಣ

**261** ಗುಣಮುಖ

**0** ಸಾವು

### ನಾಲ್ವರು ನಿರಾಳ

ಬ್ರಿಟನ್‌ನಿಂದ ಬಂದವರಲ್ಲಿ ನಾಲ್ವರ ಮಾದರಿಯಲ್ಲಿ ಸೋಂಕು ಶಂಕೆ ವ್ಯಕ್ತವಾಗಿತ್ತು. ಪೂಲ್ ಮಾದರಿಯಲ್ಲಿ ನಡೆಸಿದ ಕೋವಿಡ್ ಆರ್‌ಟಿ–ಪಿಸಿಆರ್ ಪರೀಕ್ಷೆಯಲ್ಲಿ ಕೊರೊನಾ ವೈರಾಣು ಕಾಣಿಸಿಕೊಂಡಿತ್ತು. ಹಾಗಾಗಿ ನಾಲ್ಕು ಮಾದರಿಗಳನ್ನೂ ಪ್ರತ್ಯೇಕವಾಗಿ ಪರೀಕ್ಷೆ ನಡೆಸಲು ನಿಮ್ಹಾನ್ಸ್ ಪ್ರಯೋಗಾಲಯಕ್ಕೆ ಕಳುಹಿಸಿ, ಸೋಂಕು ಶಂಕಿತರನ್ನು ಸಾಂಸ್ಥಿಕ ಕ್ವಾರಂಟೈನ್‌ಗೆ ಒಳಪಡಿಸಲಾಗಿತ್ತು. ಆದರೆ, ಅಲ್ಲಿ ನಡೆಸಲಾದ ಪರೀಕ್ಷೆಯಲ್ಲಿ ಯಾರಿಗೂ ಸೋಂಕು ತಗುಲಿಲ್ಲ ಎನ್ನುವುದು ದೃಢಪಟ್ಟಿದೆ. ಹೀಗಾಗಿ ಸಾಂಸ್ಥಿಕ ಕ್ವಾರಂಟೈನ್‌ಗೆ ಒಳಗಾದವರನ್ನು ಮನೆಗೆ ಕಳುಹಿಸಲಾಗಿದೆ.

‘ಬ್ರಿಟನ್‌ನಿಂದ ಬಂದವರಲ್ಲಿ ಸೋಂಕು ದೃಢಪಟ್ಟಲ್ಲಿ ಅವರನ್ನು ಆಸ್ಪತ್ರೆಗಳಿಗೆ ದಾಖಲಿಸಿ, ಅವರೊಂದಿಗೆ ವಿಮಾನ ಪ್ರಯಾಣದಲ್ಲಿ ನೇರ ಹಾಗೂ ಪರೋಕ್ಷ ಸಂಪರ್ಕ ಹೊಂದಿದ್ದವರನ್ನು ಸಾಂಸ್ಥಿಕ ಕ್ವಾರಂಟೈನ್‌ಗೆ ಒಳಪಡಿಸಲಾಗುವುದು’ ಎಂದು ಆರೋಗ್ಯ ಇಲಾಖೆ ಅಧಿಕಾರಿ ತಿಳಿಸಿದರು.

ಕನ್ನಡಪ್ರಭ

# ಸಿಎಂಗಳ ಜತೆ ಇಂದು ಮೋದಿ ವ್ಯಾಕ್ಸಿನ್ ಸಭೆ

## ಮುಖ್ಯಮಂತ್ರಿ ಯಡಿಯೂರಪ್ಪ ಭಾಗಿ ಜ.16ರಿಂದ ದೇಶಾದ್ಯಂತ ಲಸಿಕೆ ವಿತರಣೆ

• **ಕನ್ನಡಪ್ರಭ ವಾರ್ತೆ**
ನವದೆಹಲಿ/ಬೆಂಗಳೂರು

ಕೋವಿಡ್-19 ಲಸಿಕೆ ಹಂಚಿಕೆಗೆ ಜ.16ರ ಮುಹೂರ್ತ ನಿಗದಿಯಾಗಿರುವ ಹಿನ್ನೆಲೆಯಲ್ಲಿ, ಈ ಕುರಿತಂತೆ ಪ್ರಧಾನಿ ನರೇಂದ್ರ ಮೋದಿ ಅವರು ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಸೋಮವಾರ ಸಿದ್ಧತಾ ಸಭೆ ನಡೆಸಲಿದ್ದಾರೆ. ಸಭೆಯಲ್ಲಿ ಕರ್ನಾಟಕದ ಸಿಎಂ ಬಿ.ಎಸ್. ಯಡಿಯೂರಪ್ಪ ಭಾಗಿಯಾಗಲಿದ್ದಾರೆ.



ಸಂಜೆ 4ಕ್ಕೆ ವಿಡಿಯೋ ಸಂವಾದ

ಸೋಮವಾರ ಸಂಜೆ 4 ಗಂಟೆಗೆ ವಿಡಿಯೋ ಸಂವಾದದ ಮೂಲಕ ಈ ಸಭೆ ಆರಂಭವಾಗಲಿದೆ. ಈ ಸಂದರ್ಭದಲ್ಲಿ ಕರ್ನಾಟಕ ಸೇರಿ ವಿವಿಧ ರಾಜ್ಯಗಳ ಕೋವಿಡ್ ಲಸಿಕೆ ವಿತರಣೆಯ ಬಗ್ಗೆ ಕೈಗೊಂಡಿರುವ ಕ್ರಮಗಳು, ಸಿದ್ಧತೆಗಳ ಬಗ್ಗೆ ಮುಖ್ಯಮಂತ್ರಿಗಳು ಪ್ರಧಾನಿ ಅವರಿಗೆ ವಿವರಿಸುವ ಸಾಧ್ಯತೆ ಇದೆ. ಹಾಗೆಯೇ ಮೋದಿ ಅವರು ಈ ಅಭಿಯಾನವನ್ನು ಯಶಸ್ವಿಗೊಳಿಸಲು ಅಗತ್ಯ ಸಲಹೆ ಸೂಚನೆಗಳನ್ನು ರಾಜ್ಯಗಳಿಗೆ ನೀಡುವ ನಿರೀಕ್ಷೆಯಿದೆ.

ಭಾರತದಲ್ಲಿ ಪುಣೆಯ ಸೀರಂ ಇನ್‌ಸ್ಟಿಟ್ಯೂಟ್‌ನ 'ಆಕ್ಸ್‌ಫರ್ಡ್ ಕೋವಿಶೀಲ್ಡ್' ಲಸಿಕೆ ಹಾಗೂ ಹೈದರಾಬಾದ್ ಭಾರತ್ ಬಯೋಟೆಕ್‌ನ 'ಕೋವ್ಯಾಕ್ಸಿನ್' ಲಸಿಕೆಗಳು ತುರ್ತು ಬಳಕೆಗಾಗಿ ಅನುಮೋದನೆ ಪಡೆದಿವೆ. ಮೊದಲ ಹಂತದಲ್ಲಿ ಕೊರೋನಾ ವಿರುದ್ಧ ಹೋರಾಡಿರುವ 3 ಕೋಟಿ ವೈದ್ಯಕೀಯ ಸಿಬ್ಬಂದಿ, ಇತರ ಮುಂಚೂಣಿ ಸಿಬ್ಬಂದಿಗೆ ಲಸಿಕೆ ನೀಡುವ ಉದ್ದೇಶ ಹೊಂದಲಾಗಿದೆ.

ಕೊರೋನಾ ನಿಯಂತ್ರಣದ ಬಗ್ಗೆ ಈಗಾಗಲೇ ಹಲವು ಸುತ್ತಿನಲ್ಲಿ ಸಿಎಂಗಳ ಜೊತೆ ಮೋದಿ ಸಭೆ ನಡೆಸಿದ್ದರು. ಈ ಹಿಂದಿನದ್ದೆಲ್ಲಾ ಲಸಿಕೆಗೆ ಅನುಮತಿ ನೀಡುವ ಮುನ್ನಾ ನಡೆದ ಸಭೆಗಳು. ಆದರೆ ಈಗಿನದ್ದು 2 ಲಸಿಕೆಯ ತುರ್ತು ಬಳಕೆಗೆ ಅನುಮತಿ ಸಿಕ್ಕ ಬಳಿಕದ ಮೊದಲ ಸಭೆ. ಹೀಗಾಗಿಯೇ ಈ ಸಭೆ ಮಹತ್ವದ್ದಾಗಿದೆ.

↘ 7

### ಭಾರತದ ಬಳಿ 20 ಲಕ್ಷ ಲಸಿಕೆ ಕೇಳಿದ ಬ್ರೆಜಿಲ್

**ನವದೆಹಲಿ:** ಭಾರತದಲ್ಲಿ ಕೊರೋನಾ ಲಸಿಕೆ ವಿತರಣೆಗೆ ದಿನಗಣನೆ ಆರಂಭವಾಗಿರುವ ಬೆನ್ನಲ್ಲೇ, ಸೀರಂ ಇನ್‌ಸ್ಟಿಟ್ಯೂಟ್ ಅಭಿವೃದ್ಧಿಪಡಿಸಿರುವ 'ಕೋವಿಶೀಲ್ಡ್' ಲಸಿಕೆಯ 20 ಲಕ್ಷ ಡೋಸ್‌ಗಳನ್ನು ತುರ್ತಾಗಿ ನೀಡುವಂತೆ ಬ್ರೆಜಿಲ್ ಅಧ್ಯಕ್ಷ ಜೈರ್ ಬೊಲ್ಸೊನಾರೋ ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದಿದ್ದಾರೆ. 'ಭಾರತದಲ್ಲಿ ಕೊರೋನಾ ಲಸಿಕೆ ವಿತರಣೆಗೆ ತೊಂದರೆ ಆಗದಂತೆ ನೋಡಿಕೊಂಡು ನಮಗೂ ಕೋವಿಶೀಲ್ಡ್ 20 ಲಕ್ಷ ಡೋಸ್ ನೀಡಿ' ಎಂದು ಮನವಿ ಮಾಡಿದ್ದಾರೆ.

## ಮೋದಿ ವ್ಯಾಕ್ಸಿನ್ ಸಭೆ

↙ ಮೊದಲ ಪುಟದಿಂದ

**ಕೋ ವಿನ್ ಆ್ಯಪ್ ಪರಾಮರ್ಶೆ:** ಈ ನಡುವೆ ಕೇಂದ್ರ ಆರೋಗ್ಯ ಸಚಿವಾಲಯವು ಭಾನುವಾರ ವಿವಿಧ ರಾಜ್ಯಗಳ ಆರೋಗ್ಯ ಅಧಿಕಾರಿಗಳ ಜತೆ ಚರ್ಚೆ ನಡೆಸಿತು. ಲಸಿಕೆ ಪಡೆಯುವವರು ಹೆಸರು ನೋಂದಾಯಿಸಿಕೊಳ್ಳಬೇಕಾದ ಕೋ-ವಿನ್ ಆ್ಯಪ್ ಕುರಿತು ಇತ್ತೀಚಿನ ಡ್ರೈ-ರನ್‌ನಲ್ಲಿ ವ್ಯಕ್ತವಾದ ಪ್ರತಿಕ್ರಿಯೆನ್ನು ಸಭೆಯಲ್ಲಿ ಆಲಿಸಲಾಯಿತು. ಕೋ-ವಿನ್ ಆ್ಯಪ್/ವೆಬ್‌ಗೆ ಫಲಾನುಭವಿಯ ಆಧಾರ್ ಸಂಖ್ಯೆ ಸಂಯೋಜಿಸುವ ಬಗ್ಗೆ ಚರ್ಚಿಸಲಾಯಿತು. ಈ ಮೂಲಕ ಒಬ್ಬನೇ ವ್ಯಕ್ತಿ ಎರಡೆರಡು ಬಾರಿ ಲಸಿಕೆ ಪಡೆಯುವುದನ್ನು ತಪ್ಪಿಸುವುದು ಇದರ ಉದ್ದೇಶವಾಗಿದೆ. 'ಕೊರೋನಾ ಲಸಿಕೆ ಪಡೆಯಲು ಈ ವೆಬ್/ಆ್ಯಪ್ ವೇದಿಕೆ ಆಗಲಿದ್ದು, ನೋಂದಣಿ ಮಾಡಿಸಿಕೊಂಡವರಿಗೆ ಯಾವುದೇ ಸಮಯ ಹಾಗೂ ಸ್ಥಳದಲ್ಲಿ ಲಸಿಕೆ ಲಭ್ಯವಿರಲಿದೆ' ಎಂದು ಆರೋಗ್ಯ ಸಚಿವಾಲಯ ಹೇಳಿದೆ.

ಕನ್ನಡಪ್ರಭ

# ಬ್ರಿಟನ್ನಿಂದ ಬಂದ ಯಾರಿಗೂ ಸೋಂಕಿಲ್ಲ

## ನಿನ್ನೆ ಮುಂಜಾನೆ ಯು.ಕೆ.ಯಿಂದ ನಗರಕ್ಕೆ ಆಗಮಿಸಿದ 289 ಮಂದಿಗೆ ಆರ್‌ಟಿ–ಪಿಸಿಆರ್ ಪೂಲ್ ಟೆಸ್ಟ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬ್ರಿಟನ್‌ನಿಂದ ಭಾನುವಾರ ಮುಂಜಾನೆ ಬೆಂಗಳೂರು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ 289 ಮಂದಿಗೆ ಕೊರೋನಾ ಪರೀಕ್ಷೆ ನಡೆಸಿದ್ದು, ಯಾರಿಗೂ ಕೊರೋನಾ ಸೋಂಕು ದೃಢಪಟ್ಟಿಲ್ಲ. ಹೀಗಾಗಿ ಎಲ್ಲರನ್ನೂ ಹೋಂ ಕ್ವಾರಂಟೈನ್‌ಗೆ ಕಳುಹಿಸಲಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಮೊದಲ ಹಂತದ ಪರೀಕ್ಷೆ ವೇಳೆ ನಾಲ್ಕು ಮಂದಿಯ ಪೂಲ್ ಪರೀಕ್ಷೆಯ ಮಾದರಿಯು ಕೊರೋನಾ ಪಾಸಿಟಿವ್ ಬಂದಿತ್ತು. ಬಳಿಕ ನಾಲ್ಕೂ ಮಂದಿಗೂ ಪ್ರತ್ಯೇಕವಾಗಿ ಪರೀಕ್ಷೆ ನಡೆಸಲಾಗಿತ್ತು. ಈ ವೇಳೆ ಮೊದಲ ಪೂಲ್ ಪರೀಕ್ಷೆಯಲ್ಲಿ ತಪ್ಪು ಫಲಿತಾಂಶ ಬಂದಿದೆ. ನಾಲ್ಕೂ ಮಂದಿಗೂ ಪ್ರತ್ಯೇಕವಾಗಿ ಆರ್‌ಟಿ-ಪಿಸಿಆರ್ ಪರೀಕ್ಷೆ ನಡೆಸಿದ್ದು, ಯಾರಿಗೂ ಕೊರೋನಾ ಸೋಂಕು ತಗುಲಿಲ್ಲ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

**ವಿಮಾನ ನಿಲ್ದಾಣದಲ್ಲಿ ಕಟ್ಟುನಿಟ್ಟಿನ ಎಚ್ಚರಿಕೆ:** ಲಂಡನ್‌ನಿಂದ ಪ್ರಯಾಣಿಕರು ಆಗಮಿಸುತ್ತಿದ್ದ ಹಿನ್ನೆಲೆಯಲ್ಲಿ ಬ್ರಿಟನ್‌ನ ರೂಪಾಂತರಿ ಕೊರೋನಾ ವೈರಸ್ ಪಾಸಿಟಿವ್ ಉಳ್ಳವರನ್ನು ಪತ್ತೆ ಹಚ್ಚಿ ಪ್ರಾರಂಭದಲ್ಲೇ ಪ್ರತ್ಯೇಕಗೊಳಿಸಲು ಎಲ್ಲಾ ರೀತಿಯಲ್ಲೂ ವ್ಯವಸ್ಥೆ ಮಾಡಲಾಗಿತ್ತು. ವಿಮಾನ ನಿಲ್ದಾಣದಲ್ಲೇ ಆರ್‌ಟಿ-ಪಿಸಿಆರ್ ಪರೀಕ್ಷೆ, ಕಾಯಲು ಸಾಮಾಜಿಕ ಅಂತರದೊಂದಿಗೆ ಆಸನದ ವ್ಯವಸ್ಥೆ, ಸಂಪೂರ್ಣ ಪಿಪಿಇ ಕಿಟ್ ಹಾಗೂ ಸುರಕ್ಷತಾ ಕ್ರಮಗಳೊಂದಿಗೆ 150 ಮಂದಿ ಪರೀಕ್ಷಾ ಸಿಬ್ಬಂದಿ ಸಜ್ಜಾಗಿದ್ದರು. ಲಂಡನ್‌ನಿಂದ ಬೆಳಗ್ಗೆ 4 ಗಂಟೆಗೆ 289 ಮಂದಿ ಆಗಮಿಸುತ್ತಲೇ ಎಲ್ಲರನ್ನೂ ಪರೀಕ್ಷಾ ಸ್ಥಳಕ್ಕೆ ಕರೆತರಲಾಯಿತು.

145 ಪುರುಷರು, 96 ಮಹಿಳೆಯರು, 10 ವರ್ಷದೊಳಗಿನ 32 ಮಕ್ಕಳು ಹಾಗೂ 16 ಜನ ವಿಮಾನ ಸಿಬ್ಬಂದಿ ಸೇರಿದಂತೆ ಒಟ್ಟು 289 ಜನರಿಗೆ ಪರೀಕ್ಷೆ ನಡೆಸಲಾಯಿತು. ಪ್ರತಿ ನಾಲ್ಕು ಅಥವಾ ಐದು ಮಂದಿಯ ಗಂಟಲು ಹಾಗೂ ಮೂಗಿನ ದ್ರವವನ್ನು ಮಿಶ್ರ ಮಾಡಿ ಆರ್‌ಟಿ-ಪಿಸಿಆರ್ ಪೂಲ್ ಪರೀಕ್ಷೆ ನಡೆಸಲಾಗಿದೆ. ಈ ವೇಳೆ ಪೂಲ್ ಪರೀಕ್ಷೆಯಲ್ಲಿ ಪಾಸಿಟಿವ್ ಬಂದರೆ ಮಾತ್ರ ಆ ಪೂಲ್‌ನಲ್ಲಿನ ಅಷ್ಟೂ ಮಂದಿಯನ್ನೂ ಮತ್ತೊಮ್ಮೆ ಪ್ರತ್ಯೇಕವಾಗಿ ಆರ್‌ಟಿ-ಪಿಸಿಆರ್ ಪರೀಕ್ಷೆ ಮಾಡಲು ಆರೋಗ್ಯ ಇಲಾಖೆ ಮಾರ್ಗಸೂಚಿ ನೀಡಿತ್ತು.



ನಗರ ಏರ್‌ಪೋರ್ಟ್‌ನಲ್ಲಿ ಬ್ರಿಟನ್‌ನಿಂದ ಆಗಮಿಸಿದ ಪ್ರಯಾಣಿಕರಿಗೆ ಕೊರೋನಾ ಪರೀಕ್ಷೆ.

### ಪರೀಕ್ಷೆಯಲ್ಲಿ ಯಡವಟ್ಟು, ಕೆಲ ಕಾಲ ಆತಂಕ ಸೃಷ್ಟಿ

**ಯು.**ಕೆ.ಯಿಂದ ಆಗಮಿಸಿದ ಪ್ರಯಾಣಿಕರ ಪೈಕಿ ನಾಲ್ಕು ಮಂದಿಯ ಪೂಲ್ ಪರೀಕ್ಷೆಯಲ್ಲಿ ಕೊರೋನಾ ಸೋಂಕು ದೃಢಪಟ್ಟಿತ್ತು. ಆರ್‌ಟಿ-ಪಿಸಿಆರ್ ಪೂಲ್ ಪರೀಕ್ಷೆಯಾಗಿದ್ದರಿಂದ ನಾಲ್ಕು ಮಂದಿಯಲ್ಲಿ ಕನಿಷ್ಠ ಒಬ್ಬರಿಗಾದರೂ ಸೋಂಕು ಇದ್ದರೆ ಮಾತ್ರ ಪೂಲ್ ಪರೀಕ್ಷೆಯಲ್ಲಿ ಸೋಂಕು ಪಾಸಿಟಿವ್ ಬರುತ್ತಿತ್ತು. ಆದರೆ, ನಾಲ್ಕು ಮಂದಿಗೆ ಪ್ರತ್ಯೇಕವಾಗಿ ನಡೆಸಿದ ಆರ್‌ಟಿ-ಪಿಸಿಆರ್ ಪರೀಕ್ಷೆಯಲ್ಲಿ ನಾಲ್ಕೂ ಮಂದಿಗೆ ನೆಗೆಟಿವ್ ಬಂದಿದೆ. ಈ ಬಗ್ಗೆ ಆರೋಗ್ಯ ಇಲಾಖೆಯು ಪೂಲ್ ಪರೀಕ್ಷೆ ತಪ್ಪಾಗಿದ್ದು, ತಪ್ಪು ಪರೀಕ್ಷೆಯಿಂದ ಇಂತಹ ಫಲಿತಾಂಶ ಬಂದಿದೆ ಎಂದು ಹೇಳಿದೆ.



**ಯು.ಕೆಯಿಂದ ಆಗಮಿಸಿದ 289 ಮಂದಿಯನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ನಾಲ್ಕು ಮಂದಿಯ ಒಂದು ಪೂಲ್‌ನಲ್ಲಿ ಕೊರೋನಾ ಸೋಂಕು ದೃಢಪಟ್ಟಿದೆ. ಹೀಗಾಗಿ ಯಾರು ಆ ರೋಗಿ ಎಂಬುದನ್ನು ದೃಢಪಡಿಸಿಕೊಳ್ಳಲು ಪ್ರತ್ಯೇಕ ಪರೀಕ್ಷೆ ನಡೆಸಿದ್ದು, ಈ ವೇಳೆ ಎಲ್ಲರ ಫಲಿತಾಂಶವೂ ನೆಗೆಟಿವ್ ಬಂದಿದೆ.**

• **ಡಾ| ಕೆ.ಸುಧಾಕರ್** ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು



### ಕ್ವಾರಂಟೈನ್ ಸೀಲ್

**ದೇ**ವನಹಳ್ಳಿ ತಾಲೂಕು ವೈದ್ಯಾಧಿಕಾರಿ ಸಂಜಯ್, ಯು.ಕೆ.ಯಿಂದ ಬಂದ ಪ್ರಯಾಣಿಕರನ್ನು 150 ಮಂದಿ ಸಿಬ್ಬಂದಿ ಸಹಾಯದಿಂದ ಪರೀಕ್ಷೆ ನಡೆಸಲಾಗಿದೆ. ಎಲ್ಲರಿಗೂ ಕಡ್ಡಾಯವಾಗಿ ಆರ್‌ಟಿ-ಪಿಸಿಆರ್ ಪರೀಕ್ಷೆ ನಡೆಸಿ ನೆಗೆಟಿವ್ ಬಂದವರಿಗೆ ಯ.ಕೆ.ಪ್ಯಾಸೆಂಜರ್ ಎಂಬುದಾಗಿ ಕ್ವಾರಂಟೈನ್ ಸೀಲ್ ಹಾಕಿ ಕಳುಹಿಸಿದ್ದೇವೆ ಎಂದು ಹೇಳಿದರು.

ಕನ್ನಡಪ್ರಭ

# ಪರೀಕ್ಷೆ ವಿಳಂಬದಿಂದ ಹೈರಾಣಾದ ಪ್ರಯಾಣಿಕರು

ಸುಮಾರು ಗಂಟೆಗಳ ಪ್ರಯಾಣದಿಂದ ದಣಿದಿದ್ದ ಪ್ರಯಾಣಿಕರು ವಿಮಾನ ನಿಲ್ದಾಣದಲ್ಲಿ ಪರೀಕ್ಷೆ ಹಾಗೂ ಫಲಿತಾಂಶಕ್ಕಾಗಿ ಕಾದು ಹೈರಾಣಾದರು. ಪರೀಕ್ಷಾ ಪ್ರಕ್ರಿಯೆಯೇ ಬರೋಬ್ಬರಿ 5 ಗಂಟೆ ಅವಧಿ ತೆಗೆದುಕೊಂಡಿತು. ಇನ್ನು ಫಲಿತಾಂಶಕ್ಕಾಗಿ ಮಾದರಿಗಳನ್ನು ನಿಮ್ಹಾನ್ಸ್ ಪ್ರಯೋಗಾಲಯಕ್ಕೆ ಕಳುಹಿಸಿದ್ದರಿಂದವರದಿ ಬರುವವರೆಗೂಪ್ರಯಾಣಿಕರು ಕಾಯಬೇಕಾಯಿತು. ಇದರ ನಡುವೆ ಕೆಲವರು ಆಸನಗಳಲ್ಲೇನಿದ್ದೆಗೆಜಾರಿದ್ದರು. ಕೆಲವರುಪರೀಕ್ಷಾ ಸಿಬ್ಬಂದಿಯೊಂದಿಗೆ ವಾಗ್ವಾದವನ್ನೂ ನಡೆಸಿದರು.



ಕನ್ನಡಪ್ರಭ

# ವಾರದಲ್ಲಿ 2641 ಮಂದಿಗೆ ಸೋಂಕು

## ನಗರದಲ್ಲಿ 7 ದಿನದಲ್ಲಿ 652 ಮಂದಿ ಕೋವಿಡ್ ಆಸ್ಪತ್ರೆಗೆ ದಾಖಲು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ಭಾನುವಾರ 453 ಹೊಸ ಕೊರೋನಾ ಸೋಂಕು ಪ್ರಕರಣ ದಾಖಲಾಗಿದ್ದು, 261 ಮಂದಿ ಗುಣಮುಖರಾಗಿದ್ದಾರೆ. ಈ ಮೂಲಕ ಒಟ್ಟು ಸೋಂಕಿತರ ಸಂಖ್ಯೆ 3,92,581 ಏರಿಕೆಯಾಗಿದ್ದು, ಗುಣಮುಖರಸಂಖ್ಯೆ 3,82,166 ತಲುಪಿದೆ. ನಗರದಲ್ಲಿ ಇನ್ನೂ 6,068 ಸಕ್ರಿಯ ಸೋಂಕು ಪ್ರಕರಣಗಳಿದ್ದು, ಈಪೈಕಿ85ಮಂದಿಯ ಆರೋಗ್ಯ ಸ್ಥಿತಿ ಗಂಭೀರವಾಗಿದೆಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

**ಏಳು ದಿನದಲ್ಲಿ 2,641 ಜನರಿಗೆ ಸೋಂಕು:** ನಗರದಲ್ಲಿ ಕಳೆದ ಏಳು ದಿನದಲ್ಲಿ 2,641 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದೆ. ಈ ಪೈಕಿ ಶೇ.75ಕ್ಕಿಂತಅಧಿಕಸೋಂಕಿತರುಹೋಂ ಐಸೋಲೇಷನ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ಕಳೆದ ಜ.4 ರಿಂದ ಜ.9ರ ಅವಧಿಯಲ್ಲಿ ಸೋಂಕು ಪ್ರಕರಣ ಪತ್ತೆ ಪ್ರಮಾಣ ಶೇ.1ರ ಆಧಾರದಲ್ಲಿ 2,641 ಜನರಿಗೆಸೋಂಕುದೃಢಪಟ್ಟಿದೆ. ಈಪೈಕಿ 1,986 ಮಂದಿ (ಶೇ.75.19) ಹೋಂ ಐಸೋಲೇಷನ್‌ನಲ್ಲಿದ್ದಾರೆ. ಉಳಿದವರಲ್ಲಿ 652 ಮಂದಿ ಕೋವಿಡ್ ನಿಗದಿತ ಆಸ್ಪತ್ರೆ, ಕೋವಿಡ್ ಆರೈಕೆ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸೋಂಕು ಪತ್ತೆಯಾದವರ ಪೈಕಿ 509 ಮಹದೇವಪುರ ವಲಯದಲ್ಲಿ ಪತ್ತೆಯಾದ್ದಾರೆ. ಬೊಮ್ಮನಹಳ್ಳಿಯಲ್ಲಿ 463, ಪೂರ್ವ ವಲಯದಲ್ಲಿ 425 ಹಾಗೂ ದಕ್ಷಿಣ ವಲಯದಲ್ಲಿ 398 ಹೆಚ್ಚಿನ ಸೋಂಕಿತರು ಪತ್ತೆಯಾಗಿದ್ದಾರೆ.

ಕನ್ನಡಪ್ರಭ

# ಬೆಂಗ್ಳೂರಲ್ಲಿ ನಿನ್ನೆ ಒಂದೂ ಕೊರೋನಾ ಸಾವು ಇಲ್ಲ!

## 6 ತಿಂಗಳ ಬಳಿಕ ನಿನ್ನೆ ಶೂನ್ಯ ಸಾವು ದಾಖಲು
## ತುಮಕೂರು, ಮೈಸೂರಿನಲ್ಲಿ ತಲಾ 1 ಸಾವು

• **ಕನ್ನಡ ಪ್ರಭ ವಾರ್ತೆ** ಬೆಂಗಳೂರು

ರಾಜ್ಯದ ಕೊರೋನಾ ರಾಜಧಾನಿಯೂ ಆಗಿ ಬದಲಾಗಿದ್ದ ಬೆಂಗಳೂರಿನಲ್ಲಿ ಆರು ತಿಂಗಳ ನಂತರ ಭಾನುವಾರ ಶೂನ್ಯ ಸಾವು ವರದಿಯಾಗಿದೆ.

ರಾಜ್ಯದ ಕೊರೋನಾ ಸಾವು ಮತ್ತು ಸೋಂಕಿನ ಪ್ರಕರಣಗಳಲ್ಲಿ ಸುಮಾರು ಮೂರನೇ ಒಂದರಷ್ಟು ಬೆಂಗಳೂರು ನಗರದಲ್ಲೇ ದಾಖಲಾಗಿವೆ. ಈವರೆಗೆ ರಾಜ್ಯದಲ್ಲಿ 12,140 ಮಂದಿ ಕೊರೋನಾದಿಂದ ಮೃತರಾಗಿದ್ದು ಇದರಲ್ಲಿ ಬೆಂಗಳೂರಿನಲ್ಲೇ 4,346 ಸಾವು ಸಂಭವಿಸಿವೆ. ಆದರೆ ಈಗ ಬೆಂಗಳೂರಿನಲ್ಲಿ ಶೂನ್ಯ ಸಾವು ವರದಿಯಾಗಿರುವುದು ಮತ್ತು ನಿರಂತರವಾಗಿ 500ಕ್ಕಿಂತ ಕಡಿಮೆ ಹೊಸ ಪ್ರಕರಣಗಳು ಪತ್ತೆಯಾಗುತ್ತಿರುವುದರಿಂದ ನಿಟ್ಟುಸಿರು ಬಿಡುವಂತಾಗಿದೆ. ↘ 8



• **ಬೆಂಗಳೂರಿನಲ್ಲಿ ಕೊನೆಯ ಬಾರಿ ಜುಲೈ 7ರಂದು ಶೂನ್ಯ ಸಾವು ವರದಿ; ನಂತರ ಈಗಲೇ**

• **ರಾಜಧಾನಿಯಲ್ಲಿ ಇಲ್ಲಿವರೆಗೆ ಕೊರೋನಾಕ್ಕೆ 4346 ಮಂದಿ ಬಲಿ**

# ಬೆಂಗ್ಳೂರಲ್ಲಿ ಒಂದೂ ಸಾವಿಲ್ಲ!

↙ ಮೊದಲ ಪುಟದಿಂದ

ಕೊನೆಯ ಬಾರಿಗೆ ಬೆಂಗಳೂರಿನಲ್ಲಿ ಜುಲೈ 7ರಂದು ಶೂನ್ಯ ಸಾವು ವರದಿಯಾಗಿತ್ತು.

**792 ಹೊಸ ಪ್ರಕರಣ:** ಉಳಿದಂತೆ ಭಾನುವಾರ ರಾಜ್ಯವ್ಯಾಪಿ ಒಟ್ಟು 792 ಹೊಸ ಪ್ರಕರಣಗಳು ಬೆಳಕಿಗೆ ಬಂದಿದ್ದು, ಇಬ್ಬರು ಮೃತಪಟ್ಟಿದ್ದಾರೆ. 593 ಮಂದಿ ಗುಣಮುಖರಾಗಿದ್ದಾರೆ. ಪ್ರಸ್ತುತ 9,649 ಸಕ್ರಿಯ ಪ್ರಕರಣಗಳು ಇದ್ದು ಈ ಪೈಕಿ 202 ಮಂದಿ ತೀವ್ರ ನಿಗಾ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 1.13 ಲಕ್ಷ ಜನರಿಗೆ ಕೊರೋನಾ ಪರೀಕ್ಷೆ ನಡೆಸಲಾಗಿದೆ.

ತುಮಕೂರು ಮತ್ತು ಮೈಸೂರಿನಲ್ಲಿ ತಲಾ ಒಬ್ಬರು ಸೋಂಕಿಗೆ ಬಲಿಯಾಗಿದ್ದಾರೆ. ಬಾಗಲಕೋಟೆಯಲ್ಲಿ ಕೊರೋನಾದ ಹೊಸ ಪ್ರಕರಣಗಳು ದಾಖಲಾಗಿಲ್ಲ.

ಕನ್ನಡಪ್ರಭ

# ಬೆಂಗ್ಳೂರು, ಬೆಳಗಾವಿಗೆ ಬರುತ್ತೆ ಕೋವಿಡ್ ಲಸಿಕೆ

## 2 ನಗರದಲ್ಲಿ ಸಂಗ್ರಹಿಸಿ ಬಳಿಕ ರಾಜ್ಯಕ್ಕೆ ಹಂಚಿಕೆ

## ಲಸಿಕೆ ವಿತರಣೆಗೆ ನಾವು ಪೂರ್ಣ ಸಿದ್ಧ: ಸುಧಾಕರ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ದೇಶಾದ್ಯಂತ ಜ.16ರಿಂದ ಲಸಿಕೆ ವಿತರಣೆ ಆರಂಭವಾಗಲಿರುವ ಹಿನ್ನೆಲೆಯಲ್ಲಿ ಆ ಪ್ರಕ್ರಿಯೆಗೆ ರಾಜ್ಯ ಸಜ್ಜಾಗಿದೆ. ಈಗಾಗಲೇ 1.30 ಕೋಟಿ ಡೋಸ್ ಲಸಿಕೆ ಸಂಗ್ರಹ ಸಾಮರ್ಥ್ಯದ ಎರಡು ವಾಕ್-ಇನ್ ಕೂಲರ್ ಹಾಗೂ ಒಂದು ವಾಕ್-ಇನ್ ಫ್ರೀಜರ್ ಹೊಂದಿದ್ದೇವೆ. ಬೆಂಗಳೂರು, ಬೆಳಗಾವಿಯಲ್ಲಿ ಲಸಿಕೆ ಸಂಗ್ರಹಿಸಿ ಬಳಿಕ ಐದು ಪ್ರಾದೇಶಿಕ ಲಸಿಕಾ ದಾಸ್ತಾನು ವ್ಯವಸ್ಥೆಗೆ ರವಾನಿಸಲಾಗುವುದು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

ಬೆಂಗಳೂರಿನ ಆರೋಗ್ಯ ಇಲಾಖೆ ಕಟ್ಟಡದಲ್ಲಿ ಲಸಿಕೆ ಸಂಗ್ರಹ ವ್ಯವಸ್ಥೆ ಖುದ್ದು ಪರಿಶೀಲಿಸಿ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. 8



ನಿಯಮಗಳಲ್ಲಿ ಅವಕಾಶವಿದ್ದರೆ ರಾಜ್ಯದ ಜನರಿಗೆ ವಿಶ್ವಾಸ ಮೂಡಿಸಲು ನಾನೇ ಮೊದಲ ಲಸಿಕೆ ಪಡೆಯುತ್ತೇನೆ.

• **ಡಾ| ಕೆ.ಸುಧಾಕರ್**
ಆರೋಗ್ಯ ಸಚಿವ

ಕನ್ನಡಪ್ರಭ

# ಬೆಂಗ್ಳೂರು, ಬೆಳಗಾವಿಗೆ ಬರುತ್ತೆ ಲಸಿಕೆ

ಮೊದಲ ಪುಟದಿಂದ

ಬೆಂಗಳೂರಿನಲ್ಲಿ ತಲಾ 45 ಲಕ್ಷ ಡೋಸ್ ಸಂಗ್ರಹ ಸಾಮರ್ಥ್ಯದ ಎರಡು ವಾಕ್-ಇನ್ ಕೂಲರ್ ಹಾಗೂ 40 ಲಕ್ಷ ಡೋಸ್ ಸಂಗ್ರಹ ಸಾಮರ್ಥ್ಯದ ಒಂದು ವಾಕ್ ಇನ್-ಫ್ರೀಜರ್ ಹೊಂದಿದ್ದೇವೆ. ಅಲ್ಲದೆ ಇನ್ನೂ ಒಂದು ವಾಕ್-ಇನ್ ಕೂಲರ್ ಕಳುಹಿಸುವುದಾಗಿ ಕೇಂದ್ರ ಸರ್ಕಾರ ಹೇಳಿದೆ. ಲಸಿಕೆ ದಾಸ್ತಾನು, ವಿತರಣೆಗೆ ಸರ್ವ ರೀತಿಯಲ್ಲೂ ಸಜ್ಜಾಗಿದ್ದು, ಮೊದಲ ಹಂತದಲ್ಲಿ 13.90 ಲಕ್ಷ ಡೋಸ್ ಲಸಿಕೆ ಬರಲಿದೆ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಸಂಜೆ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ವಿಡಿಯೋ ಸಂವಾದ ನಡೆಸಲಿದ್ದಾರೆ. ಈಗಾಗಲೇ ಪ್ರಧಾನಿಗಳು ಜನವರಿ 16 ರಿಂದ ಕೊರೊನಾ ಲಸಿಕೆ ನೀಡುವ ಬಗ್ಗೆ ತಿಳಿಸಿದ್ದಾರೆ. ಆರೋಗ್ಯ ಕ್ಷೇತ್ರದ ಸಿಬ್ಬಂದಿಗೆ 3 ಕೋಟಿ ಲಸಿಕೆ ನೀಡಲಾಗುವುದು ಎಂದು ಹೇಳಿದ್ದಾರೆ. ಇದಕ್ಕೆ ಪೂರ್ವಭಾವಿಯಾಗಿ ಸಂಗ್ರಹ ವ್ಯವಸ್ಥೆಯನ್ನು ಪರಿಶೀಲಿಸಲಾಗಿದೆ ಎಂದು ಹೇಳಿದರು.

**ಪ್ರತಿ ಜಿಲ್ಲೆಯಲ್ಲೂ ಲಸಿಕೆ ಸಂಗ್ರಹ:** ರಾಜ್ಯದಲ್ಲಿ ಪ್ರಮುಖವಾಗಿ ಬೆಂಗಳೂರು ಹಾಗೂ ಬೆಳಗಾವಿಯಲ್ಲಿ 2 ಲಸಿಕೆ ಸಂಗ್ರಹ ವ್ಯವಸ್ಥೆಗಳಿವೆ. ಇದಲ್ಲದೆ ಚಿತ್ರದುರ್ಗ, ಕಲಬುರಗಿ, ದಕ್ಷಿಣ ಕನ್ನಡ, ಮೈಸೂರು ಮತ್ತು ಬಾಗಲಕೋಟೆಯಲ್ಲಿ 5 ಪ್ರಾದೇಶಿಕ ಸಂಗ್ರಹ ವ್ಯವಸ್ಥೆ ಇದೆ.

ಪ್ರತಿ ಜಿಲ್ಲೆಯಲ್ಲೂ ಒಂದು ಲಸಿಕೆ ಸಂಗ್ರಹ ವ್ಯವಸ್ಥೆ ಇದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 50 ಬ್ಲಾಕ್ ಹೊಂದಿದ್ದೇವೆ. ಒಟ್ಟು 2,767 ಕೋಲ್ಡ್‌ಚೈನ್ ಪಾಯಿಂಟ್‌ಗಳು ಸೇರಿ ಎಲ್ಲಾ ರೀತಿಯ ಮೂಲಸೌಕರ್ಯದೊಂದಿಗೆ ಲಸಿಕೆ ವಿತರಣೆ ಮಾಡಲಾಗುವುದು ಎಂದು ತಿಳಿಸಿದರು.

**ರಾಜ್ಯಕ್ಕೆ ಒಟ್ಟು 24 ಲಕ್ಷ ಡೋಸ್:** ರಾಜ್ಯದಲ್ಲಿ ಎಲ್ಲ ಬಗೆಯ ಸಿದ್ಧತೆ ಪೂರ್ಣಗೊಂಡಿದೆ. ಮೊದಲ ಹಂತದಲ್ಲಿ 13.90 ಲಕ್ಷ ಕೊರೋನಾ ಲಸಿಕೆ ಬರಲಿದೆ. 24 ಲಕ್ಷ ಸಿರಿಂಜ್‌ಗಳು ಕೇಂದ್ರದಿಂದ ಈಗಾಗಲೇ ಬಂದಿವೆ. ಅಲ್ಲದೆ ರಾಜ್ಯಕ್ಕೆ ಒಟ್ಟು 24 ಲಕ್ಷ ಡೋಸ್ ಲಸಿಕೆ ಬರಲಿದೆ ಎಂದು ಹೇಳಿದರು.

ಇವುಗಳ ಸಾಗಣೆಗೆ ರಾಜ್ಯದಲ್ಲಿ 900 ಲಸಿಕೆ ಕ್ಯಾರಿಯರ್‌ಗಳಿವೆ. ಲಸಿಕೆಯನ್ನು ಮೊದಲಿಗೆ ಪ್ರಾದೇಶಿಕ ಸಂಗ್ರಹ ಕೇಂದ್ರಗಳಿಗೆ ಕಳುಹಿಸಲಾಗುತ್ತದೆ. ನಂತರ ಅಲ್ಲಿಂದ ಜಿಲ್ಲಾ ಮಟ್ಟಕ್ಕೆ ಕಳುಹಿಸಲಾಗುತ್ತದೆ ಎಂದು ವಿವರಿಸಿದರು.

## ಜನಸಾಮಾನ್ಯರಿಗೆ ಲಸಿಕೆ ಸಿಗಲು 2 ತಿಂಗಳಾಗಬಹುದು

ಲಸಿಕೆ ಅಭಿಯಾನ ಶುರುವಾದ ಕೂಡಲೇ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡಲಾಗುವುದು. ಸಾರ್ವಜನಿಕರಿಗೆ ಲಸಿಕೆ ನೀಡಲು ಎರಡು ತಿಂಗಳು ಬೇಕಾಗಬಹುದು. ಪ್ರತಿಯೊಬ್ಬರಿಗೂ ಲಸಿಕೆ ಬೇಕೆ ಬೇಡವೇ ಎಂಬುದನ್ನು ತಜ್ಞರ ಸಲಹೆ ಮೇರೆಗೆ ಸರ್ಕಾರ ತೀರ್ಮಾನಿಸಲಿದೆ. ಸಾರ್ವಜನಿಕರಿಗೆ ಲಸಿಕೆ ನೀಡುವುದಾದರೂ ಮೊದಲಿಗೆ ಹಿರಿಯ ನಾಗರಿಕರಿಗೆ ನೀಡಲಾಗುವುದು. ಹೀಗಾಗಿ ಇನ್ನೂ 2 ತಿಂಗಳು ಆಗಬಹುದು ಎಂದು ಸಚಿವ ಡಾ.ಕೆ. ಸುಧಾಕರ್ ಹೇಳಿದರು.

## ಏನಿದು ವಾಕ್ ಇನ್ ಕೂಲರ್, ವಾಕ್ ಇನ್ ಫ್ರೀಜರ್?

ರಾಜ್ಯಕ್ಕೆ ಎರಡು ವಾಕ್ ಇನ್ ಕೂಲರ್ ಹಾಗೂ ಒಂದು ವಾಕ್ ಇನ್ ಫ್ರೀಜರ್‌ಗಳನ್ನು ಕೇಂದ್ರ ಸರ್ಕಾರ ಕಳುಹಿಸಿದೆ. ಕೊಠಡಿ ಗಾತ್ರದ ಈ ವಾಕ್ ಇನ್ ಫ್ರೀಜರ್ ಹಾಗೂ ಕೂಲರ್‌ಗಳು ವ್ಯಕ್ತಿಗಳು ಸಂಚರಿಸಬಹುದಾದಷ್ಟು ದೊಡ್ಡವಿರುತ್ತವೆ. ಫ್ರೀಜರ್‌ನಲ್ಲಿ ಲಸಿಕೆಗಳನ್ನು ಮೈನಸ್ ಡಿಗ್ರಿವರೆಗೆ ರೆಫ್ರಿಜರೇಷನ್ ಮಾಡಬಹುದು. ವಾಕ್ ಇನ್ ಕೂಲರ್‌ಗಳು ಕನಿಷ್ಠ ತಾಪಮಾನ ಕಾಯ್ದುಕೊಳ್ಳಲು ಬಳಕೆಯಾಗಲಿದ್ದು, ಲಸಿಕೆಯನ್ನು ಕಡಿಮೆ ತಾಪಮಾನದಲ್ಲಿ ದಾಸ್ತಾನು ಮಾಡಲು ನೆರವಾಗಲಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕನ್ನಡಪ್ರಭ

# ನಾನೇ ಮೊದಲ ಲಸಿಕೆ ಪಡೆಯುವೆ

## ನಿಯಮಗಳಲ್ಲಿ ಅವಕಾಶವಿದ್ದರೆ ಸ್ವೀಕರಿಸುವೆ ಎಂದ ಸಚಿವ ಸುಧಾಕರ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಿಯಮಗಳಲ್ಲಿ ಅವಕಾಶವಿದ್ದರೆ ರಾಜ್ಯದ ಜನರಿಗೆ ವಿಶ್ವಾಸ ಮೂಡಿಸಲು ನಾನೇ ಮೊದಲ ಲಸಿಕೆ ಪಡೆಯುತ್ತೇನೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಹೇಳಿದ್ದಾರೆ.

ಭಾನುವಾರ ಲಸಿಕೆ ದಾಸ್ತಾನು ವ್ಯವಸ್ಥೆ ಪರಿಶೀಲನೆ ವೇಳೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಜನರಲ್ಲಿ ವಿಶ್ವಾಸ ಮೂಡಿಸಲು ನಾನೇ ಮೊದಲು ಲಸಿಕೆ ಪಡೆಯುತ್ತೇನೆ. ಆದರೆ ಅದಕ್ಕೂ ಮೊದಲು ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಟವಾಗಬೇಕು. ಮಾರ್ಗಸೂಚಿಯಲ್ಲಿ ಯಾರ್ಯಾರು ಲಸಿಕೆ ಪಡೆಯಬಹುದು ಎಂಬಿತ್ಯಾದಿ ಎಲ್ಲಾ ಅಂಶಗಳೂ ಇರಲಿವೆ ಎಂದು ಹೇಳಿದರು.

ರಾಜ್ಯದಲ್ಲಿ ಸೀರಂ ಇನ್‌ಸ್ಟಿಟ್ಯೂಟ್‌ನ ಕೋವಿಶೀಲ್ಡ್ ಲಸಿಕೆ ಶೇಖರಣೆಗೆ ವ್ಯವಸ್ಥೆ ಮಾಡಿದ್ದೇವೆ. ಪುಣೆಯಿಂದ ವ್ಯಾಕ್ಸಿನ್ ಬರಲಿದ್ದು ಕೋಲ್ಡ್ ಸ್ಟೋರೇಜ್ ವ್ಯವಸ್ಥೆಯಲ್ಲಿ ದಾಸ್ತಾನು ಮಾಡಲಾಗುವುದು. ಒಂದು ವಯಲ್‌ನಲ್ಲಿ (ಬಾಟಲ್) 10 ಮಂದಿಗೆ ನೀಡುವಷ್ಟು ಲಸಿಕೆ ಇರುತ್ತದೆ. ಒಂದು ಇಂಜೆಕ್ಷನ್ ಡೋಸ್ 0.5 ಎಂ.ಎಲ್. ಎಂದು ಮಾಹಿತಿ ನೀಡಿದರು.

**6 ಹಂತಗಳಲ್ಲಿ ಕೋಲ್ಡ್ ಚೈನ್:** ವ್ಯಾಕ್ಸಿನ್ ವಿತರಣೆಗೆ ಕೋಲ್ಡ್ ಚೈನ್ ಮಾಡಿದ್ದು, ವ್ಯಾಕ್ಸಿನ್ ಸಂರಕ್ಷಣೆ ಹಾಗೂ ವಿತರಣೆಗೆ ಆರು ಹಂತಗಳ ಕೋಲ್ಡ್ ಚೈನ್ ರೂಪಿಸಿದ್ದೇವೆ. ರಾಜ್ಯದ ಬೆಂಗಳೂರು, ಬೆಳಗಾವಿ ಎರಡು ಕಡೆ ರಾಜ್ಯ ಲಸಿಕಾ ದಾಸ್ತಾನು ಕೇಂದ್ರ ಸ್ಥಾಪಿಸಿದ್ದು, ಮುಂಬೈ ಕರ್ನಾಟಕ ಜಿಲ್ಲೆಗಳಿಗೆ ಬೆಳಗಾವಿಯಿಂದ ಹಾಗೂ ಉಳಿದ ಜಿಲ್ಲೆಗಳಿಗೆ ಬೆಂಗಳೂರಿನಿಂದ ಲಸಿಕೆ ವಿತರಣೆಯಾಗಲಿದೆ. ಒಟ್ಟು 5 ಪ್ರಾದೇಶಿಕ ಸಂಗ್ರಹ ವ್ಯವಸ್ಥೆ ಮಾಡಿದ್ದು, ಇವುಗಳಿಂದ ಜಿಲ್ಲಾ ಕೇಂದ್ರಗಳಿಗೆ ರವಾನೆಯಾಗಲಿದೆ ಎಂದರು.


ಲಸಿಕೆ ವಿತರಣೆ ಸಿದ್ಧತೆ ಪರಿಶೀಲಿಸಿದ ಆರೋಗ್ಯ ಸಚಿವ ಸುಧಾಕರ್.

VK
ವಿಜಯ ಕರ್ನಾಟಕ

# 7 ತಿಂಗಳಲ್ಲಿ 33 ಸಾವಿರ ಟನ್ ಕೊರೊನಾ ತ್ಯಾಜ್ಯ

**ಹೊಸದಿಲ್ಲಿ:** ಕೊರೊನಾ ಪಿಡುಗು ಶುರುವಾದ ನಂತರದ ಏಳು ತಿಂಗಳಲ್ಲಿ ದೇಶದಲ್ಲಿ ಸುಮಾರು 33 ಸಾವಿರ ಟನ್ ಕೋವಿಡ್-19 ವೈದ್ಯಕೀಯ ತ್ಯಾಜ್ಯ ಉತ್ಪತ್ತಿಯಾಗಿದೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ಹೇಳಿದೆ.

ಈ ಪೈಕಿ ಗರಿಷ್ಠ ಪ್ರಮಾಣದ 3,587 ಟನ್ ತ್ಯಾಜ್ಯ ಮಹಾರಾಷ್ಟ್ರವೊಂದರಿಂದಲೇ ಉತ್ಪತ್ತಿಯಾಗಿದ್ದು, ಒಟ್ಟು 198 ಸಾರ್ವಜನಿಕ ಜೈವಿಕ ವೈದ್ಯಕೀಯ ತ್ಯಾಜ್ಯ ವಿಲೇವಾರಿ ಘಟಕಗಳ ಮೂಲಕ ತ್ಯಾಜ್ಯವನ್ನು ಸೂಕ್ತ ವ್ಯವಸ್ಥೆಯೊಂದಿಗೆ ವಿಲೇವಾರಿ ಮಾಡಲಾಗಿದೆ ಎಂದು ಸಿಪಿಸಿಬಿ ಅಂಕಿ-ಅಂಶಗಳು ತಿಳಿಸಿವೆ.

ಜೂನ್‌ನಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲಿ ದೇಶದಲ್ಲಿ 32,994 ಟನ್ ಕೋವಿಡ್ ವೈದ್ಯಕೀಯ ತ್ಯಾಜ್ಯ ಉತ್ಪತ್ತಿಯಾಗಿದೆ. ಅದರಲ್ಲೂ ಕಳೆದ ಅಕ್ಟೋಬರ್ ತಿಂಗಳಲ್ಲಿ ಗರಿಷ್ಠ ಪ್ರಮಾಣದ 5,500 ತ್ಯಾಜ್ಯ ಉತ್ಪತ್ತಿಯಾಗಿದೆ. ಸೂಕ್ತ ವ್ಯವಸ್ಥೆಯೊಂದಿಗೆ ಇದನ್ನು ವಿಲೇವಾರಿ ಮಾಡಲಾಗಿದೆ. ತ್ಯಾಜ್ಯಗಳನ್ನು ವರ್ಗೀಕರಿಸಿ ಪರಿಸರ ಸ್ನೇಹಿ ಕ್ರಮಗಳ ಮೂಲಕ ವಿಲೇವಾರಿ ಮಾಡಲಾಗುತ್ತಿರುವುದರ ಮೇಲೆ ನಿಗಾ ಇಡಲು 'ಕೋವಿಡ್-19 ಬಿಎಂಡಬ್ಲ್ಯೂ' ಆ್ಯಪ್‌ಅನ್ನು ಸಹ ಅಭಿವೃದ್ಧಿಪಡಿಸಲಾಗಿದೆ. ನಿಯಮಿತವಾಗಿ ತ್ಯಾಜ್ಯ ಸಂಗ್ರಹಿಸಿ, ವಿಲೇವಾರಿ ಮಾಡಲು ಈ ಆ್ಯಪ್ ನೆರವಾಗಿದೆ ಎಂದು ಮಂಡಳಿಯ ಮೂಲಗಳು ತಿಳಿಸಿವೆ.

ಪಿಪಿಇ ಕಿಟ್, ಮಾಸ್ಕ್, ಶೂ ಕವರ್‌ಗಳು, ಕೈಗವಸು, ರಕ್ತಸಿಕ್ತ ವೈದ್ಯಕೀಯ ಉಪಕರಣಗಳು, ಡ್ರೆಸ್ಸಿಂಗ್, ಪ್ಲಾಸ್ಟರ್‌ಗೆ ಬಳಸಿದ ವಸ್ತುಗಳು, ಕಾಟನ್ ಸ್ವ್ಯಾಬ್ಸ್, ದೇಹದಿಂದ ಸ್ರವಿಸಿದ ದ್ರವ ಹಾಗೂ ರಕ್ತದ ಕಲೆಗಳಿಂದ ಮಲಿನಗೊಂಡ ಹಾಸಿಗೆಗಳು, ಸಿರಿಂಜ್‌ಗಳು ಜೈವಿಕ ವೈದ್ಯಕೀಯ ತ್ಯಾಜ್ಯಗಳಾಗಿವೆ. ಜೈವಿಕ ವೈದ್ಯಕೀಯ ತ್ಯಾಜ್ಯ ಸಂಗ್ರಹಿಸಿ, ವಿಲೇವಾರಿ ಮಾಡುವ ಪ್ರಕ್ರಿಯೆಗಳ ಮೇಲ್ವಿಚಾರಣೆಗೆ ಮೊಬೈಲ್ ಆ್ಯಪ್ ಬಳಕೆಯನ್ನು ಕಡ್ಡಾಯಗೊಳಿಸಿ ಕಳೆದ ವರ್ಷದ ಜುಲೈನಲ್ಲಿಯೇ ಸುಪ್ರೀಂ ಕೋರ್ಟ್ ಸರಕಾರಕ್ಕೆ ಆದೇಶಿಸಿತ್ತು.

## ಸಕ್ರಿಯ ಪ್ರಕರಣ 2.33 ಲಕ್ಷ

**ದೇಶದಲ್ಲಿ ಭಾನುವಾರದ ಬೆಳಗ್ಗೆ 8ಕ್ಕೆ ಅಂತ್ಯಗೊಂಡ ಕಳೆದ 24 ಗಂಟೆಗಳಲ್ಲಿ 18,645 ಹೊಸ ಕೊರೊನಾ ಪ್ರಕರಣಗಳು ಪತ್ತೆಯಾಗಿದ್ದು, ಒಟ್ಟು ಸೋಂಕಿತರ ಸಂಖ್ಯೆ 1,04,50,284 ತಲುಪಿದೆ. 1,00,75,950 ಸೋಂಕಿತರು ಗುಣಮುಖರಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 2.33 ಲಕ್ಷಕ್ಕೆ ಇಳಿದಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ. ಸಾವಿನ ಸಂಖ್ಯೆ 1,50,999 ತಲುಪಿದೆ.**

## ಕಳೆದ 7 ತಿಂಗಳಲ್ಲಿ ಉತ್ಪತ್ತಿಯಾದ ಕೋವಿಡ್ ತ್ಯಾಜ್ಯ

(ಟಾಪ್ 8 ರಾಜ್ಯಗಳು, ಟನ್‌ಗಳಲ್ಲಿ)

| | |
|---|---|
| ಮಹಾರಾಷ್ಟ್ರ | 5,367 |
| ಕೇರಳ | 3,300 |
| ಗುಜರಾತ್ | 3,086 |
| ತಮಿಳುನಾಡು | 2,086 |
| ಉತ್ತರ ಪ್ರದೇಶ | 2,502 |
| ದಿಲ್ಲಿ | 2,471 |
| ಪಶ್ಚಿಮ ಬಂಗಾಳ | 2,095 |
| ಕರ್ನಾಟಕ | 2,026 |

VK
ವಿಜಯ ಕರ್ನಾಟಕ

# ರಸ್ತೆ ಉಬ್ಬು ನಿರ್ಮಾಣಕ್ಕೆ ಒತ್ತಾಯ



**ಬೆಂಗಳೂರು ದಕ್ಷಿಣ:** ಬನ್ನೇರುಘಟ್ಟ ಮುಖ್ಯ ರಸ್ತೆಯಲ್ಲಿ ರಸ್ತೆ ಅಭಿವೃದ್ಧಿ ವೇಳೆ ಹಂಪ್‌ಗಳನ್ನು ತೆರವುಗೊಳಿಸಿದ್ದು, ಅಪಘಾತದ ತಾಣವಾಗಿ ಪರಿವರ್ತನೆಯಾಗಿದೆ.

ಮೀನಾಕ್ಷಿ ದೇವಸ್ಥಾನದಿಂದ ಬಸವನಪುರವರೆಗೆ ಎರಡು ಕಿ.ಮೀ ದೂರದ ರಸ್ತೆಯಲ್ಲಿ ಯಾವುದೇ ಹಂಪ್ ಇಲ್ಲ, ಅಭಿವೃದ್ಧಿ ಬಳಿಕ ರಸ್ತೆ ಅಗಲವಾಗಿದ್ದು, ಹೊಂಡಗಳಿಂದ ಮುಕ್ತವಾಗಿದೆ. ಹೀಗಾಗಿ ಹೆಚ್ಚಿನ ವಾಹನಗಳು ವಿಪರೀತ ವೇಗದಲ್ಲಿ ಸಾಗುತ್ತಿವೆ. ಇದರಿಂದ ನಿತ್ಯ ಮೂರ್‍ನಾಲ್ಕು ಅಪಘಾತವಾಗುವುದು ಸಾಮಾನ್ಯವಾಗಿದೆ. ದ್ವಿಚಕ್ರ ವಾಹನ ಸವಾರರು ಹೆಚ್ಚಿನ ಪ್ರಮಾಣದಲ್ಲಿ ಗಾಯಗೊಳ್ಳುತ್ತಿದ್ದಾರೆ. ಪಾದಚಾರಿಗಳಂತೂ ಆತಂಕದಲ್ಲೇ ರಸ್ತೆ ದಾಟುವಂತಾಗಿದೆ.

ಈ ಬಗ್ಗೆ ಕಾಳೇನ ಅಗ್ರಹಾರ ನಿವಾಸಿ, ಗ್ರಾಪಂ ಮಾಜಿ ಸದಸ್ಯ ಉಮೇಶ್, ''ಹಂಪ್ ಅಳವಡಿಕೆಗೆ ಪಾಲಿಕೆ ಅನುಮತಿಬೇಕು ಎಂದು ಸಂಚಾರ ಪೊಲೀಸರು ಪಾಲಿಕೆಯತ್ತ ಬೊಟ್ಟು ಮಾಡುತ್ತಿದ್ದಾರೆ. ಜನರ ಮನವಿಗೆ ಪಾಲಿಕೆ ಸ್ಪಂದಿಸುತ್ತಿಲ್ಲ,'' ಎಂದು ದೂರಿದರು.

VK
ವಿಜಯ ಕರ್ನಾಟಕ

50ಕ್ಕಿಂತ ಹೆಚ್ಚು ಫ್ಲ್ಯಾಟ್ ಇದ್ದಲ್ಲಿ ಪಾಲಿಕೆ ಕಸ ಸಂಗ್ರಹಿಸದು | ಬೃಹತ್ ಅಪಾರ್ಟ್‌ಮೆಂಟ್‌ಗಳಲ್ಲಿ ನಿವಾಸಿಗಳ ಸಂಘಕ್ಕೆ ವಿಲೇವಾರಿ ಹೊಣೆ

ನಿರ್ದಿಷ್ಟ ಶುಲ್ಕ ಪಡೆದು ಕಸ ವಿಲೇವಾರಿಗೆ ಸರಕಾರೇತರ ಸಂಸ್ಥೆಗಳಿಗೆ ಅವಕಾಶ | ಫ್ಲ್ಯಾಟ್ ಸಂಖ್ಯೆ ಅಥವಾ ಕೆ.ಜಿ. ಲೆಕ್ಕದಲ್ಲಿ ದರ ನಿಗದಿ

# ಅಪಾರ್ಟ್‌ಮೆಂಟ್ ತ್ಯಾಜ್ಯಕ್ಕೆ ಎನ್‌ಜಿಒ ಹೆಗಲು

■ **ನಾಗಪ್ಪ ನಾಗನಾಯಕನಹಳ್ಳಿ**, ಬೆಂಗಳೂರು
nagappa.narayanappa@timesgroup.com

ಬೃಹತ್ ಅಪಾರ್ಟ್‌ಮೆಂಟ್‌ಗಳಿಂದ ಪಾಲಿಕೆಯು ಕಸ ಸಂಗ್ರಹಿಸದ ಕಾರಣ ತ್ಯಾಜ್ಯ ವಿಲೇವಾರಿ ಬಹುದೊಡ್ಡ ಸವಾಲಾಗಿದೆ. ಆದರೆ ಇದನ್ನು ನಿಭಾಯಿಸಲು ಎನ್‌ಜಿಒಗಳು ಹೆಗಲು ಕೊಟ್ಟಿವೆ. ಆವರಣದಲ್ಲಿ ಸಂಸ್ಕರಣಾ ಘಟಕಕ್ಕೆ ಸೂಕ್ತ ಜಾಗ ಇಲ್ಲದ ಅಪಾರ್ಟ್‌ಮೆಂಟ್‌ಗಳಿಗೆ ಇದು ವರದಾನವಾಗಿದೆ.

ಸದ್ಯ 50ಕ್ಕಿಂತ ಕಡಿಮೆ ಮನೆಗಳು ಇರುವ ಅಪಾರ್ಟ್‌ಮೆಂಟ್‌ಗಳಲ್ಲಿ ಮಾತ್ರ ಪಾಲಿಕೆ ಕಸ ಸಂಗ್ರಹಿಸುತ್ತಿದೆ. 50ಕ್ಕಿಂತ ಹೆಚ್ಚು ಮನೆಗಳಿರುವ ಅಪಾರ್ಟ್‌ಮೆಂಟ್‌ಗಳ ತ್ಯಾಜ್ಯ ನಿರ್ವಹಣೆಯ ಹೊಣೆಯನ್ನು ನಿವಾಸಿಗಳ ಸಂಘವೇ ಹೊರಬೇಕಿದೆ. ಅಪಾರ್ಟ್‌ಮೆಂಟ್‌ಗಳಲ್ಲಿ ಸ್ಥಳಾವಕಾಶ ಹಾಗೂ ಅಗತ್ಯ ಸಂಪನ್ಮೂಲವಿದ್ದರೆ ಅಲ್ಲಿಯೇ ಸಂಸ್ಕರಣೆ ಮಾಡಿಕೊಳ್ಳಬಹುದು. ಒಂದು ವೇಳೆ ಸ್ಥಳಾವಕಾಶ ಕೊರತೆ ಹಾಗೂ ಅದನ್ನು ನಿರ್ವಹಣೆ ಮಾಡುವ ಸಾಮರ್ಥ್ಯ ಇಲ್ಲದಿದ್ದರೆ ಅಧಿಕೃತ ಖಾಸಗಿ ತ್ಯಾಜ್ಯ ಸಂಸ್ಕರಣೆದಾರರಿಗೆ ನೀಡಿ ವಿಲೇವಾರಿ ಮಾಡಲು ಅವಕಾಶ ಮಾಡಿಕೊಡಲಾಗಿದೆ.

**ವಿಕ ಫೋಕಸ್**

ಕಸ ಸಂಗ್ರಹ, ಸಂಸ್ಕರಣೆ, ವಿಲೇವಾರಿಗೆ ಬಿಬಿಎಂಪಿ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ನೋಂದಾಯಿತರಾಗಿರುವ ಖಾಸಗಿ ಸೇವಾದಾರರ ಸೇವೆ ಪಡೆದುಕೊಳ್ಳಬಹುದಾಗಿದೆ. ಇದಕ್ಕೆ ಪಾಲಿಕೆಯು ಶುಲ್ಕ ನಿಗದಿಪಡಿಸಿಲ್ಲ. ತ್ಯಾಜ್ಯ ಉತ್ಪಾದಕರು ಮತ್ತು ಸೇವಾದಾರರೇ ಒಪ್ಪಿತ ನಿಯಮಗಳ ಅಡಿಯಲ್ಲಿ ಕಸ ಸಂಗ್ರಹ ಶುಲ್ಕ ನಿಗದಿ ಮಾಡಿಕೊಳ್ಳಬಹುದು.

**ಅಪಾರ್ಟ್‌ಮೆಂಟ್ ಆವರಣದಲ್ಲೇ ಸಂಸ್ಕರಿಸಿ ಕೊಡುವ ವ್ಯವಸ್ಥೆಯೂ ಉಂಟು**

### ತಿಂಗಳಿಗೆ 60-70 ರೂ. ನಿರ್ವಹಣಾ ಶುಲ್ಕ

''ಯಲಹಂಕದ 18 ವಸತಿ ಸಮುಚ್ಚಯಗಳಿಂದ ನಿತ್ಯ 3.50 ಟನ್ ಹಸಿ ಮತ್ತು 5 ಟನ್‌ನಷ್ಟು ಕಸ ಸಂಗ್ರಹಿಸಲಾಗುತ್ತಿದೆ. ಪ್ರತಿಯೊಂದು ಅಪಾರ್ಟ್ ಮೆಂಟ್‌ನಲ್ಲಿ 100ಕ್ಕಿಂತ ಹೆಚ್ಚು ಫ್ಲ್ಯಾಟ್‌ಗಳಿವೆ. ಪ್ರತಿ ಫ್ಲ್ಯಾಟ್‌ನಿಂದ ಕಸ ಸಂಗ್ರಹಿಸಿ ವಿಲೇವಾರಿ ಮಾಡಲು ತಿಂಗಳಿಗೆ 60-70 ರೂ. ನಿರ್ವಹಣಾ ಶುಲ್ಕ ಪಡೆಯಲಾಗುತ್ತಿದೆ. ಒಣ ಕಸವನ್ನು ಪುನರ್‌ಬಳಕೆ ಮಾಡಿಕೊಳ್ಳಲಾಗುತ್ತಿದೆ. ಹಸಿ ಕಸವನ್ನು ಸಂಸ್ಕರಿಸಿ ಗೊಬ್ಬರ ತಯಾರಿಸಲು ಸಮೀಪದಲ್ಲಿನ ರೈತರ ಭೂಮಿಯನ್ನು ಬಾಡಿಗೆಗೆ ಪಡೆಯಲಾಗಿದೆ. ಉತ್ಪಾದಿತ ಗೊಬ್ಬರವನ್ನು ಕೃಷಿಕರಿಗೆ ಮಾರಾಟ ಮಾಡಲಾಗುತ್ತಿದೆ,'' ಎಂದು ಸ್ವಚ್ಛ್ ಇಕೋ ಸಂಸ್ಥೆಯ ಯೋಜನಾ ಕಾರ್ಯದರ್ಶಿ ರಾಜೇಶ್ ಬಾಬು ತಿಳಿಸಿದರು. »08



ಅಪಾರ್ಟ್‌ಮೆಂಟ್‌ಗಳಲ್ಲಿ ಕಸ ಸಂಗ್ರಹಿಸಿ ವಿಲೇವಾರಿ ಮಾಡಲು ನೋಂದಾಯಿತ ಏಜೆನ್ಸಿಗಳಿಗೆ ಅನುಮತಿ ನೀಡಲಾಗಿದೆ. ಏಜೆನ್ಸಿಗಳ ವಾಹನಗಳಿಗೂ ಜಿಪಿಎಸ್ ಅಳವಡಿಸಲು ಸೂಚಿಸಲಾಗಿದೆ. ಇದರಿಂದ ಕಸ ಎಲ್ಲಿ ವಿಲೇವಾರಿಯಾಗುತ್ತಿದೆ ಎಂಬುದನ್ನು ತಿಳಿಯಲು ಸಹಕಾರಿಯಾಗಲಿದೆ.

**-ಸರ್ಫರಾಜ್ ಖಾನ್**
ಜಂಟಿ ಆಯುಕ್ತ, ಬಿಬಿಎಂಪಿ (ಘನತ್ಯಾಜ್ಯ ನಿರ್ವಹಣೆ)

ಕೆಲ ಖಾಸಗಿ ಏಜೆನ್ಸಿಗಳು ಕೆ.ಜಿ ಲೆಕ್ಕದಲ್ಲಿ ಹಾಗೂ ಫ್ಲ್ಯಾಟ್ ಲೆಕ್ಕದಲ್ಲಿ ಶುಲ್ಕ ವಿಧಿಸುತ್ತಿವೆ. ಕೆಲ ಅಪಾರ್ಟ್‌ಮೆಂಟ್‌ಗಳ ನಿವಾಸಿಗಳು ತಮ್ಮ ಆವರಣದಲ್ಲೇ ಹಸಿ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿ ಕಾಂಪೋಸ್ಟ್ ಗೊಬ್ಬರ ತಯಾರಿಸುತ್ತಿದ್ದವು. ಆದರೆ, ಈ ಗೊಬ್ಬರ ಖರೀದಿಸುವವರು ಇಲ್ಲದಿರುವುದರಿಂದ ಘಟಕಗಳನ್ನು ಸ್ಥಗಿತಗೊಳಿಸಿದ್ದಾರೆ.

**-ನಾಗರಾಜ ರಾವ್** ಅಧ್ಯಕ್ಷ, ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್

## ಅಪಾರ್ಟ್‌ಮೆಂಟ್ ಆವರಣದಲ್ಲೇ ಕಾಂಪೋಸ್ಟ್ ತಯಾರಿ

ಯಲಹಂಕ ನ್ಯೂ ಟೌನ್‌ನಲ್ಲಿರುವ ಪೂರ್ವ ವೆನಿಜಿಯಾ ಅಪಾರ್ಟ್‌ಮೆಂಟ್‌ನ ನಿವಾಸಿಗಳು ಹಸಿ, ಒಣ ಕಸ ವಿಲೇವಾರಿಗೆ ತಾವೇ ಪರಿಹಾರ ಕಂಡುಕೊಂಡಿದ್ದಾರೆ. ಹಸಿ ತ್ಯಾಜ್ಯ ಸಂಸ್ಕರಣಾ ಘಟಕವನ್ನು ನಿರ್ಮಿಸಿ, ಗೊಬ್ಬರ ತಯಾರಿಸುತ್ತಿದ್ದಾರೆ. ಹೀಗೆ ತಯಾರಿಸಿದ ಗೊಬ್ಬರವನ್ನು ಉದ್ಯಾನಕ್ಕೆ ಬಳಸಿಕೊಳ್ಳಲಾಗುತ್ತಿದೆ. ಉಳಿದ ಗೊಬ್ಬರವನ್ನು ರೈತರಿಗೆ ಮಾರಾಟ ಮಾಡಿ ಆದಾಯ ಗಳಿಸುತ್ತಿದ್ದಾರೆ. ಈ ರೀತಿ ಕಸದ ಸಮಸ್ಯೆಗೆ ಪರಿಹಾರ ಕಂಡುಕೊಂಡಿರುವ ವಸತಿ ಸಮುಚ್ಚಯಗಳ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ.

## ಕಸ ವಿಲೇವಾರಿಗೆ 9 ಏಜೆನ್ಸಿ



ಹಸಿರು ದಳ, ಸಾಹಸ್, ಸ್ವಚ್ಛ್ ಇಕೋ, ಎಂಎಸ್‌ಜಿಪಿ, ಸಮರ್ಥನಂ ಸ್ವಯಂ ಸೇವಾ ಸಂಸ್ಥೆಗಳು, ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳೂ ಸೇರಿದಂತೆ ಒಟ್ಟು 9 ಏಜೆನ್ಸಿಗಳಿಗೆ ಸಗಟು ತ್ಯಾಜ್ಯ ಉತ್ಪಾದಕರಿಂದ ಕಸ ಸಂಗ್ರಹಿಸಿ ವಿಲೇವಾರಿ ಮಾಡಲು ಬಿಬಿಎಂಪಿ ಅನುಮತಿ ನೀಡಿದೆ. ಕೆಲ ಸಂಸ್ಥೆಗಳು ಸ್ವಂತ ಕಸ ಸಂಸ್ಕರಣಾ ಘಟಕಗಳನ್ನು ಹೊಂದಿವೆ. ಇನ್ನೂ ಕೆಲ ಸಂಸ್ಥೆಗಳು ಎಂಎಸ್‌ಜಿಪಿ, ಕಾರ್ಬನ್ ಮಾಸ್ಟರ್, ಮಾಲ್ಡೊ ಕಂಪನಿಗಳಿಗೆ ಅಪಾರ್ಟ್‌ಮೆಂಟ್‌ಗಳು, ಹೋಟೆಲ್‌ಗಳಿಂದ ಸಂಗ್ರಹಿಸಿದ ಕಸ ನೀಡುತ್ತಿವೆ.

**1000 ಟನ್ ಕಸ ಉತ್ಪತ್ತಿ**

ನಗರದಲ್ಲಿ ನಿತ್ಯ 5 ಸಾವಿರ ಟನ್ ಕಸ ಉತ್ಪತ್ತಿಯಾಗುತ್ತಿದೆ. ಇದರಲ್ಲಿ ಅಪಾರ್ಟ್‌ಮೆಂಟ್‌ಗಳ ಪಾಲು ಅಂದಾಜು ಒಂದು ಸಾವಿರ ಟನ್‌ನಷ್ಟಿದೆ. ಬೆಂಗಳೂರಿನಲ್ಲಿ 10-12 ಸಾವಿರ ಅಪಾರ್ಟ್‌ಮೆಂಟ್‌ಗಳಲ್ಲಿ 1.80 ಲಕ್ಷ ಫ್ಲ್ಯಾಟ್‌ಗಳಿವೆ.

**ಹೊಸ ನಿಯಮ ಶೀಘ್ರ**

ಬಿಬಿಎಂಪಿ ರೂಪಿಸಿರುವ ಘನತ್ಯಾಜ್ಯ ನಿರ್ವಹಣೆ ಬೈಲಾ-2019 ಅನ್ವಯ ನಿತ್ಯ 100 ಕೆ.ಜಿ.ಗಿಂತ ಕಡಿಮೆ ತ್ಯಾಜ್ಯ ಉತ್ಪಾದಿಸುವ ಹೋಟೆಲ್, ಆಸ್ಪತ್ರೆ, ಕಲ್ಯಾಣ ಮಂಟಪಗಳು ಹಾಗೂ 100ಕ್ಕಿಂತ ಕಡಿಮೆ ಫ್ಲ್ಯಾಟ್‌ಗಳಿರುವ ಅಪಾರ್ಟ್‌ಮೆಂಟ್‌ಗಳಲ್ಲಿ ಪಾಲಿಕೆಯೇ ಕಸ ಸಂಗ್ರಹಿಸಿ ವಿಲೇವಾರಿ ಮಾಡಲಿದೆ. ಹೊಸ ನಿಯಮವು ಶೀಘ್ರದಲ್ಲೇ ಜಾರಿಯಾಗಲಿದೆ.

## ಸಂಸ್ಕರಣೆ ಮಾಡಿದರೆ ಶುಲ್ಕ ವಿನಾಯಿತಿ ಇದೆಯೇ ?



ನಗರದಲ್ಲಿ ಕಸ ನಿರ್ವಹಣೆಗಾಗಿ ಬಳಕೆದಾರರ ಶುಲ್ಕ ವಿಧಿಸಲು ಬಿಬಿಎಂಪಿ ಮುಂದಾಗಿದೆ. ವಸತಿ ಕಟ್ಟಡಗಳಿಂದ ತಿಂಗಳಿಗೆ 200 ರೂ., ವಾಣಿಜ್ಯ ಕಟ್ಟಡಗಳಿಗೆ ಕಸದ ಪ್ರಮಾಣ ಆಧರಿಸಿ 500 ರೂ. ನಿಂದ 14 ಸಾವಿರ ರೂ.ವರೆಗೆ ಶುಲ್ಕ ವಿಧಿಸಲಾಗುತ್ತದೆ. ಆದರೆ ತಾವೇ ಕಸ ಸಂಸ್ಕರಣೆ ಮಾಡುವ ಅಥವಾ ಖಾಸಗಿ ಸಂಸ್ಥೆಗಳಿಗೆ ಕಸ ನೀಡುವ ಅಪಾರ್ಟ್‌ಮೆಂಟ್‌ಗಳಿಗೆ ಬಳಕೆದಾರರ ಶುಲ್ಕದಿಂದ ವಿನಾಯಿತಿ ನೀಡಲು ಚಿಂತಿಸಲಾಗಿದೆ. ಈ ಬಗ್ಗೆ ಸದ್ಯವೇ ಅಧಿಕೃತ ಆದೇಶ ಹೊರಬೀಳಲಿದೆ.

VK
ವಿಜಯ ಕರ್ನಾಟಕ

# ಅಪಾರ್ಟ್‌ಮೆಂಟ್ ತ್ಯಾಜ್ಯಕ್ಕೆ ಎನ್‌ಜಿಒಗಳ ಹೆಗಲು

» ನಮ್ಮ ಮೊದಲ ಪುಟದಿಂದ

**ಮುಂಚೂಣಿಯಲ್ಲಿ ಹಸಿರು ದಳ:** ಅಪಾರ್ಟ್‌ಮೆಂಟ್‌ಗಳಿಂದ ಹಸಿ, ಒಣ ಮತ್ತು ಅನುಪಯುಕ್ತ ಕಸ ಸಂಗ್ರಹಿಸುತ್ತಿರುವ ಏಜೆನ್ಸಿಗಳ ಪೈಕಿ 'ಹಸಿರು ದಳ' ಸಂಸ್ಥೆ ಮುಂಚೂಣಿಯಲ್ಲಿದೆ. ಈ ಸಂಸ್ಥೆ 30 ಸಾವಿರ ಫ್ಲ್ಯಾಟ್‌ಗಳಿಂದ ಕಸ ಸಂಗ್ರಹಿಸುತ್ತಿದ್ದು, ಈ ಕಾರ್ಯಕ್ಕೆ 7400 ಚಿಂದಿ ಆಯುವವರನ್ನು ನೇಮಿಸಿದೆ. ಹಸಿರು ದಳ ಸಂಸ್ಥೆಯು ಹಸಿ ತ್ಯಾಜ್ಯ ಸಂಗ್ರಹಕ್ಕೆ ಪ್ರತಿ ಕೆ.ಜಿ.ಗೆ 3 ರೂ., ಒಣ ಕಸಕ್ಕೆ ಕೆ.ಜಿ.ಗೆ 1 ರೂ., ಅನುಪಯುಕ್ತ ತ್ಯಾಜ್ಯಕ್ಕೆ 5 ರೂ. ಶುಲ್ಕ ವಿಧಿಸುತ್ತಿದೆ. ಇದಲ್ಲದೇ ಪ್ರತಿ ಫ್ಲ್ಯಾಟ್‌ನಿಂದ ತಿಂಗಳಿಗೆ 75 ರೂ. ಸೇವಾ ಶುಲ್ಕ ಪಡೆಯುತ್ತಿದೆ. ಉದ್ಯಾನ ತ್ಯಾಜ್ಯ, ಇ-ತ್ಯಾಜ್ಯ , ಬ್ಯಾಟರಿ ಸಂಗ್ರಹಿಸಿ ವಿಲೇವಾರಿ ಮಾಡಲು ಲೋಡ್ ಲೆಕ್ಕದಲ್ಲಿ ಶುಲ್ಕ ಪಡೆಯುತ್ತಿದೆ.

''ಶೋಭಾ ಹಿಲ್ ವ್ಯೂ ಅಪಾರ್ಟ್‌ಮೆಂಟ್‌ನಲ್ಲಿ 576 ಫ್ಲ್ಯಾಟ್‌ಗಳಿದ್ದು, ನಿತ್ಯ 200 ಕೆ.ಜಿ. ಹಸಿ ಕಸ ಉತ್ಪತ್ತಿಯಾಗುತ್ತಿದೆ. ಇದನ್ನು ಹಂದಿ ಸಾಕಣೆದಾರರೇ ಕೊಂಡೊಯ್ಯುತ್ತಿದ್ದು, ಅವರಿಗೆ ತಿಂಗಳಿಗೆ 14,500 ರೂ. ನೀಡಲಾಗುತ್ತಿದೆ,'' ಎಂದು ನಿವಾಸಿಯೊಬ್ಬರು ಹೇಳಿದರು.

## ನಿಯಮ ಉಲ್ಲಂಘಿಸಿ ಕಸ ಸಂಗ್ರಹ

ಪಾಲಿಕೆಯ ಕೆಲ ಗುತ್ತಿಗೆದಾರರು ನಿಯಮಬಾಹಿರವಾಗಿ ಕೆಲ ಅಪಾರ್ಟ್‌ಮೆಂಟ್‌ಗಳು, ಹೋಟೆಲ್, ಕಲ್ಯಾಣ ಮಂಟಪ, ಆಸ್ಪತ್ರೆಗಳಿಂದ ಹಣ ಪಡೆದು, ಉತ್ಪತ್ತಿಯಾಗುವ ಕಸವನ್ನು ಸಂಸ್ಕರಣಾ ಘಟಕಗಳು ಹಾಗೂ ಭೂಭರ್ತಿ ಘಟಕಕ್ಕೆ ಸಾಗಿಸಿ ವಿಲೇವಾರಿ ಮಾಡುತ್ತಿದ್ದಾರೆ. ಗುತ್ತಿಗೆದಾರರು ಮತ್ತು ಪೌರ ಕಾರ್ಮಿಕರು ಕೂಡ ಮನೆ ಮನೆಗಳಿಂದ ತ್ಯಾಜ್ಯ ಸಂಗ್ರಹಕ್ಕೆ ಹೆಚ್ಚಿನ ಒತ್ತು ಕೊಡದೆ, ಹಣ ನೀಡುವ ವಸತಿ ಸಮುಚ್ಚಯಗಳಿಂದ ಕಸ ಸಂಗ್ರಹಿಸುತ್ತಿದ್ದಾರೆ ಎಂಬ ಆರೋಪವಿದೆ.

VK ವಿಜಯ ಕರ್ನಾಟಕ

# ಮೊಳೆ ಮುಕ್ತ ಮರ ಅಭಿಯಾನ

■ **ವಿಕ ಸುದ್ದಿಲೋಕ** ಬೆಂಗಳೂರು

ಮರ-ಗಿಡಗಳ ಬಗ್ಗೆ ವಿಶೇಷ ಒಲವು ಹೊಂದಿರುವ ಕೇಶವ ಸೇವಾ ಸಮಿತಿ 'ಮೊಳೆ ಮುಕ್ತ ಮರಗಳು' ಎಂಬ ಅಭಿಯಾನದಡಿ ಭಾನುವಾರ ಒಂದೇ ದಿನ 100 ಮರಗಳಲ್ಲಿ 75 ಫಲಕಗಳು, 2500 ಪಿನ್‌ಗಳು ಹಾಗೂ 568 ಮೊಳೆಗಳನ್ನು ಮರಗಳಿಂದ ಹೊರ ತೆಗೆದಿದೆ.

**75 ಫಲಕ, 2500 ಪಿನ್, 568 ಮೊಳೆ ತೆರವು**



ಮೊಳೆಮುಕ್ತ ಅಭಿಯಾನದಲ್ಲಿ ಪಾಲ್ಗೊಂಡಿದ್ದ ಗಣ್ಯರು.

ಸ್ವಾಮಿ ವಿವೇಕಾನಂದರ ಜಯಂತಿ ಅಂಗವಾಗಿ ಹಲಸೂರು ಲೇಕ್ ಗಾರ್ಡನ್‌ನಲ್ಲಿ ಹಮ್ಮಿಕೊಂಡಿದ್ದ 'ಮೊಳೆ ಮುಕ್ತ ಮರಗಳು' ಅಭಿಯಾನಕ್ಕೆ ಸಂಸದ ಪಿ.ಸಿ. ಮೋಹನ್ ಅವರು ಸ್ವಾಮಿ ವಿವೇಕಾನಂದರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಚಾಲನೆ ನೀಡಿದರು. ಬಳಿಕ ಮರಗಳಲ್ಲಿ ಹಾಕಿದ್ದ ಫಲಕಗಳು ಹಾಗೂ ಪಿನ್ ಮತ್ತು ಮೊಳೆ ತೆಗೆಯುವ ಕಾರ್ಯದಲ್ಲೂ ಪಾಲ್ಗೊಂಡಿದ್ದರು.

ಮುಂದಿನ ಎಲ್ಲ ಭಾನುವಾರಗಳಲ್ಲೂ ಈ ಅಭಿಯಾನ ನಡೆಯಲಿದೆ. ಮರಗಳನ್ನು ರಕ್ಷಿಸುವ ಇಚ್ಛೆವುಳ್ಳವರು ಸ್ವಯಂಪ್ರೇರಿತವಾಗಿ ಈ ಅಭಿಯಾನದಲ್ಲಿ ಪಾಲ್ಗೊಳ್ಳಬಹುದು.

ರಾಮಕೃಷ್ಣ ಮಠದ ಅಧ್ಯಕ್ಷ ತತ್ವರೂಪಾನಂದ ಸ್ವಾಮೀಜಿ, ಅರಣ್ಯ ನಿಗಮದ ಅಧ್ಯಕ್ಷೆ ಹಾಗೂ ನಟಿ ತಾರಾ ಅನುರಾಧ, ಬಿಜೆಪಿ ಮುಖಂಡ ಗೋಪಿನಾಥರೆಡ್ಡಿ, ಕೇಶವ ಸಮಿತಿ ಸಂಯೋಜಕ ಪ್ರಕಾಶ್‌ರಾಜು ಮತ್ತಿತರರು ಪಾಲ್ಗೊಂಡಿದ್ದರು.

VK ವಿಜಯ ಕರ್ನಾಟಕ

### ಅರಣ್ಯ ಇಲಾಖೆಯಿಂದ ಪಾಲಿಕೆಗೆ ವರ್ಗಾವಣೆ ಬಳಿಕ ನಿರ್ಲಕ್ಷ್ಯ

# ಮಡಿವಾಳ ಕೆರೆಯ ಕೂಗಿಗೆ ಓಗೊಡುವರಿಲ್ಲ





ವಿಕ ವಿಶೇಷ

**272** ಎಕರೆ ಕೆರೆಯ ವಿಸ್ತೀರ್ಣ

■ **ರವಿಕುಮಾರ ಬೆಟ್ಟದಪುರ** ಬೆಂಗಳೂರು
ravikumarb0519@gmail.com

ಬಣ್ಣ ಬಣ್ಣದ ಪಕ್ಷಿಗಳು ನನ್ನನ್ನು ಹುಡುಕಿಕೊಂಡು ಬರುತ್ತವೆ... ನನ್ನೊಡಲೊಳಗೆ ಲಕ್ಷಾಂತರ ಜಲಚರಗಳು ಸ್ವಚ್ಛಂದವಾಗಿ ಈಜಾಡುತ್ತವೆ.... ಈ ಸೊಬಗನ್ನು ನೋಡಿ ಆಸ್ವಾದಿಸಲು ನಿತ್ಯ ನೂರಾರು ಜನ ಬರುತ್ತಾರೆ. ಆದರೆ, ನನ್ನೊಡಲ ಸೇರುವ ಮಲಿನ ನೀರು ದಿನೇದಿನೆ ಹೆಚ್ಚುತ್ತಲೇ ಇದೆ. ಕೊಳಚೆ ಸೇರಿ ಉಸಿರುಗಟ್ಟಿಸುತ್ತಿರುವ ನನ್ನ ಸ್ವಾಸ್ಥ್ಯವನ್ನು ಯಾರಾದರೂ ರಕ್ಷಿಸಿ......

ಮಡಿವಾಳ ಕೆರೆಯ ದಂಡೆಯಲ್ಲಿ ಸಂಚರಿಸುವವರಿಗೆ ನಿತ್ಯ ಕೇಳುವ ಕೆರೆಯ ನೋವಿನ ಕೂಗಿದು.

ಮಡಿವಾಳ ಕೆರೆ ಎಂದರೆ ತಟ್ಟನೆ ನೆನಪಾಗುವುದು ಬೋಟಿಂಗ್. ಜತೆಗೆ ಮನೋಲ್ಲಾಸ ಗೊಳಿಸುವ ನಾನಾ ಪಕ್ಷಿಗಳ ಇಂಪು. ಆದರೆ, ಕೆರೆ ಸಂರಕ್ಷಣೆ ಜವಾಬ್ದಾರಿ ಅರಣ್ಯ ಇಲಾಖೆ ತೆಕ್ಕೆಯಿಂದ ಬಿಬಿಎಂಪಿ ನಿಯಂತ್ರಣಕ್ಕೆ ವರ್ಗಾವಣೆಗೊಂಡ ಬಳಿಕ ಬೋಟಿಂಗ್ ವ್ಯವಸ್ಥೆ ಸ್ಥಗಿತಗೊಂಡಿದೆ. ಕೊಳಚೆ ನೀರು ಸೇರ್ಪಡೆಯಾಗಿ ದುರ್ವಾಸನೆ ಬೀರುತ್ತಿದೆ. ಉದ್ಯಾನದಲ್ಲಿ ಗಿಡಗಂಟಿಗಳು ಬೆಳೆದುಕೊಂಡಿವೆ.

**ಜನರಿಗೆ ಮುಕ್ತ ಸಂಚಾರವಿಲ್ಲ:** ಮಡಿವಾಳ ಕೆರೆಯು ಅರಣ್ಯ ಇಲಾಖೆಯ ನಿರ್ವಹಣೆಯಲ್ಲಿದ್ದ ವೇಳೆ ಜನರಿಗೆ ಮುಕ್ತ ಸಂಚಾರ ಕಲ್ಪಿಸಲಾಗಿತ್ತು. ನಿತ್ಯ ನೂರಾರು ಮಂದಿ ಅಲ್ಲಿ ವಾಯುವಿಹಾರ ನಡೆಸುತ್ತಿದ್ದರು. ಹಲವು ಪ್ರಭೇದಗಳ ಪಕ್ಷಿಗಳನ್ನು ನೋಡಿ ಪಕ್ಷಿ ಪ್ರೇಮಿಗಳೂ ಸಂತಸ ಗೊಳ್ಳುತ್ತಿದ್ದರು. ಆದರೆ, ಪ್ರಸ್ತುತ ಇವೆಲ್ಲವೂ ಸ್ಥಗಿತವಾಗಿದೆ. ಕೆರೆಯ ಪ್ರವೇಶ ದ್ವಾರಕ್ಕೆ ಬೀಗ ಹಾಕಲಾಗಿದೆ.



**ಕೆರೆಯ ಪ್ರವೇಶದ್ವಾರಕ್ಕೆ ಬೀಗ, ಬೋಟಿಂಗ್ ಸ್ಥಗಿತ**

**ಕೊಳಚೆ ನೀರು ಸೇರಿ ಮಲಿನ ಗೊಳ್ಳುತ್ತಿದೆ ಜಲಮೂಲ**

**ಒಣಗುತ್ತಿದೆ ಉದ್ಯಾನ:** ಕೆರೆಯ ಆವರಣದಲ್ಲೇ ಇರುವ ಉದ್ಯಾನ ಸಾರ್ವಜನಿಕರ ಪ್ರಮುಖ ಆಕರ್ಷಣೆಯಾಗಿತ್ತು. ಇದೀಗ ಗಿಡಗಳೆಲ್ಲ ನೀರಿಲ್ಲದೆ ಒಣಗುತ್ತಿವೆ. ಕಳೆ ಬೆಳೆದು ನಿಂತಿದೆ. ಔಷಧ ಗಿಡಗಳ ತೋಟದ ಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ.

**ಎಸ್‌ಟಿಪಿ ಕಾಮಗಾರಿ ವಿಳಂಬ:** ಎಸ್‌ಟಿಪಿ ಘಟಕ ನಿರ್ಮಾಣ ಪೂರ್ಣಗೊಳ್ಳದ ಕಾರಣ ಒಳಚರಂಡಿ ನೀರು ಕೆರೆಯ ಒಡಲು ಸೇರಿ ಸಾವಿರಾರು ಜಲಚರಗಳು ಸಾವನ್ನಪ್ಪುತ್ತಿವೆ. ಮಲಿನಗೊಂಡ ನೀರಿನಿಂದಾಗಿ ಪಕ್ಷಿಗಳ ಆಗಮನವೂ ಕಡಿಮೆಯಾಗಿದೆ.

ನಾಲ್ಕು ಎಂಎಲ್‌ಡಿ ಸಾಮರ್ಥ್ಯದ ಕೊಳಚೆ ನೀರು ಸಂಸ್ಕರಣಾ ಘಟಕವನ್ನು 12 ಎಂಎಲ್‌ಡಿಗೆ ಏರಿಸುವ ಉದ್ದೇಶದಿಂದ ಕಾಮಗಾರಿ ನಡೆಸಲಾಗುತ್ತಿದೆ. ಆದರೆ, ವರ್ಷಗಳು ಉರುಳಿದರೂ ಕಾಮಗಾರಿ ಪೂರ್ಣಗೊಂಡಿಲ್ಲ.

### ಈಜಲು ಬೇಲಿ ಹಾರುವ ಪುಂಡರು

ಮಡಿವಾಳ ಕೆರೆಗೆ ನೇಮಿಸಿರುವ ಭದ್ರತಾ ಸಿಬ್ಬಂದಿಯ ವೈಫಲ್ಯದಿಂದ ಸುತ್ತಮುತ್ತಲ ಪ್ರದೇಶದ ಪುಂಡರು ಕೆರೆಯಲ್ಲಿ ಈಜಲು ಕೆರೆಯ ರಕ್ಷಣೆಗೆ ಹಾಕಿರುವ ತಂತಿಬೇಲಿ ಹಾರಿಹೋಗುವುದು ಸಾಮಾನ್ಯವಾಗಿದೆ.

### ಜೀವ ವೈವಿಧ್ಯದ ಕೆರೆ

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ರಾಮಲಿಂಗಾ ರೆಡ್ಡಿ ನೇತೃತ್ವದಲ್ಲಿ ಈ ಕೆರೆಯನ್ನು ಜೀವ ವೈವಿಧ್ಯದ ಕೆರೆಯನ್ನಾಗಿಸುವ ಯೋಜನೆಗೆ ಚಾಲನೆ ನೀಡಲಾಗಿತ್ತು. ಈ ಯೋಜನೆಗೆ ಸರಕಾರದಿಂದಲೂ ಹಣ ಮಂಜೂರು ಮಾಡಲಾಗಿತ್ತು. ಆದರೆ, ಯೋಜನೆ ಕಾಗದಕ್ಕೆ ಮಾತ್ರ ಸೀಮಿತಗೊಂಡಿದೆ.

**ಸರಕಾರ ಕೆರೆಗಳನ್ನು ವಾಣಿಜ್ಯೀಕರಣ ಗೊಳಿಸಬಾರದು ಎಂದು ನಿರ್ದೇಶಿಸಿರುವ ಕಾರಣ ಬೋಟಿಂಗ್ ಸ್ಥಗಿತಗೊಳಿಸಲಾಗಿದೆ. ಕೆರೆಯಲ್ಲಿನ ಕಸ ತೆಗೆಸಲಾಗುವುದು. ಅಕ್ರಮ ನುಸುಳುವಿಕೆಯನ್ನು ತಡೆಗಟ್ಟಲಾಗುವುದು.**

-**ಮೋಹನ್ ಕೃಷ್ಣ,** ಮುಖ್ಯ ಎಂಜಿನಿಯರ್, ಕೆರೆಗಳ ವಿಭಾಗ

**ಯಾವುದೋ ಕುಂಟು ನೆಪ ಹೇಳಿಕೊಂಡು ಬೋಟಿಂಗ್ ಸ್ಥಗಿತಗೊಳಿಸಲಾಗಿದೆ. ಜೀವ ವೈವಿಧ್ಯದ ತಾಣ ಹಾಳಾಗಲು ಬಿಬಿಎಂಪಿ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ. ಇದರಿಂದ ಕೆರೆಯ ಅಂಗಳಕ್ಕೆ ಬರುತ್ತಿದ್ದ ನೂರಾರು ಪ್ರಭೇದದ ಪಕ್ಷಿಗಳು ನಾಪತ್ತೆಯಾಗಿವೆ.**

- **ಆಶಾ,** ಪಕ್ಷಿ ಪ್ರೇಮಿ, ಸ್ಥಳೀಯ ವಿದ್ಯಾರ್ಥಿನಿ



ಪ್ರವೇಶ ದ್ವಾರಕ್ಕೆ ಬೀಗ

ವಿಜಯ ಕರ್ನಾಟಕ

# ಶೂನ್ಯಕ್ಕೆ ಇಳಿದ ಕೋವಿಡ್ ಸಾವು

**ಬೆಂಗಳೂರು:** ನಗರದಲ್ಲಿ ಇದೇ ಮೊದಲನೇ ಬಾರಿಗೆ ಕೋವಿಡ್ ಸೋಂಕಿನಿಂದ ಸಾವನ್ನಪ್ಪಿದವರ ಸಂಖ್ಯೆ ಶೂನ್ಯಕ್ಕಿಳಿದಿದೆ.



ಹೊಸದಾಗಿ 453 ಸೋಂಕು ಪ್ರಕರಣಗಳು ಪತ್ತೆಯಾಗಿದ್ದು, ಸೋಂಕಿನಿಂದ ಮುಕ್ತರಾಗಿ ನಾನಾ ಆಸ್ಪತ್ರೆಗಳಿಂದ 261 ಮಂದಿ ಬಿಡುಗಡೆಯಾಗಿದ್ದಾರೆ.

ಪ್ರಸ್ತುತ, 6,068 ಸಕ್ರಿಯ ಪ್ರಕರಣಗಳಿದ್ದು, ಒಟ್ಟು ಪ್ರಕರಣಗಳ ಸಂಖ್ಯೆ 3,92,581 ದಾಟಿದೆ. ಸೋಂಕಿನಿಂದ ಇದುವರೆಗೆ 4,346 ಮಂದಿ ಮೃತಪಟ್ಟಿದ್ದು, ಸೋಂಕಿನಿಂದ ಮುಕ್ತರಾಗಿ 3,82,166 ಮಂದಿ ಆಸ್ಪತ್ರೆಗಳಿಂದ ಬಿಡುಗಡೆಯಾಗಿದ್ದಾರೆ.

VK
ವಿಜಯ ಕರ್ನಾಟಕ

### ಪೂಲ್ ಟೆಸ್ಟ್ ವೇಳೆ ಪಾಸಿಟಿವ್, ಪ್ರತ್ಯೇಕ ಪರೀಕ್ಷೆಯಲ್ಲಿ ನೆಗೆಟಿವ್

# ಬ್ರಿಟನ್ ಪ್ರಯಾಣಿಕರ ತಪಾಸಣೆ

■ **ವಿಕ ಸುದ್ದಿಲೋಕ** ಬೆಂಗಳೂರು

ರೂಪಾಂತರ ಸೋಂಕು ಕಾಣಿಸಿಕೊಂಡಿರುವ ಬ್ರಿಟನ್‌ನಿಂದ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಭಾನುವಾರ ಮುಂಜಾನೆ ಆಗಮಿಸಿದ ವಿಮಾನದಲ್ಲಿ ಬಂದ ಎಲ್ಲ 289 ಪ್ರಯಾಣಿಕರನ್ನು ತಪಾಸಣೆಗೆ ಒಳಪಡಿಸಲಾಯಿತು.

**ಪೂಲ್‌ಟೆಸ್ಟ್ :** ತಲಾ ನಾಲ್ವರ ಮಾದರಿ ಸೇರಿಸಿ ಪೂಲ್ ಟೆಸ್ಟ್ ಮಾಡಲಾಗಿದ್ದು, ಆರಂಭ ದಲ್ಲಿ ಒಂದು ಮಾದರಿಯಲ್ಲಿ ಪಾಸಿಟಿವ್ ಬಂದಿದೆ. ಹೀಗಾಗಿ, ಆ ನಾಲ್ವರನ್ನು ಪ್ರತ್ಯೇಕವಾಗಿ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಒಳಪಡಿಸಿದಾಗ ನೆಗೆಟಿವ್ ಬಂದಿದೆ. ಯಾವ ಕಾರಣಕ್ಕೆ ಪೂಲ್ ಟೆಸ್ಟ್ ನಲ್ಲಿ ಪಾಸಿಟಿವ್ ಬಂದು ನಂತರ ನೆಗೆಟಿವ್ ಬಂದಿದೆ ಎಂಬುದರ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ.

ಪಾಸಿಟಿವ್ ಬಂದವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಜತೆಗೆ ಜಿನೋಮ್ ಸೀಕ್ವೆನ್ಸಿಂಗ್‌ಗೆ ಒಳಪಡಿಸಲು ಉದ್ದೇಶಿಸಲಾಗಿದೆ. ಆದರೆ, ಪರೀಕ್ಷಾ ವರದಿ ಗೊಂದಲ ಕಾರಿಯಾಗಿರುವುದರಿಂದ ನಾಲ್ವರನ್ನು ನಿಗಾದಲ್ಲಿ ಇರಿಸಲಾಗಿದೆ.



ಬ್ರಿಟನ್ ಪ್ರಯಾಣಿಕರನ್ನು ಕೆಐಎನಲ್ಲಿ ತಪಾಸಣೆಗೆ ಒಳಪಡಿಸಲಾಯಿತು.



ಆರ್‌ಟಿ-ಪಿಸಿಆರ್ ನೆಗೆಟಿವ್ ಬಂದಿರುವ ಎಲ್ಲ ಪ್ರಯಾಣಿಕರ ಕೈಗೆ 14 ದಿನಗಳ ಹೋಂ ಕ್ವಾರಂಟೈನ್ ಸೀಲ್ ಹಾಕಿ ಕಳುಹಿಸಲಾಯಿತು. ಇದೇ ವೇಳೆ ಸ್ಥಳೀಯ ಸಿಮ್ ಇಲ್ಲದವರಿಗೆ ಸ್ಥಳೀಯ ಸಿಮ್ ಕಾರ್ಡ್ ನೀಡಿ ಆ ನಂಬರ್ ಸದಾ ಚಾಲ್ತಿಯಲ್ಲಿಟ್ಟುಕೊಳ್ಳುವಂತೆ ಅಧಿಕಾರಿಗಳು ಸೂಚನೆ ನೀಡಿದರು.

ಬ್ರಿಟನ್‌ನಿಂದ ಮರಳಿದ ಪ್ರಯಾಣಿಕರಿಗಾಗಿ ಪ್ರತ್ಯೇಕ ಸಾಲು, ಆಸನ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ಫಲಿತಾಂಶ ವಿಳಂಬವಾಗಿದೆ. ನಾವು ಮನೆಗೆ ಹೋಗಲು ವಿಳಂಬ ಮಾಡಲಾಗುತ್ತಿದೆ ಎಂದು ಕೆಲ ಪ್ರಯಾಣಿಕರು ಅಸಮಾಧಾನ ವ್ಯಕ್ತಪಡಿಸಿದರು. ಆರೋಗ್ಯ ಇಲಾಖೆ ಅಧಿಕಾರಿಗಳು ಸಮಾಧಾನಪಡಿಸಿ ಎಲ್ಲರನ್ನೂ ಪರೀಕ್ಷೆ ಮಾಡಿ ನಂತರ ಕಳುಹಿಸಿದರು.

VK
ವಿಜಯ ಕರ್ನಾಟಕ

# ಅವಕಾಶ ಸಿಕ್ಕರೆ ನಾನೇ ಮೊದಲ ಲಸಿಕೆ ಪಡೆಯುವೆ

ಸಾರ್ವಜನಿಕರಲ್ಲಿ ಲಸಿಕೆ ಕುರಿತು ವಿಶ್ವಾಸ ಮೂಡಿಸಲು ನಾನೇ ಮೊದಲ ಲಸಿಕೆ ತೆಗೆದುಕೊಳ್ಳುತ್ತೇನೆ ಎಂದು ಸಚಿವ ಡಾ. ಕೆ. ಸುಧಾಕರ್ ಹೇಳಿದರು.

ಲಸಿಕೆ ಕುರಿತು ಜನರಲ್ಲಿ ಆತಂಕ, ಭಿನ್ನಾಭಿಪ್ರಾಯಗಳಿರುವ ಕಾರಣ ಯಾರಾದರೂ ಜನಪ್ರತಿನಿಧಿಗಳು ಲಸಿಕೆ ತೆಗೆದುಕೊಳ್ಳುವರೇ ಎಂಬ ಪ್ರಶ್ನೆಗೆ, ''ಆರೋಗ್ಯ ಸೇವಕರ ಜತೆಗೆ ಬೇರೆ ಯಾರು ಲಸಿಕೆ ಪಡೆಯಬಹುದು ಎಂಬ ಬಗ್ಗೆ ಒಂದೆರಡು ದಿನಗಳಲ್ಲಿ ಕೇಂದ್ರ ಸರಕಾರ ಮಾರ್ಗಸೂಚಿ ಹೊರಡಿಸಲಿದೆ. ಲಸಿಕೆ ಕುರಿತು ಜನರಲ್ಲಿ ವಿಶ್ವಾಸ ಮೂಡಿಸಲು ನಾನೇ ಮೊದಲ ಲಸಿಕೆ ತೆಗೆದುಕೊಳ್ಳುತ್ತೇನೆ,'' ಎಂದು ಸಚಿವರು ಉತ್ತರಿಸಿದರು.

ಸಚಿವ ಸುಧಾಕರ್ ಅವರಿಗೆ ಕೋವಿಡ್ ಸೋಂಕು ತಗಲಿತ್ತು. ಚಿಕಿತ್ಸೆ ಪಡೆದು ಗುಣಮುಖರಾಗಿರುವ ಕಾರಣ ಅವರಿಗೆ ಲಸಿಕೆ ನೀಡುವ ಸಾಧ್ಯತೆ ಕಡಿಮೆ.

ವಿಜಯ ಕರ್ನಾಟಕ

ರಾಜ್ಯಕ್ಕೆ ಒಟ್ಟು 24 ಲಕ್ಷ ಡೋಸ್ | ಲಸಿಕೆ ದಾಸ್ತಾನು ಪರಿಶೀಲಿಸಿದ ಸಚಿವ ಸುಧಾಕರ್

# ಲಸಿಕೆ ವಿತರಣೆಗೆ ಸಿದ್ಧತೆ ಪೂರ್ಣ

**ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ಕೋವಿಡ್-19 ಲಸಿಕೆ ಸಂಗ್ರಹ ಮತ್ತು ವಿತರಣೆಗೆ ಸಿದ್ಧತೆ ಪೂರ್ಣಗೊಂಡಿದೆ. ಮೊದಲ ಹಂತದಲ್ಲಿ ರಾಜ್ಯಕ್ಕೆ 13.90 ಲಕ್ಷ ಡೋಸ್ ಲಸಿಕೆ ಸಿಗಲಿವೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಬೆಂಗಳೂರಿನ ಆನಂದರಾವ್ ವೃತ್ತದಲ್ಲಿರುವ ಆರೋಗ್ಯ ಇಲಾಖೆಯ ಸಂಗ್ರಹಾಗಾರದಲ್ಲಿ ಲಸಿಕೆ ಸಂಗ್ರಹ ದಾಸ್ತಾನು ಪರಿಶೀಲನೆ ನಡೆಸಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ''ರಾಜ್ಯದಲ್ಲಿ ಪ್ರಮುಖವಾಗಿ ಬೆಂಗಳೂರು ಹಾಗೂ ಬೆಳಗಾವಿಯಲ್ಲಿ 2 ಲಸಿಕೆ ಸಂಗ್ರಹಾಗಾರಗಳಿವೆ. ಅದರ, ಜತೆಗೆ ಚಿತ್ರದುರ್ಗ, ಕಲಬುರಗಿ, ದಕ್ಷಿಣ ಕನ್ನಡ, ಮೈಸೂರು ಮತ್ತು ಬಾಗಲಕೋಟದಲ್ಲಿ 5 ಪ್ರಾದೇಶಿಕ ಸಂಗ್ರಹಾಗಾರ ಇವೆ. ಪ್ರತಿ ಜಿಲ್ಲೆಯಲ್ಲೂ ಒಂದು ಕಾರ್ಪೊರೇಷನ್ ಲಸಿಕೆ ಸಂಗ್ರಹ ವ್ಯವಸ್ಥೆ ಇದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 50 ಬ್ಲಾಕ್ ಇವೆ. ಒಟ್ಟು 2,767 ಕೋಲ್ಡ್ ಚೈನ್ ಪಾಯಿಂಟ್‌ಗಳಿವೆ,'' ಎಂದು ತಿಳಿಸಿದರು.



ಬೆಂಗಳೂರಿನ ಆನಂದ್‌ರಾವ್ ವೃತ್ತದಲ್ಲಿರುವ ಉಗ್ರಾಣದಲ್ಲಿ ಲಸಿಕೆ ದಾಸ್ತಾನು ಸಿದ್ಧತೆಯ ಬಗ್ಗೆ ಸಚಿವ ಡಾ. ಕೆ. ಸುಧಾಕರ್ ಪರಿಶೀಲನೆ ನಡೆಸಿದರು.

''ಲಸಿಕೆ ಸಾಗಿಸಲು ರಾಜ್ಯದಲ್ಲಿ 900 ಲಸಿಕೆ ಕ್ಯಾರಿಯರ್‌ಗಳಿವೆ. ಲಸಿಕೆಯನ್ನು ಮೊದಲಿಗೆ ಪ್ರಾದೇಶಿಕ ಸಂಗ್ರಹ ಕೇಂದ್ರಗಳಿಗೆ ಕಳುಹಿಸಲಾಗುತ್ತದೆ. ನಂತರ ಅಲ್ಲಿಂದ ಜಿಲ್ಲಾ ಮಟ್ಟಕ್ಕೆ ಕಳುಹಿಸಲಾಗುತ್ತದೆ. ಬೆಂಗಳೂರಿನಲ್ಲಿ ಎರಡು ವಾಕ್-ಇನ್ ಕೂಲರ್‌ಗಳಿವೆ. ಒಂದರಲ್ಲಿ 45 ಲಕ್ಷ ಡೋಸ್ ಸಂಗ್ರಹಿಸಲು ಅವಕಾಶವಿದೆ. ಇದೇ ರೀತಿ ಒಂದು ವಾಕ್-ಇನ್ ಫ್ರೀಜರ್ ಇರುತ್ತದೆ. ಅದರಲ್ಲಿ 40 ಲಕ್ಷ ಡೋಸ್ ಸಂಗ್ರಹ ಸಾಮರ್ಥ್ಯವಿದೆ. ಕೇಂದ್ರ ಸರಕಾರ ಇನ್ನೂ ಒಂದು ವಾಕ್-ಇನ್ ಫ್ರೀಜರ್ ನೀಡಲಿದೆ,'' ಎಂದು ಸಚಿವರು ಮಾಹಿತಿ ನೀಡಿದರು.

''ಮೊದಲ ಹಂತದಲ್ಲಿ 13.90 ಲಕ್ಷ ಕೊರೊನಾ ಲಸಿಕೆ ಬರಲಿದೆ. 24 ಲಕ್ಷ ಸಿರಿಂಜ್‌ಗಳು ಕೇಂದ್ರದಿಂದ ಈಗಾಗಲೇ ಬಂದಿವೆ. ರಾಜ್ಯಕ್ಕೆ ಒಟ್ಟು 24 ಲಕ್ಷ ಡೋಸ್ ಬರಲಿವೆ,'' ಎಂದು ವಿವರಿಸಿದರು.

## ರಾಜಕಾರಣಿಗಳ ತಪ್ಪಿಲ್ಲ

ಬಿಜೆಪಿಯ ಸಚಿವರು, ಶಾಸಕರು, ಮುಖಂಡರ ಜತೆ ಯುವರಾಜ್ ಫೋಟೊ ತೆಗೆಸಿಕೊಂಡಿರುವ ಕುರಿತು ಕೇಳಿದ ಪ್ರಶ್ನೆಗೆ ''ಯಾರು ಬೇಕಾದರೂ ರಾಜಕೀಯ ಮುಖಂಡರೊಂದಿಗೆ ಫೋಟೊ ತೆಗೆಸಿಕೊಳ್ಳುತ್ತಾರೆ. ಯಾರೋ ಅಪರಾಧಿಯೊಬ್ಬ ರಾಜಕಾರಣಿಗಳ ಜತೆ ಫೋಟೊ ತೆಗೆಸಿಕೊಂಡರೆ ಅದನ್ನು ರಾಜಕಾರಣಿಗಳ ತಪ್ಪು ಎನ್ನಲಾಗದು,'' ಎಂದು ಸಚಿವ ಸುಧಾಕರ್ ಪ್ರತಿಕ್ರಿಯಿಸಿದರು.

''ಸಾರ್ವಜನಿಕರಿಗೆ ಲಸಿಕೆ ನೀಡಲು ಎರಡು ತಿಂಗಳು ಸಮಯ ಬೇಕಾಗಬಹುದು. ಪ್ರತಿಯೊಬ್ಬರಿಗೂ ಲಸಿಕೆ ಬೇಕೆ ಬೇಡವೇ ಎಂಬುದನ್ನು ತಜ್ಞರ ಸಲಹೆ ಮೇರೆಗೆ ಸರಕಾರ ತೀರ್ಮಾನಿಸಲಿದೆ. ಕೊರೊನಾ ವಾರಿಯರ್‌ಗಳ ಬಳಿಕ ವೃದ್ಧರು, ಅಶಕ್ತರಿಗೆ ನೀಡಲಾಗುವುದು,'' ಎಂದರು.

VK
ವಿಜಯ ಕರ್ನಾಟಕ

# ಲಸಿಕೆ ಸನ್ನದ್ಧತೆ ಪ್ರಧಾನಿ ಚರ್ಚೆ

**ಹೊಸದಿಲ್ಲಿ:** ಜನವರಿ 16ರಿಂದ ದೇಶಾದ್ಯಂತ ಸಾರ್ವತ್ರಿಕ ಕೊರೊನಾ ಲಸಿಕೆ ಅಭಿಯಾನ ಆರಂಭವಾಗಲಿರುವ ಹಿನ್ನೆಲೆಯಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಅಂತಿಮ ಸನ್ನದ್ಧತೆ ಬಗ್ಗೆ ಚರ್ಚೆ ನಡೆಸಲಿದ್ದಾರೆ. ಸಂಜೆ 4 ಗಂಟೆಗೆ ವಿಡಿಯೊ ಕಾನ್ಫರೆನ್ಸ್ ನಡೆಯಲಿದ್ದು, ರಾಜ್ಯಗಳಿಗೆ ಲಸಿಕೆ ಲಭ್ಯತೆ ಮತ್ತು ಸರಬರಾಜು ವಿಧಾನದ ಬಗ್ಗೆ ಮಾಹಿತಿ ನೀಡಲಿದ್ದಾರೆ.



ಈ ಮಧ್ಯೆ, ರಾಜ್ಯದಲ್ಲಿ ಲಸಿಕೆ ಸಂಗ್ರಹ ಮತ್ತು ವಿತರಣೆಗೆ ಸಿದ್ಧತೆ ಪೂರ್ಣಗೊಂಡಿದೆ. ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಭಾನುವಾರ ಈ ಬಗ್ಗೆ ಮಾಹಿತಿ ನೀಡಿದರು. '' ಮೊದಲ ಹಂತದಲ್ಲಿ 13.90 ಲಕ್ಷ ಡೋಸ್ ಲಸಿಕೆ ರಾಜ್ಯಕ್ಕೆ ಬರಲಿದೆ. ಬೆಂಗಳೂರು ಮತ್ತು ಬೆಳಗಾವಿಯಲ್ಲಿ ಪ್ರಧಾನ ಲಸಿಕೆ ಸಂಗ್ರಹಾಗಾರಗಳು ಇರಲಿವೆ. ರಾಜ್ಯಾದ್ಯಂತ ಒಟ್ಟು 2,767 ಕೋಲ್ಡ್ ಚೈನ್ ಪಾಯಿಂಟ್‌ಗಳನ್ನು ಸ್ಥಾಪಿಸಲಾಗಿದೆ,'' ಎಂದರು.

ವಿವರ»03

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ಸಿಎಂಗಳ ಜತೆ ಮೋದಿ ಕರೊನಾ ಲಸಿಕೆ ಸಭೆ

**ನವದೆಹಲಿ:** ಕೋವಿಡ್ ಲಸಿಕೆ ವಿತರಣೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಸೋಮವಾರ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಚರ್ಚೆ ನಡೆಸಲಿದ್ದಾರೆ. ದೇಶಾದ್ಯಂತ ಲಸಿಕೆ ಹಾಕುವ ಪ್ರಕ್ರಿಯೆಗೆ ಜ.16ರಂದು ಚಾಲನೆ ಸಿಗಲಿದೆ. ಅದಕ್ಕೂ ಮುನ್ನ ರಾಜ್ಯಗಳು ಮಾಡಿಕೊಂಡಿರುವ ಸಿದ್ಧತೆ, ಕೈಗೊಳ್ಳಬೇಕಿರುವ ಕ್ರಮಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಯಲಿದೆ. ಮತ್ತೊಂದೆಡೆ ಕರ್ನಾಟಕದಲ್ಲೂ ಲಸಿಕೆ ಪ್ರಕ್ರಿಯೆಗೆ ಸಿದ್ಧತೆ ನಡೆದಿದೆ. ಒಂದೆರಡು ದಿನದಲ್ಲಿ ರಾಜ್ಯಕ್ಕೆ ಮೊದಲ ಹಂತದಲ್ಲಿ 13.90 ಲಕ್ಷ ಡೋಸ್ ಲಸಿಕೆ ಬರಲಿದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರು ತಿಳಿಸಿದ್ದಾರೆ.



» **ಇಂದು ವಿಡಿಯೋ ಕಾನ್ಫರೆನ್ಸ್**

Bengaluru Edition
Jan 11, 2021 Page No. 1
Powered by : eReleGo.com

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ಮೊದಲ ಹಂತದಲ್ಲಿ 14 ಲಕ್ಷ ಡೋಸ್ ಲಸಿಕೆ

## ಡಾ. ಕೆ. ಸುಧಾಕರ್ ಮಾಹಿತಿ | ಲಸಿಕೆ ಸಂಗ್ರಹ ವ್ಯವಸ್ಥೆ ಪರಿಶೀಲಿಸಿದ ಸಚಿವ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯಕ್ಕೆ ಮೊದಲ ಹಂತದಲ್ಲಿ 13.90 ಲಕ್ಷ ಡೋಸ್ ಕೊರನಾ ಲಸಿಕೆ ಸಿಗಲಿದೆ ಎಂದು ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

ಲಸಿಕೆ ಸಂಗ್ರಹಕ್ಕೆ ರಾಜ್ಯದಲ್ಲಿ ಸಕಲ ವ್ಯವಸ್ಥೆ ಮಾಡಿಕೊಂಡಿದ್ದು, ವಿತರಣೆ ಸಿದ್ಧತೆಯೂ ಪೂರ್ಣಗೊಂಡಿದೆ ಎಂದು ಲಸಿಕೆ ಸಂಗ್ರಹ ವ್ಯವಸ್ಥೆ ಪರಿಶೀಲಿಸಿದ ಬಳಿಕ ಸುದ್ದಿಗಾರರಿಗೆ ತಿಳಿಸಿದರು. ಪ್ರಧಾನಿ ನರೇಂದ್ರ ಮೋದಿ ಸೋಮವಾರ ಸಂಜೆ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ವೀಡಿಯೋ ಸಂವಾದ ನಡೆಸಲಿದ್ದಾರೆ. ಈಗಾಗಲೇ ಪ್ರಧಾನಿಗಳು ಜ.16 ರಿಂದ ಕರೊನಾ ಲಸಿಕೆ ನೀಡುವ ಬಗ್ಗೆ ತಿಳಿಸಿದ್ದಾರೆ. ಆರೋಗ್ಯ ಕ್ಷೇತ್ರದ ಸಿಬ್ಬಂದಿಗೆ 3 ಕೋಟಿ ಲಸಿಕೆ ನೀಡಲಾಗುವುದು ಎಂದಿದ್ದಾರೆ. ಇದಕ್ಕೆ ಪೂರ್ವಭಾವಿಯಾಗಿ ಸಂಗ್ರಹ ವ್ಯವಸ್ಥೆ ಪರಿಶೀಲಿಸಲಾಗಿದೆ ಎಂದರು.

**» ಸಾರ್ವಜನಿಕರಲ್ಲಿ ವೃದ್ಧರು, ಅಶಕ್ತರಿಗೆ ಮೊದಲಿಗೆ ಲಸಿಕೆ**

ಬೆಂಗಳೂರು, ಬೆಳಗಾವಿಯಲ್ಲಿ ಪ್ರಮುಖವಾಗಿ ಲಸಿಕೆ ಸಂಗ್ರಹ ಮಾಡಲಾಗುವುದು. ಇದಲ್ಲದೆ ಚಿತ್ರದುರ್ಗ, ಕಲಬುರಗಿ, ದಕ್ಷಿಣ ಕನ್ನಡ, ಮೈಸೂರು ಮತ್ತು ಬಾಗಲಕೋಟೆಗಳಲ್ಲಿ 5 ಪ್ರಾದೇಶಿಕ ಸಂಗ್ರಹ ವ್ಯವಸ್ಥೆಗಳಿವೆ. ಪ್ರತಿ ಜಿಲ್ಲೆಯಲ್ಲೂ ಒಂದು ಕಾರ್ಪೊರೇಷನ್ ಲಸಿಕೆ ಸಂಗ್ರಹ ವ್ಯವಸ್ಥೆ ಇದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 50 ಬ್ಲಾಕ್ ಇವೆ. ಒಟ್ಟು 2,767 ಕೋಲ್ಡ್ ಚೇನ್ ಪಾಯಿಂಟ್‌ಗಳಿವೆ ಎಂದು ತಿಳಿಸಿದರು.

ರಾಜ್ಯದಲ್ಲಿ 900 ಲಸಿಕೆ ಕ್ಯಾರಿಯರ್‌ಗಳಿವೆ. ಲಸಿಕೆಯನ್ನು ಮೊದಲಿಗೆ ಪ್ರಾದೇಶಿಕ ಸಂಗ್ರಹ ಕೇಂದ್ರಗಳಿಗೆ ಕಳುಹಿಸಲಾಗುತ್ತದೆ. ನಂತರ ಅಲ್ಲಿಂದ ಜಿಲ್ಲಾ ಮಟ್ಟಕ್ಕೆ ಕಳುಹಿಸಲಾಗುತ್ತದೆ. ಬೆಂಗಳೂರಿನಲ್ಲಿ ಎರಡು ವಾಕ್-ಇನ್ ಕೂಲರ್ ಇವೆ. ಒಂದರಲ್ಲಿ 45 ಲಕ್ಷ ಡೋಸ್ ಸಂಗ್ರಹಿಸಲು ಅವಕಾಶವಿದೆ. ಇದೇ ರೀತಿ ಒಂದು ವಾಕ್-ಇನ್ ಫ್ರೀಜರ್ ಇದೆ. ಅದರಲ್ಲಿ 40 ಲಕ್ಷ ಡೋಸ್ ಸಂಗ್ರಹ ಸಾಮರ್ಥ್ಯವಿದೆ. ಕೇಂದ್ರ ಸರ್ಕಾರ ಇನ್ನೂ ಒಂದು ವಾಕ್-ಇನ್ ಫ್ರೀಜರ್ ನೀಡಲಿದೆ ಎಂದರು.

ಆರೋಗ್ಯ ಕಾರ್ಯಕರ್ತರಿಗೆ ಮೊದಲಿಗೆ ಲಸಿಕೆ ನೀಡಲಾಗುವುದು. ಸಾರ್ವಜನಿಕರಿಗೆ 2 ತಿಂಗಳ ಬಳಿಕ ಲಭಿಸಬಹುದು. ಎಲ್ಲರಿಗೂ ಲಸಿಕೆ ಬೇಕೆ- ಬೇಡವೇ ಎಂಬುದನ್ನು ತಜ್ಞರ ಸಲಹೆ ಮೇರೆಗೆ ನಿರ್ಧರಿಸಲಾಗುವುದು. ಸಾರ್ವಜನಿಕರಲ್ಲಿ ಮೊದಲಿಗೆ ವೃದ್ಧರು, ಅಶಕ್ತರಿಗೆ ಲಸಿಕೆ ಸಿಗಲಿದೆ ಎಂದು ಮಾಹಿತಿ ನೀಡಿದರು.

ವಿಜಯವಾಣಿ ಚಿತ್ರ



ಆನಂದರಾವ್ ವೃತ್ತದಲ್ಲಿರುವ ಆರೋಗ್ಯ ಕೇಂದ್ರದಲ್ಲಿ ಲಸಿಕೆ ಸಂಗ್ರಹ ವ್ಯವಸ್ಥೆ ಸಿದ್ಧತೆಯನ್ನು ಸುಧಾಕರ್ ಪರಿಶೀಲಿಸಿದರು.

### ಸಚಿವರು ಹೇಳಿದ ಇತರೆ ಪ್ರಮುಖ ಅಂಶಗಳು

- ವಿಮಾನ ನಿಲ್ದಾಣಕ್ಕೆ ಬರುವ ಪ್ರಯಾಣಿಕರ ಮಾಹಿತಿಯನ್ನು ಸಮರ್ಪಕವಾಗಿ ಕಲೆಹಾಕಿ ಆರೋಗ್ಯದ ಮೇಲೆ ನಿಗಾ ಇರಿಸಲಾಗುತ್ತಿದೆ.
- ಯು.ಕೆ.ಯಿಂದ ಬಂದ ವಿಮಾನದಲ್ಲಿ ಒಟ್ಟು 289 ಮಂದಿ ಇದ್ದರು. ಎಲ್ಲರ ಮಾದರಿ ಪಡೆದು ಪರೀಕ್ಷೆ ಮಾಡಿದ್ದು, ನಾಲ್ಕು ಮಂದಿಗೆ ಕರೊನಾ ಸೋಂಕು ಬಂದಿದೆ. ಯಾರು ರೋಗಿ ಎಂದು ನಿಖರವಾಗಿ ಪತ್ತೆ ಮಾಡಿ ಆಸ್ಪತ್ರೆಗೆ ದಾಖಲಿಸಲಾಗುವುದು.

## ವ್ಯಾಕ್ಸಿನ್ ಹೆಸರಲ್ಲೂ ವಂಚನೆ

**ಬೆಂಗಳೂರು:** ಕರೊನಾ ಲಸಿಕೆ ಹೆಸರಿನಲ್ಲೂ ವಂಚನೆ ಮಾಡುವ ಜಾಲ ಸದ್ದಿಲ್ಲದೆ ದೇಶಾದ್ಯಂತ ಕಾರ್ಯಾಚರಿಸುತ್ತಿದೆ. ಹಿರಿಯ ನಾಗರಿಕರನ್ನೇ ಟಾರ್ಗೆಟ್ ಮಾಡುತ್ತಿರುವ ಆರೋಪಿಗಳು ಅವರಿಗೆ ಕರೆ ಮಾಡಿ, ನಾವು ಡ್ರಗ್ ಅಥಾರಿಟಿ ಆಫ್ ಇಂಡಿಯಾದಿಂದ ಕರೆ ಮಾಡುತ್ತಿದ್ದೇವೆ. ನಿಮಗೆ ನೀಡಬೇಕಿರುವ ವ್ಯಾಕ್ಸಿನ್ ಸಿದ್ಧವಾಗಿದೆ. ಇದನ್ನು ಪಡೆಯಲು ನಿಮ್ಮ ಕೆಲ ಮಾಹಿತಿ ನೀಡಬೇಕಾಗುತ್ತದೆ ಎಂದು ನಂಬಿಸುತ್ತಾರೆ. ಇವರ ಮಾತಿಗೆ ಮರುಳಾಗಿ ಆಧಾರ್ ಕಾರ್ಡ್ ಮತ್ತಿತರ ಮಾಹಿತಿ ನೀಡಿದರೆ, 'ನಿಮ್ಮ ಮೊಬೈಲ್‌ಗೆ ಬಂದಿರುವ ಒಟಿಪಿ ತಿಳಿಸಿ' ಎಂದು ಸೂಚಿಸುತ್ತಾರೆ. ನಂತರ ನಿಮ್ಮ ಬ್ಯಾಂಕ್ ಖಾತೆಯಲ್ಲಿರುವ ಹಣವನ್ನು ಲಪಟಾಯಿಸುತ್ತಾರೆ. ಇತ್ತೀಚೆಗೆ ಹಿರಿಯ ನಾಗರಿಕರೊಬ್ಬರ ಖಾತೆಯಿಂದ 12 ಲಕ್ಷ ರೂ. ಲಪಟಾಯಿಸಿದ್ದಾರೆ. ನಿಯಮದ ಪ್ರಕಾರ ಕರೊನಾ ಲಸಿಕೆ ವಿತರಣೆ ಬಗ್ಗೆ ಯಾರೂ ಕರೆ ಮಾಡಿ ವಿವರ ಕೇಳುವುದಿಲ್ಲ. ಜನರು ಎಚ್ಚರಿಕೆಯಿಂದ ಇರಬೇಕು ಎಂದು ಪೊಲೀಸರು ಸಲಹೆ ನೀಡಿದ್ದಾರೆ.

ವಿಜಯವಾಣಿ
ಕನ್ನಡಿಗರ ಧ್ವನಿ

# ಎರಡು ಸಾವಿರ ಬಯಲು ಮೂತ್ರ ವಿಸರ್ಜನೆ ಸ್ಥಳ ಪತ್ತೆ

**ಬೆಂಗಳೂರು:** ನಗರದಲ್ಲಿ 2 ಸಾವಿರಕ್ಕೂ ಅಧಿಕ ಪ್ರದೇಶದಲ್ಲಿ ಬಯಲುಮೂತ್ರ ವಿಸರ್ಜನೆ ಮಾಡುವ ಸ್ಥಳಗಳನ್ನು ಬಿಬಿಎಂಪಿ ಮತ್ತು ಜನಾಗ್ರಹ ಸಂಸ್ಥೆ ಸೇರಿ ನಡೆಸಿದ 'ನನ್ನ ನಗರ ನನ್ನ ಬಜೆಟ್ ಅಭಿ ಯಾನ'ದ ಸಮೀಕ್ಷೆ ಯಲ್ಲಿ ಗುರುತಿಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಬಯಲುಮೂತ್ರ ವಿಸರ್ಜನೆ ತಡೆಗಟ್ಟುವ ನಿಟ್ಟಿನಲ್ಲಿ ಅಗತ್ಯವಿರುವ ಸ್ಥಳಗಳಲ್ಲಿ ಸಾರ್ವಜನಿಕ ಶೌಚಗೃಹ ನಿರ್ವಿುಸಬೇಕಿದೆ. ಇಂತಹ ಸ್ಥಳ ಗುರುತಿಸಲು ಬಿಬಿಎಂಪಿ ನೆರವಿನೊಂದಿಗೆ ಜನಾಗ್ರಹ ಸಂಸ್ಥೆಯ 40 ಸ್ವಯಂಸೇವಕರು ಸೇರಿ 'ನನ್ನ ನಗರ, ನನ್ನ ಬಜೆಟ್' ಎಂಬ ಸಮೀಕ್ಷಾ ಅಭಿಯಾನ ಕೈಗೊಂಡಿದ್ದರು. 2 ಸಾವಿರಕ್ಕೂ ಹೆಚ್ಚು ಪ್ರದೇಶಗಳಲ್ಲಿ ಬಯಲು ಮೂತ್ರ ವಿಸರ್ಜನೆ ಮಾಡುತ್ತಿರುವ ಬಗ್ಗೆ ಜನರ ಮಾಹಿತಿ ನೀಡಿದ್ದಾರೆ ಎಂದು ಜನಾಗ್ರಹ ಸಂಸ್ಥೆಯ ಸದಸ್ಯೆ ಸ್ವಪ್ನಾ ತಿಳಿಸಿದ್ದಾರೆ.

» **ಸಮೀಕ್ಷೆಯಲ್ಲಿ ವರದಿ ಸಂಗ್ರಹ**

ವಿಜಯವಾಣಿ
ಕನ್ನಡಿಗರ ಧ್ವನಿ

# ಹೆಚ್ಚುತ್ತಿದೆ ಕರೊನಾ ತ್ಯಾಜ್ಯ!

## ದೇಶದಲ್ಲಿ ಕಳೆದ ಏಳು ತಿಂಗಳಲ್ಲಿ 33 ಸಾವಿರ ಟನ್ ಕಸ ಉತ್ಪತ್ತಿ

**ನವದೆಹಲಿ:** ಭಾರತದಲ್ಲಿ ಕಳೆದ ಏಳು ತಿಂಗಳಲ್ಲಿ ಸುಮಾರು 33,000 ಟನ್ ಕೋವಿಡ್-19 ಜೈವಿಕ ವೈದ್ಯಕೀಯ (ಬಯೋಮೆಡಿಕಲ್) ತ್ಯಾಜ್ಯ ಸೃಷ್ಟಿಯಾಗಿದೆ. ಇದರಲ್ಲಿ ಮಹಾರಾಷ್ಟ್ರದ ಪಾಲು (5,367 ಟನ್) ಗರಿಷ್ಠವಾದುದು ಎಂದು ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ತಿಳಿಸಿದೆ. 2020ರ ಅಕ್ಟೋಬರ್ ಒಂದರಲ್ಲೇ ದೇಶಾದ್ಯಂತ 5,500 ಟನ್ ತ್ಯಾಜ್ಯ ಉತ್ಪಾದನೆಯಾಗಿದ್ದು, ಇದು ಮಾಸಿಕ ಗರಿಷ್ಠವಾಗಿದೆ. ಕರ್ನಾಟಕದಲ್ಲಿ 2,026 ಟನ್ ತ್ಯಾಜ್ಯ ಸೃಷ್ಟಿಯಾಗಿದೆ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳಿಂದ ಸಂಗ್ರಹಿಸಿರುವ ಮಾಹಿತಿ ಪ್ರಕಾರ, 2020 ಜೂನ್‌ನಿಂದ ಇದುವರೆಗೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೋವಿಡ್-19ಗೆ ಸಂಬಂಧಿಸಿದ 32,994 ಟನ್ ತ್ಯಾಜ್ಯ ಸೃಷ್ಟಿಯಾಗಿದೆ. ಅವುಗಳನ್ನು 198 ಬಯೋಮೆಡಿಕಲ್ ತ್ಯಾಜ್ಯ ನಿರ್ವಹಣೆ ಕೇಂದ್ರಗಳಲ್ಲಿ ಸಂಗ್ರಹಿಸಿ, ಸಂಸ್ಕರಿಸಿ, ವಿಲೇವಾರಿ ಮಾಡಲಾಗಿದೆ.



### ಯಾವ ರಾಜ್ಯಗಳಲ್ಲಿ ಹೆಚ್ಚು ತ್ಯಾಜ್ಯ?

- » ಮಹಾರಾಷ್ಟ್ರ-5,367 ಟನ್
- » ಕೇರಳ-3,300 ಟನ್
- » ಗುಜರಾತ್-3,086 ಟನ್
- » ತಮಿಳುನಾಡು-2,806 ಟನ್
- » ಉತ್ತರ ಪ್ರದೇಶ-2,502 ಟನ್
- » ದೆಹಲಿ-2,471 ಟನ್
- » ಪಶ್ಚಿಮ ಬಂಗಾಳ-2,095 ಟನ್
- » ಕರ್ನಾಟಕ-2,026 ಟನ್

### ಯಾವ್ಯಾವ ತ್ಯಾಜ್ಯ?

ಪಿಪಿಇ ಕಿಟ್, ಮಾಸ್ಕ್, ಶೂ ಕವರ್, ಕೈಗವಸು, ಮಾನವ ಅಂಗಾಂಶಗಳು, ರಕ್ತ, ದೇಹದ ದ್ರವಗಳಿಂದ ಕೂಡಿದ ಡ್ರೆಸಿಂಗ್ಸ್, ಪ್ಲಾಸ್ಟರ್ ಕ್ಲಾಸ್ಟ್, ಕಾಟನ್ ಸ್ವಾಬ್‌ಗಳು, ರಕ್ತದ ಚೀಲಗಳು, ಸೂಜಿಗಳು, ಸಿರಿಂಜ್‌ಗಳು, ರಕ್ತ ಅಥವಾ ದೇಹದ್ರವಗಳಿಂದ ಕೂಡಿದ ಬೆಡ್‌ಗಳು ಮುಂತಾದವುಗಳು.

ಕರೊನಾ ಯಮರ್ಜೆನ್ಸಿ EMERGENCY

### ಕರೊನಾ ಸಾವಿನ ದರ ಇಳಿಕೆ

**ಭಾ**ರತದಲ್ಲಿ ಭಾನುವಾರ 136 ಮಂದಿ ಕೋವಿಡ್-19ಗೆ ಬಲಿಯಾಗಿದ್ದು, ದೇಶದ ಒಟ್ಟಾರೆ ಸಾವಿನ ದರ ಶೇಕಡ 1.44ಕ್ಕೆ ಕುಸಿದಿದೆ. ಕಳೆದ 16 ದಿನಗಳಲ್ಲಿ ಇದು ಅತಿ ಕಡಿಮೆ ಸಾವಿನ ಸಂಖ್ಯೆಯಾಗಿದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ. ಮೃತರ ಒಟ್ಟು ಸಂಖ್ಯೆ 1,51,184ಕ್ಕೆ ತಲುಪಿದೆ. ಈ ಅವಧಿಯಲ್ಲಿ 15,199 ಹೊಸ ಪ್ರಕರಣ ವರದಿಯಾಗಿದ್ದು ಸೋಂಕಿತರ ಒಟ್ಟು ಸಂಖ್ಯೆ 1,04,66,545ಕ್ಕೆ ಏರಿದೆ. ಇದುವರೆಗೆ 1,00,90,658 ಜನರು ಚೇತರಿಸಿಕೊಂಡಿದ್ದಾರೆ. ಚೇತರಿಕೆ ದರ ಶೇ. 96.42 ಆಗಿದೆ. ದೇಶದಲ್ಲಿ ಒಟ್ಟು 2,20,388 ಸಕ್ರಿಯ ಪ್ರಕರಣಗಳಿದ್ದು ಒಟ್ಟು ಸೋಂಕಿತರ ಶೇ. 2.14 ಆಗಿದೆ ಎಂದು ಸಚಿವಾಲಯ ವಿವರಿಸಿದೆ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಪ್ರಕಾರ, ದೇಶದಲ್ಲಿ ಇದುವರೆಗೆ ಒಟ್ಟು 18,10,96,622 ಸ್ಯಾಂಪಲ್‌ಗಳ ಪರೀಕ್ಷೆ ನಡೆಸಲಾಗಿದೆ.

### ತ್ಯಾಜ್ಯದ ಮೇಲೆ ನಿಗಾಕ್ಕೆ ಆ್ಯಪ್ ಅಭಿವೃದ್ಧಿ

**ಕ**ರೊನಾ ವೈರಸ್ ಸಂಬಂಧಿತ ಬಯೋಮೆಡಿಕಲ್ ತ್ಯಾಜ್ಯದ ಮೇಲೆ ನಿಗಾ ವಹಿಸಲು ಸಿಪಿಸಿಬಿ 2020ರ ಮೇ ತಿಂಗಳಲ್ಲಿ 'ಕೋವಿಡ್19ಬಿಡಬ್ಲ್ಯುಎಂ' ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಿತ್ತು. ಇಲೆಕ್ಟ್ರಾನಿಕ್ ಮ್ಯಾನಿಫೆಸ್ಟ್ ವ್ಯವಸ್ಥೆ ಮೂಲಕ ದತ್ತಾಂಶಗಳನ್ನು ಸಂಗ್ರಹಿಸಲಾಗುತ್ತದೆ.




### ಚೀನಾದಲ್ಲಿ ಹೊಸ ಕೇಸ್

**ಚೀ**ನಾದ ಹುಬೆ ಪ್ರಾಂತ್ಯದಲ್ಲಿ 380ಕ್ಕೂ ಹೆಚ್ಚು ಹೊಸ ಕರೊನಾ ಪ್ರಕರಣಗಳು ಭಾನುವಾರ ವರದಿಯಾಗಿವೆ. ಭಾನುವಾರ ಬೆಳಗ್ಗೆ 40 ಪ್ರಕರಣಗಳು ದೃಢಪಟ್ಟಿದ್ದು ಹೊಸ ಪ್ರಕರಣದ ಸಂಖ್ಯೆ 223ಕ್ಕೆ ಏರಿದೆ. ಇನ್ನೂ 161 ಜನರ ವರದಿ ಪಾಸಿಟಿವ್ ಬಂದಿದೆಯಾದರೂ ಅವರಲ್ಲಿ ಕರೊನಾದ ಲಕ್ಷಣವಿಲ್ಲ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಚೀನಾದಲ್ಲಿ ಲಕ್ಷಣರಹಿತ ಸೋಂಕಿತರನ್ನು ಅಧಿಕೃತ ಅಂಕಿಸಂಖ್ಯೆಯಲ್ಲಿ ಸೇರಿಸುವುದಿಲ್ಲ.

### ಉಚಿತ ಲಸಿಕೆ, ಮಮತಾ ಹೇಳಿಕೆಗೆ ಬಿಜೆಪಿ ಆಕ್ಷೇಪ

**ರಾ**ಜ್ಯದ ಪ್ರತಿಯೊಬ್ಬರಿಗೂ ಉಚಿತವಾಗಿ ಕರೊನಾ ಲಸಿಕೆ ನೀಡಲಾಗುವುದೆಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಘೋಷಿಸಿದ್ದು ಇದರಿಂದ ಬಿಜೆಪಿಗೆ ಇರಿಸುಮುರಿಸಾಗಿದೆ. 'ಜನರಿಗೆ ಉಚಿತವಾಗಿ ಲಸಿಕೆ ನೀಡಲು ರಾಜ್ಯ ಸರ್ಕಾರ ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಪ್ರಕಟಿಸಲು ನನಗೆ ಸಂತೋಷವಾಗುತ್ತಿದೆ' ಎಂಬ ಒಕ್ಕಣೆಯಿರುವ ಪತ್ರವನ್ನು ಬ್ಯಾನರ್ಜಿ ವೈದ್ಯರು ಮತ್ತು ಪೊಲೀಸರಿಗೆ ಬರೆದಿದ್ದು ಅದು ವ್ಯಾಪಕವಾಗಿ ವೈರಲ್ ಆಗಿದೆ.



ಇದಕ್ಕೆ ಬಿಜೆಪಿ ಆಕ್ಷೇಪ ವ್ಯಕ್ತಪಡಿಸಿದೆ. ದೇಶಾದ್ಯಂತ 3 ಕೋಟಿ ಮುಂಚೂಣಿ ಆರೋಗ್ಯ ಕಾರ್ಯಕರ್ತರಿಗೆ ಉಚಿತವಾಗಿ ಲಸಿಕೆ ನೀಡುವುದಾಗಿ ಕೇಂದ್ರ ಸರ್ಕಾರ ಈಗಾಗಲೇ ಘೋಷಿಸಿದೆ. ಈಗ ಉಚಿತ ಲಸಿಕೆ ನೀಡುವುದಾಗಿ ಹೇಳುವ ಮೂಲಕ ಮಮತಾ ಬ್ಯಾನರ್ಜಿ ಇದರ ಶ್ರೇಯವನ್ನು ಪಡೆಯಲು ಯತ್ನಿಸುತ್ತಿದ್ದಾರೆ ಎಂದು ಬಿಜೆಪಿ ಹೇಳಿದೆ.



### ನೆಗೆಟಿವ್ ವರದಿ ಕಡ್ಡಾಯ ಅಲ್ಲವೆಂದ ಪುರಿ ಮಂದಿರ

**ಪು**ರಿಯ ಐತಿಹಾಸಿಕ ಶ್ರೀ ಜಗನ್ನಾಥ ದೇವಸ್ಥಾನಕ್ಕೆ ಬರುವ ಭಕ್ತರು ಕೋವಿಡ್-19 ನೆಗೆಟಿವ್ ವರದಿ ಹಾಜರಿಪಡಿಸುವುದು ಇನ್ನು ಮುಂದೆ ಕಡ್ಡಾಯವಲ್ಲ ಎಂದು ದೇವಳದ ಆಡಳಿತ ಮಂಡಳಿ ಭಾನುವಾರ ತಿಳಿಸಿದೆ. ಸದ್ಯಕ್ಕೆ ನೆಗೆಟಿವ್ ವರದಿ ಕಡ್ಡಾಯ ನಿಯಮ ಜಾರಿಯಲ್ಲಿದ್ದು, ಜನವರಿ 21ರಿಂದ ಅದರ ಅಗತ್ಯವಿಲ್ಲ ಎಂದು ಆಡಳಿತ ಮಂಡಳಿ ಸಭೆ ನಿರ್ಧರಿಸಿದೆ. ಈ ಆದೇಶ ಫೆಬ್ರವರಿ 21ರ ವರೆಗೆ ಜಾರಿಯಲ್ಲಿರುತ್ತದೆ. ಆದರೆ ಕಡ್ಡಾಯ ಮಾಸ್ಕ್, ವೈಯಕ್ತಿಕ ಅಂತರ ಮೊದಲಾದ ಇತರ ಕರೊನಾ ಮುನ್ನೆಚ್ಚರಿಕೆ ಕ್ರಮಗಳು ಯಥಾವತ್ತಾಗಿ ಮುಂದುವರಿಯುತ್ತವೆ. ಒಂಬತ್ತು ತಿಂಗಳು ಮುಚ್ಚಿದ್ದ ದೇವಸ್ಥಾನವನ್ನು ಜನವರಿ 3ರಂದು ಭಕ್ತರ ದರ್ಶನಕ್ಕೆ ಮುಕ್ತಗೊಳಿಸಲಾಗಿದೆ.

ವಿಶ್ವವಾಣಿ

# ಲಸಿಕೆ ವಿತರಣೆ: ಇಂದು ಸಿಎಂಗಳ ಜತೆ ಪಿಎಂ ಸಭೆ

**ದೆಹಲಿ:** ಭಾರತದಲ್ಲಿ ಜನವರಿ 16ರಿಂದ ಆರಂಭವಾಗಲಿರುವ ಕರೋನಾ -19 ಲಸಿಕೆ ವಿತರಣಾ ಅಭಿಯಾನದ ಪೂರ್ವಭಾವಿಯಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಮುಖ್ಯಮಂತ್ರಿಗಳ ಜತೆ ಸಭೆ ನಡೆಸಲಿದ್ದಾರೆ.



ಇಂದು ಸಂಜೆ 4 ಗಂಟೆಯಿಂದ ವರ್ಚುಯಲ್ ಸಭೆ ಆರಂಭವಾಗಲಿದ್ದು, ಲಸಿಕೆ ವಿತರಣೆ, ಅದಕ್ಕೆ ಬೇಕಾದ ಸಿದ್ಧತೆ ಮತ್ತು ಆಯಾ ರಾಜ್ಯಗಳು ಮಾಡಿಕೊಂಡಿರುವ ಸಿದ್ಧತೆಗಳ ಬಗ್ಗೆ ಸಿಎಂಗಳ ಜತೆ ಚರ್ಚೆ ನಡೆಸಲಿದ್ದಾರೆ. ಕರೋನಾ ಲಸಿಕೆಗಳ ತುರ್ತು ಬಳಕೆಗೆ ಅನುಮೋದನೆ ನೀಡಿದ ಬಳಿಕ ಪ್ರಧಾನಿ ಮೋದಿ ಸಿಎಂಗಳ ಜೊತೆ ನಡೆಸುತ್ತಿರುವ ಮೊದಲನೇ ಸಭೆ ಇದಾಗಿದೆ.

**ರೂಪಾಂತರಿ ಪ್ರಕರಣವಿಲ್ಲ:** ರೂಪಾಂತರಿ ಕರೋನಾ ಸೋಂಕಿನ ಒಂದೂ ಪ್ರಕರಣಗಳು ಭಾನುವಾರ ಪತ್ತೆಯಾಗಿಲ್ಲ. ಇದುವರೆಗೂ ಭಾರತದಲ್ಲಿ ಒಟ್ಟು 90 ಬ್ರಿಟನ್ ಮೂಲದ ಕರೋನಾ ಕೇಸುಗಳಲಿದ್ದು, ಕರೋನಾ ಪ್ರಕರಣಗಳ ಕ್ರಮೇಣ ಇಳಿಮುಖವಾಗುತ್ತಿದ್ದು, ಮರಣಗಳ ಸಂಖ್ಯೆಯೂ ತಗ್ಗಿದೆ ಎಂದು ಆರೋಗ್ಯ ಸಚಿವಾಲತ ತಿಳಿಸಿದೆ.

**ರಾಜ್ಯದಲ್ಲಿ ಲಸಿಕೆ ಸಂಗ್ರಹಕ್ಕೆ ಸಿದ್ಧತೆ ಪೂರ್ಣ:** ರಾಜ್ಯದಲ್ಲಿ ಬೆಂಗಳೂರು ಹಾಗೂ ಬೆಳಗಾವಿಯಲ್ಲಿ 2 ಲಸಿಕೆ ಸಂಗ್ರಹ ವ್ಯವಸ್ಥೆಗಳಿವೆ. ಇದಲ್ಲದೆ, ಚಿತ್ರದುರ್ಗ, ಕಲಬುರಗಿ, ದಕ್ಷಿಣ ಕನ್ನಡ, ಮೈಸೂರು ಮತ್ತು ಬಾಗಲಕೋಟೆಯಲ್ಲಿ 5 ಪ್ರಾದೇಶಿಕ ಸಂಗ್ರಹ ವ್ಯವಸ್ಥೆ ಇದೆ. ಪ್ರತಿ ಜಿಲ್ಲೆಯಲ್ಲೂ ಒಂದು ಕಾರ್ಪೊರೇಷನ್ ಲಸಿಕೆ ಸಂಗ್ರಹ ವ್ಯವಸ್ಥೆ ಇದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 50 ಬ್ಲಾಕ್ ಇದೆ. ಒಟ್ಟು 2,767 ಕೋಲ್ಡ್ ಚೇನ್ ಪಾಯಿಂಟ್‌ಗಳಿವೆ. ಇವೆಲ್ಲ ಮೂಲ ಸೌಕರ್ಯದೊಂದಿಗೆ ಲಸಿಕೆ ವಿತರಣೆ ಮಾಡಲಾಗುವುದು. ರಾಜ್ಯದಲ್ಲಿ 900 ಲಸಿಕೆ ಕ್ಯಾರಿಯರ್‌ಗಳಿವೆ. ಲಸಿಕೆಯನ್ನು ಮೊದಲಿಗೆ ಪ್ರಾದೇಶಿಕ ಸಂಗ್ರಹ ಕೇಂದ್ರಗಳಿಗೆ ಕಳುಹಿಸಲಾಗುತ್ತದೆ. ನಂತರ ಅಲ್ಲಿಂದ ಜಿಲ್ಲಾ ಮಟ್ಟಕ್ಕೆ ಕಳುಹಿಸಲಾಗುತ್ತದೆ. ಬೆಂಗಳೂರಿನಲ್ಲಿ ಎರಡು ವಾಕ್-ಇನ್ ಕೂಲರ್ ಇದೆ. ಒಂದರಲ್ಲಿ 45 ಲಕ್ಷ ಡೋಸ್ ಸಂಗ್ರಹಿಸಲು ಅವಕಾಶವಿದೆ. ಇದೇ ರೀತಿ ಒಂದು ವಾಕ್ ಇನ್ ಫ್ರೀಜರ್ ಇದೆ. ಆದರಲ್ಲಿ 40 ಲಕ್ಷ ಡೋಸ್ ಸಂಗ್ರಹ ಸಾಮರ್ಥ್ಯವಿದೆ. ಕೇಂದ್ರ ಸರಕಾರ ಒಂದು ವಾಕ್ ಇನ್ ಫ್ರೀಜರ್ ನೀಡಲಿದೆ ಎಂದು ಸಚಿವ ಸುಧಾಕರ್ ಹೇಳಿದರು.

## ನಾನೇ ಮೊದಲು ಲಸಿಕೆ ಪಡೆಯುವೆ : ಸುಧಾಕರ್

**ಬೆಂಗಳೂರು:** ಕೇಂದ್ರ ಸರಕಾರ ಮಾರ್ಗಸೂಚಿಯಲ್ಲಿ ಅವಕಾಶವಿದ್ದರೆ ರಾಜ್ಯದಲ್ಲಿ ಕರೋನಾ ಲಸಿಕೆಯನ್ನು ಮೊದಲು ನಾನೇ ಪಡೆಯುತ್ತೇನೆ ಎಂದು ಆರೋಗ್ಯ ಇಲಾಖೆ ಸಚಿವ ಸುಧಾಕರ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿರುವ ರಾಜ್ಯಮಟ್ಟದ ಲಸಿಕೆ ಸಂಗ್ರಹ ಕೇಂದ್ರದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ ಅವರು, ಸೋಮವಾರ ಕೇಂದ್ರ ಸರಕಾರದ ಮಾರ್ಗಸೂಚಿ ಹೊರಡಿಸಲಿದೆ. ಅದರಲ್ಲಿ ಯಾರಿಗೆ ಹೇಗೆ ಯಾವಾಗ ಲಸಿಕೆ ನೀಡಬೇಕು ಎಂಬ ಅಂಶವನ್ನು ತಿಳಿಸಲಾಗಿರುತ್ತದೆ. ಜನಪ್ರತಿನಿಧಿಗಳು ಪಡೆಯಬಹುದು ಎಂಬ ಅವಕಾಶವಿದ್ದರೆ ನಾನೇ ಮೊದಲು ಲಸಿಕೆ ಪಡೆದು ಆರೋಗ್ಯ ಕಾರ್ಯಕರ್ತರ, ಜನಸಾಮಾನ್ಯರ ಆತ್ಮವಿಶ್ವಾಸ ಹೆಚ್ಚಿಸುತ್ತೇನೆ. ಲಸಿಕೆ ಕುರಿತು ಯಾವುದೇ ಅನುಮಾನವಿಲ್ಲ ಎಂದು ಮಾಹಿತಿ ನೀಡಿದರು.



ವಿಶ್ವವಾಣಿ

## ಭಾನುವಾರ ಬೆಂಗಳೂರಿಗೆ ಬಂದ 289 ಲಂಡನ್ ಪ್ರಯಾಣಿಕರು

# ನಾಲ್ವರ ಕರೋನಾ ಟೆಸ್ಟ್ ನೆಗೆಟಿವ್

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಲಂಡನ್‌ನಿಂದ ಬೆಂಗಳೂರಿಗೆ ಭಾನುವಾರ ಮುಂಜಾನೆಯ ವಿಮಾನದಲ್ಲಿ ಆಗಮಿಸಿದ ಪ್ರಯಾಣಿಕರಲ್ಲಿ, ನಾಲ್ವರಲ್ಲಿ ಕರೋನಾ ಸೋಂಕು ಇಲ್ಲ ಎಂದು ನಿಖರವಾಗಿ ವರದಿ ತಿಳಿಸಿದೆ.

ಲಂಡನ್‌ನಿಂದ ಆಗಮಿಸಿದ 289 ಜನರ ಪೈಕಿ 285 ಜನರ ಕರೋನಾ ವರದಿ ನೆಗೆಟಿವ್ ಆಗಿದೆ. ಹೀಗಾಗಿ, ಅವರೆಲ್ಲರನ್ನೂ ಹೋಂ ಕ್ವಾರಂಟೈನ್‌ಗೆ ಕಳುಹಿಸಲಾಗಿದೆ. ಉಳಿದಂತೆ, 4 ಪರೀಕ್ಷೆ ವರದಿಗಳ ಬಗ್ಗೆ ಅನುಮಾನ ವ್ಯಕ್ತವಾದ ಹಿನ್ನೆಲೆ, ಅವರಿಗೆ ವಿಮಾನ ನಿಲ್ದಾಣದಲ್ಲಿಯೇ ಮತ್ತೊಮ್ಮೆ ಕರೋನಾ ಪರೀಕ್ಷೆ ಮಾಡಲು ಸಿಬ್ಬಂದಿ ನಿರ್ಧರಿಸಿದರು.

- ಸಾರ್ವಜನಿಕ ವಾಹನಗಳಲ್ಲಿ ಮನೆಗೆ ತೆರಳಿದ ನೆಗೆಟಿವ್ ಪ್ರಯಾಣಿಕರು

**ಉಳಿದವರು ಹೋಂ ಕ್ವಾರಂಟೈನ್‌ಗೆ:** ಕರೋನಾ ಪರೀಕ್ಷೆ ವರದಿ ನೆಗೆಟಿವ್ ಬಂದರೆ ಹೋಂ ಕ್ವಾರಂಟೈನ್, ಪಾಸಿಟಿವ್ ಬಂದರೆ ಐಸೋಲೇಷನ್‌ಗೆ ಕಳಿಸಲು ನಿರ್ಧಾರ ಮಾಡಲಾಗಿತ್ತು. ಹಾಗಾಗಿ, ಸದ್ಯ ನಾಲ್ವರನ್ನು ಹೊರತುಪಡಿಸಿ ಉಳಿದವರು ಹೋಂ ಕ್ವಾರಂಟೈನ್‌ಗೆ ತೆರಳಿದ್ದಾರೆ. ನಾಲ್ವರು ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿಯೇ ಉಳಿದುಕೊಂಡಿದ್ದಾರೆ. ವಿಮಾನದಲ್ಲಿ ಒಟ್ಟು 145 ಪುರುಷರು, 96 ಮಹಿಳೆಯರು, 32 ಮಕ್ಕಳು ಹಾಗೂ 16 ವಿಮಾನ ಸಿಬ್ಬಂದಿ ಸೇರಿದಂತೆ ಒಟ್ಟು 289 ಜನರು ಲಂಡನ್‌ನಿಂದ ಬೆಂಗಳೂರಿನ ದೇವನಹಳ್ಳಿಯ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದರು.

ಇಂಗ್ಲೆಂಡ್‌ನಿಂದ ಬೆಂಗಳೂರಿಗೆ ಆಗಮಿಸಿದವರಲ್ಲಿ, ಕರೋನಾ ನೆಗೆಟಿವ್ ವರದಿ ಪಡೆದವರು ಸಾರ್ವಜನಿಕ ವಾಹನಗಳಲ್ಲಿ ಮನೆಗೆ ತೆರಳಿದ್ದಾರೆ. ಅವರ ಕೈಗೆ ಸೀಲ್ ಹಾಕಿಸಿ ಮನೆಗೆ ಕಳುಹಿಸಲಾಗಿದೆ. ಬ್ರಿಟನ್‌ನಿಂದ ಬಂದ ಪ್ರಯಾಣಿಕರು, ಕ್ಯಾಬ್, ಬಸ್‌ಗಳಲ್ಲಿ ಮನೆಗೆ ತೆರಳಿದ್ದಾರೆ. ಬ್ರಿಟನ್‌ನಿಂದ ಆಗಮಿಸಿ, ಕರೋನಾ ನೆಗೆಟಿವ್ ವರದಿ ಪಡೆದವರೂ 14 ದಿನಗಳ ಕಾಲ ಹೋಂ ಕ್ವಾರಂಟೈನ್‌ನಲ್ಲಿ ಇರಬೇಕು. ಯಾರ ಸಂಪರ್ಕಕ್ಕೂ ಬರಬಾರದು ಎಂಬ ನಿಯಮಗಳಿವೆ. ಆದರೆ, ಲಂಡನ್‌ನಿಂದ ಆಗಮಿಸಿ, ಕರೋನಾ ನೆಗೆಟಿವ್ ವರದಿ ಪಡೆದ ಪ್ರಯಾಣಿಕರು ಸಾರ್ವಜನಿಕ ವಾಹನಗಳಲ್ಲಿ ಸಂಚರಿಸಿದ್ದಾರೆ.

**ಸರಕಾರದ ನಿರ್ಲಕ್ಷ್ಯ:** ರೂಪಾಂತರಿ ಕರೋನಾ ಭೀತಿ ಹಿನ್ನೆಲೆಯಲ್ಲಿ ವರದಿ ನೆಗೆಟಿವ್ ಬಂದವರ ಬಗ್ಗೆಯೂ ಸರಕಾರ ಲಕ್ಷ್ಯ ವಹಿಸಬೇಕಿತ್ತು. ಪ್ರತ್ಯೇಕ ವಾಹನಗಳಲ್ಲಿ ಅವರನ್ನು ಮನೆಗೆ ತಲುಪಿಸಬೇಕಾಗಿತ್ತು. ಆದರೆ ಸರಕಾರದಿಂದ ಇಂತಹ ಯಾವುದೇ ಕೆಲಸವಾಗಿಲ್ಲ. ಅವರಿಗೆ ಇಷ್ಟಬಂದ ವಾಹನದಲ್ಲಿ ಮನೆಗೆ ತೆರಳಿದ್ದಾರೆ. ಇದರಿಂದ ಕರೋನಾ ಸೋಂಕು ಹರಡುವ ಆತಂಕ ಹೆಚ್ಚಾಗಿದೆ. ಕರೋನಾ ಪರೀಕ್ಷೆಯಲ್ಲಿ ನೆಗೆಟಿವ್ ವರದಿ ಬಂದವರನ್ನು ಕಳಿಸುತ್ತಿದ್ದೇವೆ. 14 ದಿನಗಳಲ್ಲಿ ಕರೋನಾ ಬರುತ್ತದೆಂದು ಹೇಳಲು ಆಗುವುದಿಲ್ಲ. ಎಲ್ಲರ ವಿಳಾಸ ಪಡೆದು, ಮಾನಿಟರ್ ಮಾಡುತ್ತೇವೆ ಎಂದು ಬೆಂಗಳೂರಿನಲ್ಲಿ ಸುಧಾಕರ್ ಹೇಳಿದ್ದಾರೆ.

## ವರದಿ ವಿಳಂಬ: ಪ್ರಯಾಣಿಕರು ಆಕ್ರೋಶ

ರೂಪಾಂತರಿ ಕರೋನಾ ಗದ್ದಲದ ಬಳಿಕ ಲಂಡನ್‌ನಿಂದ ಭಾರತಕ್ಕೆ ವಿಮಾನ ಹಾರಾಟ ಆರಂಭವಾಗಿದೆ. ಲಂಡನ್‌ನಿಂದ ಬೆಂಗಳೂರಿಗೆ ಭಾನುವಾರ ಮುಂಜಾನೆ 4.30ಕ್ಕೆ ಮೊದಲ ವಿಮಾನ ಆಗಮಿಸಿತ್ತು. ಲಂಡನ್‌ನಿಂದ ವಾಪಸಾದ ಭಾರತೀಯರಿಗೆ ಕರೋನಾ ಪರೀಕ್ಷೆ ಕಡ್ಡಾಯಗೊಳಿಸಲಾಗಿತ್ತು. ವಿಮಾನ ನಿಲ್ದಾಣದಲ್ಲಿ ಆ ಬಗ್ಗೆ ಸೂಕ್ತ ವ್ಯವಸ್ಥೆಗಳನ್ನು ಮಾಡುವಂತೆ ತಿಳಿಸಲಾಗಿತ್ತು. ಆದರೆ, 4.30ರ ವಿಮಾನದಲ್ಲಿ ಬೆಂಗಳೂರಿಗೆ ಆಗಮಿಸಿರುವ ಪ್ರಯಾಣಿಕರು, ಕರೋನಾ ಪರೀಕ್ಷಾ ವರದಿಗಾಗಿ ಕಾಯುತ್ತಿದ್ದ ಪ್ರಯಾಣಿಕರು ಅಸಮಾಧಾನ ಹೊರಹಾಕಿದ್ದರು. ವಿಮಾನ ನಿಲ್ದಾಣದಲ್ಲಿ ಕರೋನಾ ಪರೀಕ್ಷೆಯ ಬಗ್ಗೆ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಲಂಡನ್‌ನಿಂದ ಆಗಮಿಸಿದವರ ಮಾಹಿತಿ ಸಂಗ್ರಹ (ಡಾಟಾ ಎಂಟ್ರಿ) ಮಾಡುತ್ತಿದ್ದ ಸಿಬ್ಬಂದಿ ಮೇಲೆ ಪ್ರಯಾಣಿಕರು ಗರಂ ಆಗಿದ್ದಾರೆ. ಪ್ರಯಾಣಿಕರನ್ನು ಸಮಾಧಾನಪಡಿಸಲು ಸಿಬ್ಬಂದಿ ಹರಸಾಹಸ ಪಡುವಂತಾಗಿತ್ತು.

**ಯುಕೆಯಿಂದ ಬಂದ ವಿಮಾನದಲ್ಲಿ ಒಟ್ಟು 289 ಮಂದಿ ಇದ್ದರು. ಎಲ್ಲರ ಮಾದರಿ ಪಡೆದು ಪರೀಕ್ಷೆ ಮಾಡಿದ್ದು, ನಾಲ್ಕು ಮಂದಿಯ ಒಂದು ಪೂಲ್‌ನಲ್ಲಿ ಕರೋನಾ ಸೋಂಕು ಬಂದಿತ್ತು. ನಂತರ ಪರೀಕ್ಷೆಯಲ್ಲಿ ನೆಗೆಟಿವ್ ವರದಿ ಬಂದಿದೆ.**

– **ಡಾ. ಕೆ.ಸುಧಾಕರ್** ಆರೋಗ್ಯ ಇಲಾಖೆ ಖಾತೆ ಸಚಿವ

ವಿಶ್ವವಾಣಿ



ಆನಂದ್ ರಾವ್ ಸರ್ಕಲ್ ಬಳಿಯ ಆರೋಗ್ಯ ಇಲಾಖೆಯ ಹಳೆ ಕಟ್ಟಡದಲ್ಲಿನ ಲಸಿಕೆ ದಾಸ್ತಾನುಗಳ ವ್ಯವಸ್ಥೆಯನ್ನು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ. ಸುಧಾಕರ್ ಪರಿಶೀಲನೆ ನಡೆಸಿದರು.

# ರಾಜ್ಯದಲ್ಲಿ 792 ಜನರಿಗೆ ಕರೋನಾ

**ಬೆಂಗಳೂರು:** ದೇಶದಲ್ಲಿ ಜನವರಿ 16ರಿಂದ ಕರೋನಾ ಲಸಿಕೆ ಹಂಚಿಕೆ ಆರಂಭವಾಗದಲಿದೆ. ಈ ಮಧ್ಯೆ ರಾಜ್ಯದಲ್ಲಿ ಕರೋನಾ ಪ್ರಕರಣಗಳ ಸಂಖ್ಯೆ ಇಳಿಮುಖ ಆಗುತ್ತಿರುವುದು ಜನರು ನಿಟ್ಟುಸಿರು ಬಿಡುವಂತಾಗಿದೆ. ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆ ಮಾಹಿತಿ ಬಿಡುಗಡೆ ಮಾಡಿದೆ. ಕಳೆದ 24 ಗಂಟೆಗಳಲ್ಲಿ ರಾಜ್ಯದಲ್ಲಿ ಹೊಸದಾಗಿ 792 ಜನರಿಗೆ ಕರೋನಾ ದೃಢವಾಗಿದೆ. ಈ ಮೂಲಕ ಕರೋನಾ ಸೋಂಕಿತರ ಸಂಖ್ಯೆ 9,27,559 ಕ್ಕೇರಿದೆ. ರಾಜ್ಯದಲ್ಲಿ ಒಂದೇ ದಿನ ಕರೋನಾ ಸೋಂಕಿನಿಂದ ಇಬ್ಬರು ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಸಾವಿನ ಸಂಖ್ಯೆ ಕೂಡ ಮಿತಿ ಮೀರಿ ಕಡಿಮೆ ಆಗಿದೆ. ರಾಜ್ಯದಲ್ಲಿ ಇದುವರೆಗೆ ಕರೋನಾದಿಂದ 12,140 ಜನ ಮೃತಪಟ್ಟಿದ್ದಾರೆ. ಸೋಂಕಿತರ ಪೈಕಿ 9,05,751 ಜನ ಡಿಸ್ಚಾರ್ಜ್ ಆಗಿದ್ದಾರೆ. 9,649 ಸೋಂಕಿತರಿಗೆ ನಿಗದಿತ ಕರೋನಾ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಒಟ್ಟು 202 ಜನರು ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನಿತ್ಯ ರಾಜ್ಯದಲ್ಲಿ ಆ್ಯಕ್ಟಿವ್ ಕೇಸ್‌ಗಳ ಸಂಖ್ಯೆ ಕೂಡ ಕಡಿಮೆ ಆಗುತ್ತಿರುವುದು ಜನರಲ್ಲಿ ಹೊಸ ಆಶಾಭಾವ ಮೂಡಿಸಿದೆ.



**2 ಲಸಿಕಾ ಸಂಗ್ರಹ ವ್ಯವಸ್ಥೆ:** ರಾಜ್ಯದಲ್ಲಿ ಪ್ರಮುಖವಾಗಿ ಬೆಂಗಳೂರು ಹಾಗೂ ಬೆಳಗಾವಿಯಲ್ಲಿ 2 ಲಸಿಕೆ ಸಂಗ್ರಹ ವ್ಯವಸ್ಥೆಗಳಿವೆ. ಇದಲ್ಲದೆ, ಚಿತ್ರದುರ್ಗ, ಕಲಬುರಗಿ, ದಕ್ಷಿಣ ಕನ್ನಡ, ಮೈಸೂರು ಮತ್ತು ಬಾಗಲಕೋಟೆಯಲ್ಲಿ 5 ಪ್ರಾದೇಶಿಕ ಸಂಗ್ರಹ ವ್ಯವಸ್ಥೆ ಇದೆ. ಪ್ರತಿ ಜಿಲ್ಲೆಯಲ್ಲೂ ಒಂದು ಕಾರ್ಪೊರೇಷನ್ ಲಸಿಕೆ ಸಂಗ್ರಹ ವ್ಯವಸ್ಥೆ ಇದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 50 ಬ್ಲಾಕ್ ಇದೆ. ಒಟ್ಟು 2,767 ಕೋಲ್ಡ್ ಚೇನ್ ಪಾಯಿಂಟ್‌ಗಳಿವೆ. ಇವೆಲ್ಲ ಮೂಲ ಸೌಕರ್ಯದೊಂದಿಗೆ ಲಸಿಕೆ ವಿತರಣೆ ಮಾಡಲಾಗುವುದು.

ಉದಯವಾಣಿ
ಜನಮನದ ಜೀವನಾಡಿ

# ಇಂಗ್ಲೆಂಡ್‌ನಿಂದ ಬಂದ ಎಲ್ಲರಿಗೂ ನೆಗೆಟಿವ್

## ರಾಜ್ಯದ ವಿಮಾನ ನಿಲ್ದಾಣಕ್ಕೆ 289 ಮಂದಿ ಆಗಮನ



**ಬೆಂಗಳೂರು:** ಇಂಗ್ಲೆಂಡ್‌ನಿಂದ ರಾಜ್ಯದ ವಿಮಾನ ನಿಲ್ದಾಣಕ್ಕೆ ಶನಿವಾರ 289 ಮಂದಿ ಆಗಮಿಸಿದ್ದು ಎಲ್ಲರಿಗೂ ಕೊರೊನಾ ಸೋಂಕು ಪರೀಕ್ಷೆ ನಡೆಸಲಾಗಿದೆ. ಯಾವೊಬ್ಬರಲ್ಲೂ ಸೋಂಕು ದೃಢಪಟ್ಟಿಲ್ಲ.

ಬ್ರಿಟನ್ ರೂಪಾಂತರದಿಂದ ಬಂದ್ ಆಗಿದ್ದ ವಿಮಾನ ಸಂಚಾರ 2 ವಾರಗಳ ನಂತರ ಆರಂಭಗೊಂಡಿದೆ. ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮೊದಲ ವಿಮಾನ ಬೆಳಗಿನ ಜಾವ 4 ಗಂಟೆಗೆ ಆಗಮಿಸಿತು. ಸಿಬ್ಬಂದಿ ಸೇರಿದಂತೆ ಒಟ್ಟು 289 ಮಂದಿ ಆಗಮಿಸಿದ್ದು, ಆರೋಗ್ಯ ಇಲಾಖೆ ಸೂಚನೆಯಂತೆ ಕಡ್ಡಾಯ ಕೊರೊನಾ ಪರೀಕ್ಷೆಗೆ ಒಳಪಡಿಸಲಾಯಿತು. ಆರಂಭದಲ್ಲಿ ಕೆಲವರಲ್ಲಿ ಸೋಂಕಿನ ಲಕ್ಷಣ ಕಂಡು ಬಂದರೂ, ಸೋಂಕು ಪರೀಕ್ಷೆಯಲ್ಲಿ ಯಾರಲ್ಲೂ ಸೋಂಕು ದೃಢಪಟ್ಟಿಲ್ಲ.

**ಎಲ್ಲಾ ಪ್ರಯಾಣಿಕರ ಕೈಗೂ ಮುದ್ರೆ:** 289 ಮಂದಿಯಲ್ಲಿ 145 ಪುರುಷರು, 96 ಮಹಿಳೆಯರು, 32 ಮಕ್ಕಳು ಹಾಗೂ 16 ಮಂದಿ ವಿಮಾನ ಸಿಬ್ಬಂದಿ ಸೇರಿದ್ದಾರೆ. ನಿಲ್ದಾಣದ ನಿರ್ಗಮನ ದ್ವಾರದಲ್ಲಿ ಈ ಪ್ರಯಾಣಿಕರಿಗಾಗಿಯೇ ಪ್ರತ್ಯೇಕ ಸ್ಥಳವನ್ನು ನಿಯೋಜಿಸಲಾಗಿತ್ತು. ಆರಂಭದಲ್ಲಿ ನಿಲ್ದಾಣದ ಸಿಬ್ಬಂದಿ ಥರ್ಮಲ್ ಸ್ಕ್ರೀನಿಂಗ್ ಪರೀಕ್ಷೆ ನಡೆಸಿದರು. ಈ ಎಲ್ಲಾ ಪ್ರಯಾಣಿಕರ ಕೈಗೂ ಮುದ್ರೆ ಹಾಕಲಾಗಿದೆ.

### ಮೊದಲು ಪಾಸಿಟಿವ್, ನಂತರ ನೆಗೆಟಿವ್

ಪೂಲ್ ಮಾದರಿಯಲ್ಲಿ ಅಂದರೆ, ಐದು ಮಂದಿ ಅಥವಾ ನಾಲ್ವರ ಗಂಟಲು ದ್ರವ ಸಂಗ್ರಹಿಸಿ ಒಂದುಗೂಡಿಸಿ ಸೋಂಕು ಪರೀಕ್ಷೆಗೆ ನಡೆಸುವುದು. ಈ ಪರೀಕ್ಷೆಯಲ್ಲಿ ಒಂದು ಪೂಲ್‌ದು (ನಾಲ್ಕು ಮಂದಿ) ಪಾಸಿಟಿವ್ ವರದಿ ಬಂದಿದೆ. ಈ ಹಿನ್ನೆಲೆ ಆ ಎಲ್ಲಾ ಪ್ರಯಾಣಿಕರ ಮಾದರಿಯನ್ನು ಪ್ರತ್ಯೇಕವಾಗಿ ಪರೀಕ್ಷೆಗೊಳಪಡಿಸಲಾಗಿದೆ. ಆದರೆ ಅಂತಿಮವಾಗಿ ಪರೀಕ್ಷೆಯಲ್ಲಿ ಫಲಿತಾಂಶ ನೆಗೆಟಿವ್ ಬಂದಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

### ಇಂದು ವಂಶವಾಹಿನಿ ಪರೀಕ್ಷೆ ವರದಿ ಸಾಧ್ಯತೆ

ಕಳೆದ ತಿಂಗಳು ಇಂಗ್ಲೆಂಡ್‌ನಿಂದ ಬಂದ ಪ್ರಯಾಣಿಕರ ಪೈಕಿ 66 ಮಂದಿ ಸೋಂಕು ದೃಢಪಟ್ಟಿದೆ. ಇದರಲ್ಲಿ 36 ಮಂದಿ ವಂಶವಾಹಿನಿ ಪರೀಕ್ಷೆ ಕೂಡಾ ನಡೆದು, 11 ಮಂದಿಯಲ್ಲಿ ಬ್ರಿಟನ್ ರೂಪಾಂತರ ಪತ್ತೆಯಾಗಿದೆ. ಬಾಕಿ 30 ಮಂದಿಯ ವಂಶವಾಹಿನಿ ಪರೀಕ್ಷೆ ವರದಿ ಸೋಮವಾರ ಬರುವ ಸಾಧ್ಯತೆಗಳಿವೆ.

**ಸಿಮ್ ಕಾರ್ಡ್ ವ್ಯವಸ್ಥೆ:** ಇಂಗ್ಲೆಂಡ್‌ನಿಂದ ಬಂದ ಪ್ರಯಾಣಿಕ ಬಳಿ ಸ್ಥಳೀಯ ಮೊಬೈಲ್ ನಂಬರ್ ಇರಲಿಲ್ಲ. ಇದರಿಂದ ಸೋಂಕು ಪರೀಕ್ಷೆಗೆ ನೋಂದಣಿ ಮಾಡಿಕೊಳ್ಳಲು ಮೊಬೈಲ್ ನಂಬರ್ ಇಲ್ಲದೆ ಆರಂಭದಲ್ಲಿ ಸಮಸ್ಯೆ ಎದುರಾಗಿತ್ತು. ಅಲ್ಲದೆ, ಆರೋಗ್ಯ ಇಲಾಖೆಗೂ ಕೂಡಾ ಭವಿಷ್ಯದಲ್ಲಿ ಸಂಪರ್ಕ ಕಷ್ಟಸಾಧ್ಯವಾಗುತ್ತಿತ್ತು. ಈ ಹಿನ್ನೆಲೆ ಆರೋಗ್ಯ ಸಚಿವರು ಸ್ಥಳೀಯ ಏಜೆನ್ಸಿಯೊಂದಿಗೆ ಮಾತನಾಡಿ ಹೊಸ ಸಿಮ್ ಕಾರ್ಡ್ ವ್ಯವಸ್ಥೆ ಮಾಡಿದ್ದರು.

ಉದಯವಾಣಿ
ಜನಮನದ ಜೀವನಾಡಿ

# ಅವಕಾಶವಿದ್ರೆ ನಾನೇ ಲಸಿಕೆ ಪಡೆಯುವೆ

## ರಾಜ್ಯಮಟ್ಟದ ಲಸಿಕೆ ಸಂಗ್ರಹಾಗಾರ ಪರಿಶೀಲಿಸಿದ ಬಳಿಕ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿಕೆ

**ಬೆಂಗಳೂರು:** ಕೇಂದ್ರ ಸರ್ಕಾರ ಹೊರಡಿಸುವ ಮಾರ್ಗಸೂಚಿಯಲ್ಲಿ ಅವಕಾಶವಿದ್ದರೆ ರಾಜ್ಯದಲ್ಲಿ ಕೊರೊನಾ ಲಸಿಕೆ ಪಡೆಯುವ ಮೊದಲಿಗ ನಾನೇ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ಭಾನುವಾರ ನಗರದ ಆನಂದ್‌ರಾವ್ ವೃತ್ತದಲ್ಲಿರುವ ಆರೋಗ್ಯ ಇಲಾಖೆ ಹಳೇ ಕಚೇರಿಯಲ್ಲಿ ಸಿದ್ಧಪಡಿಸಿರುವ ರಾಜ್ಯಮಟ್ಟದ ಲಸಿಕೆ ಸಂಗ್ರಹಾಗಾರವನ್ನು ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ಸೋಮವಾರ ಕೇಂದ್ರ ಸರ್ಕಾರವು ಲಸಿಕೆ ವಿತರಣೆ ಸಂಪೂರ್ಣ ಮಾರ್ಗಸೂಚಿಯನ್ನು ಹೊರಡಿಸಲಿದೆ. ಅದರಲ್ಲಿ ಜನಪ್ರತಿನಿಧಿಗಳು ಲಸಿಕೆ ಪಡೆಯಬಹುದು ಎಂಬ ಅವಕಾಶವಿದ್ದರೆ ರಾಜ್ಯದಲ್ಲಿ ವಿತರಿಸುವ ಕೊರೊನಾ ಲಸಿಕೆಯನ್ನು ಪಡೆಯುವ ಮೊದಲ ವ್ಯಕ್ತಿ ನಾನೇ ಆಗಿರುತ್ತೇನೆ. ಇದರಲ್ಲಿಯಾವುದೇ ಅನುಮಾನವಿಲ್ಲ, ಜನರಲ್ಲಿನ ಲಸಿಕೆ ಕುರಿತು ಆತ್ಮವಿಶ್ವಾಸ ತುಂಬಿದಂತಾಗುತ್ತದೆ. ಲಸಿಕೆ ಸಂಪೂರ್ಣ ಸುರಕ್ಷಿತವಾಗಿದ್ದು, ಯಾವುದೇ ಆತಂಕ ಬೇಡ ಎಂದು ಹೇಳಿದರು.

ಈಗಾಗಲೇ ಪ್ರಧಾನಿಗಳು ಜ.16 ರಿಂದ ಕೊರೊನಾ ಲಸಿಕೆ ನೀಡುವ ಬಗ್ಗೆ ತಿಳಿಸಿದ್ದು, ಸೋಮವಾರ ಸಂಜೆ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ವಿಡಿಯೋ ಸಂವಾದ ನಡೆಸಲಿದ್ದಾರೆ. ಮೊದಲ ಹಂತದಲ್ಲಿ ರಾಜ್ಯಕ್ಕೆ 13.90 ಲಕ್ಷ ಡೋಸ್ ಲಸಿಕೆ ಸಿಗಲಿದೆ. ಬೆಂಗಳೂರಿನಲ್ಲಿ ಎರಡು ವಾಕ್-ಇನ್ ಕೂಲರ್ ಇದೆ. ಒಂದರಲ್ಲಿ 45 ಲಕ್ಷ ಡೋಸ್ ಸಂಗ್ರಹಿಸಲು ಅವಕಾಶವಿದೆ. ಇದೇ ರೀತಿ ಒಂದು ವಾಕ್- ಇನ್ ಫ್ರೀಜರ್ ಇದೆ. ಅದರಲ್ಲಿ 40 ಲಕ್ಷ ಡೋಸ್ ಸಂಗ್ರಹ ಸಾಮರ್ಥ್ಯವಿದೆ. ಕೇಂದ್ರ ಸರ್ಕಾರ ಇನ್ನೂ ಒಂದು ವಾಕ್- ಇನ್ ಫ್ರೀಜರ್ ನೀಡಲಿದೆ. ಈಗಾಗಲೇ 24 ಲಕ್ಷ ಸಿರಿಂಜ್‌ಗಳು ಕೇಂದ್ರದಿಂದ ಈಗಾಗಲೇ ಬಂದಿದ್ದು, ಬೆಂಗಳೂರಿನಲ್ಲಿ ಇವುಗಳ ಸಂಗ್ರಹಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದರು.

ಮೊದಲಿಗೆ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡಲಾಗುವುದು. ಅನಂತರ 50 ವರ್ಷ ಮೇಲ್ಪಟ್ಟವರು, ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿರುವವರಿಗೆ ನೀಡಲು ಉದ್ದೇಶಿಸಲಾಗಿದೆ. ಸಾಮಾನ್ಯ ಆರೋಗ್ಯವಂತ ವ್ಯಕ್ತಿಗೆ ಲಸಿಕೆ ನೀಡಲು ಎರಡು ತಿಂಗಳು ಬೇಕಾಗಬಹುದು. ಪ್ರತಿಯೊಬ್ಬರೂ ಲಸಿಕೆ ಪಡೆಯಬೇಕೆ ಬೇಡವೇ ಎಂಬುದನ್ನು ತಜ್ಞರ ಸಲಹೆ ಮೇರೆಗೆ ಕೇಂದ್ರ ಸರ್ಕಾರ ತೀರ್ಮಾನಿಸಲಿದೆ ಎಂದರು.


**ಬೆಂಗಳೂರಿನ ಆನಂದ್ ರಾವ್ ವೃತ್ತದಲ್ಲಿರುವ ಆರೋಗ್ಯ ಇಲಾಖೆ ಹಳೇ ಕಚೇರಿಯಲ್ಲಿ ಸಿದ್ಧಪಡಿಸಿರುವ ರಾಜ್ಯಮಟ್ಟದ ಲಸಿಕೆ ಸಂಗ್ರಹಾಗಾರವನ್ನು ಸಚಿವ ಸುಧಾಕರ್ ಭಾನುವಾರ ಪರಿಶೀಲಿಸಿದರು.**

## ಸಂಗ್ರಹಕ್ಕೆ 2 ವಾಕ್ ಇನ್ ಕೂಲರ್

ರಾಜ್ಯದಲ್ಲಿ ಲಸಿಕೆ ಸಂಗ್ರಹಿಸಲು ಈಗಾಗಲೇ ಎರಡು ವಾಕ್ ಇನ್ ಕೂಲರ್ ಇದೆ. ಒಂದು ಬೆಂಗಳೂರು ಮತ್ತು ಮತ್ತೊಂದು ಬೆಳಗಾವಿಯ ರಾಜ್ಯಮಟ್ಟದ ಸಂಗ್ರಹಾಗಾರದಲ್ಲಿದೆ. ಇವುಗಳಲ್ಲಿ 40 ಲಕ್ಷ ಡೋಸ್ ಲಸಿಕೆ ಸಂಗ್ರಹಿಸಬಹುದು. ಜತೆಗೆ ಒಂದು ವಾಕ್ ಇನ್ ಫ್ರಿಜರ್ ಇದೆ. ಒಂದರಲ್ಲಿ 45 ಲಕ್ಷ ಡೋಸ್ ಸಂಗ್ರಹಿಸಲು ಅವಕಾಶವಿದೆ. ಕೇಂದ್ರ ಸರ್ಕಾರ ಇನ್ನೂ ಒಂದು ವಾಕ್- ಇನ್ ಫ್ರೀಜರ್ ನೀಡಲಿದೆ. ಪ್ರತಿ ಜಿಲ್ಲೆಯಲ್ಲೂ ಲಸಿಕೆ ಸಂಗ್ರಹ ವ್ಯವಸ್ಥೆ ಇದೆ. 900 ವ್ಯಾಕ್ಸಿನ್ ಕ್ಯಾರಿಯರ್ಸ್ ಇವೆ. ರಾಜ್ಯಾದ್ಯಂತ ಒಟ್ಟು 2,767 ಕೋಲ್ಡ್ ಚೇನ್ ಪಾಯಿಂಟ್‌ಗಳು ಇವೆ. ಮೂಲಸೌಕರ್ಯದೊಂದಿಗೆ ಲಸಿಕೆ ವಿತರಣೆ ಮಾಡಲಾಗುವುದು ಎಂದು ಸಚಿವರು ತಿಳಿಸಿದರು.


**ಆರೋಗ್ಯ ಇಲಾಖೆ ಹಳೆಯ ಕಚೇರಿಯಲ್ಲಿರುವ ವಾಕ್ ಇನ್ ಕೂಲರ್.**

**ಇಂಗ್ಲೆಂಡ್‌ನಿಂದ ಬಂದವರದು ನೆಗೆಟಿವ್:** ಇಂಗ್ಲೆಂಡ್‌ನಿಂದ ಬರುತ್ತಿರುವ ಪ್ರಯಾಣಿಕರನ್ನು ಕೊರೊನಾ ಪರೀಕ್ಷೆ ನಡೆಸಿಯೇ ಹೊರಬಿಡಲಾಗುತ್ತಿದೆ. ಸಿಮ್ ಸಮಸ್ಯೆ ಇದ್ದವರಿಗೆ ವಿಮಾನ ನಿಲ್ದಾಣದಲ್ಲೇ ವ್ಯವಸ್ಥೆ ಮಾಡಲಾಗುತ್ತದೆ. ಆ ಹೊಸ ಮೊಬೈಲ್ ನೋಂದಣಿ ಮಾಡಿಕೊಳ್ಳಲಾಗುತ್ತದೆ. ಭಾನುವಾರ ಬೆಳಗ್ಗೆ ಬಂದ ವಿಮಾನದಲ್ಲಿ ಒಟ್ಟು 289 ಪ್ರಯಾಣಿಕರು ಇದ್ದರು.ಎಲ್ಲರ ಗಂಟಲ ದ್ರವ ಮಾದರಿ ಪಡೆದು ಪರೀಕ್ಷೆ ಮಾಡಿದ್ದು, ವರದಿ ನೆಗೆಟಿವ್ ಬಂದಿದೆ ಎಂದು ಸಚಿವ ಸುಧಾಕರ್ ಹೇಳಿದರು.

ಉದಯವಾಣಿ
ಜನಮನದ ಜೀವನಾಡಿ

# ಮೊಳೆ ಮುಕ್ತ ಮರ ಅಭಿಯಾನಕ್ಕೆ ಚಾಲನೆ

**ಬೆಂಗಳೂರು:** ನಗರದ ಕೇಶವ ಸೇವಾ ಸಮಿತಿ ಹಮ್ಮಿಕೊಂಡಿರುವ ಮೊಳೆ ಮುಕ್ತ ಮರಗಳು ಅಭಿಯಾನಕ್ಕೆ ಸಂಸದ ಪಿ.ಸಿ.ಮೋಹನ್ ಭಾನುವಾರ ಚಾಲನೆ ನೀಡಿದರು. ಈ ಅಭಿಯಾನಡದಿ ಒಂದೇ ದಿನ ಸಮಿತಿಯಿಂದ 100 ಮರಗಳಲ್ಲಿದ್ದ 75 ಫಲಕಗಳು, 2500 ಪಿನ್ ಹಾಗೂ 568 ಮೊಳೆಗಳನ್ನು ಹೊರ ತೆಗೆಯಲಾಗಿದೆ.



ಸ್ವಾಮಿ ವಿವೇಕಾನಂದರ ಜಯಂತಿ ಅಂಗವಾಗಿ ಹಲಸೂರು ಲೇಕ್ ಸಮೀಪದ ಉದ್ಯಾನವನದಲ್ಲಿ ಸ್ವಾಮಿ ವಿವೇಕಾನಂದರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು. ನಂತರ ಸಂಸದ ಪಿ.ಸಿ.ಮೋಹನ್ ಸಮಿತಿಯ ಸದಸ್ಯರೊಂದಿಗೆ ಮರಗಳಲ್ಲಿ ಹಾಕಿದ್ದ ಫಲಕಗಳು, ಪಿನ್ ಮತ್ತು ಮೊಳೆ ತೆಗೆಯುವ ಕಾರ್ಯದಲ್ಲೂ ಪಾಲ್ಗೊಂಡಿದ್ದರು.

ಮರಗಳಿಗೂ ಜೀವವಿದೆ. ಪರಿಸರ ಉಳಿಸಿದರೆ ನಮ್ಮೆಲ್ಲರ ಭವಿಷ್ಯವೂ ಚೆನ್ನಾಗಿರುತ್ತದೆ. ಮರಗಳನ್ನು ರಕ್ಷಿಸಿದರೆ, ಅವು ನಮ್ಮ ಆರೋಗ್ಯವನ್ನು ರಕ್ಷಿಸುತ್ತವೆ. ಮರಗಳಿಗೆ ಮೊಳೆ, ಪಿನ್ ಹೊಡೆಯಬಾರದು ಎಂದು ಸಲಹೆ ನೀಡಿದರು. ಅಭಿಯಾನದಲ್ಲಿ ಪಾಲ್ಗೊಂಡಿದ್ದ ಕಾರ್ಯಕರ್ತರು ವಿವೇಕಾನಂದ ಉದ್ಯಾನದ ಸುತ್ತಮುತ್ತಲಿನ ಮರಗಳಲ್ಲಿನ ಪಿನ್, ಮೊಳೆ ಹಾಗೂ ಫಲಕಗಳನ್ನು ತೆಗೆದರು. ಮರಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಈ ಅಭಿಯಾನವನ್ನು ಪ್ರತಿ ಭಾನುವಾರ ನಡೆಸುವ ಸಂಕಲ್ಪ ಮಾಡಿದರು.

ಅಭಿಯಾನದಲ್ಲಿ ರಾಮಕೃಷ್ಣ ಮಠದ ಅಧ್ಯಕ್ಷ ತತ್ವರೂಪಾನಂದ ಸ್ವಾಮೀಜಿ, ಅರಣ್ಯ ನಿಗಮದ ಅಧ್ಯಕ್ಷೆ ಹಾಗೂ ನಟಿ ತಾರಾ ಅನುರಾಧ, ಬಿಜೆಪಿ ಮುಖಂಡ ಗೋಪಿನಾಥರೆಡ್ಡಿ, ಕೇಶವ ಸಮಿತಿ ಸಂಯೋಜಕ ಪ್ರಕಾಶ್‌ರಾಜು ಇದ್ದರು.

ಉದಯವಾಣಿ
ಜನಮನದ ಜೀವನಾಡಿ

# ಲಸಿಕೆ ಬರುವುದಷ್ಟೇ ಬಾಕಿ...

**ರಾಜ್ಯದಲ್ಲಿ ಲಸಿಕೆ ಸಂಗ್ರಹ ಹಾಗೂ ಸಾಗಾಟಕ್ಕೆ ಎಲ್ಲ ವ್ಯವಸ್ಥೆ ಅಂತಿಮಗೊಂಡಿದ್ದು, ಲಸಿಕೆ ಬರುವುದಷ್ಟೇ ಬಾಕಿ. ಮೊದಲ ಹಂತದಲ್ಲಿ ಮೂರು ಕೋಟಿ ಆರೋಗ್ಯ ಸಿಬ್ಬಂದಿಗೆ ಲಸಿಕೆ ನೀಡಲಾಗುವುದು.**

## ಸಿಎಂ ಜತೆ ಮೋದಿ ಸಂವಾದ ಇಂದು

ದೇಶಾದ್ಯಂತ ಕೊರೊನಾ ಲಸಿಕೆ ವಿತರಣೆ ದಿನ ಸಮೀಪಿಸುತ್ತಿರುವಂತೆಯೇ ಪ್ರಧಾನಿ ನರೇಂದ್ರ ಮೋದಿಯವರು ಸೋಮವಾರ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮುಖ್ಯಮಂತ್ರಿಗಳೊಂದಿಗೆ ವಿಡಿಯೋ ಸಂವಾದ ನಡೆಸಲಿದ್ದಾರೆ. ಕೊವ್ಯಾಕ್ಸಿನ್ ಮತ್ತು ಕೊವಿಶೀಲ್ಡ್ ಲಸಿಕೆಗಳ ನಿರ್ಬಂಧಿತ ತುರ್ತು ಬಳಕೆಗೆ ಭಾರತೀಯ ಔಷಧ ನಿಯಂತ್ರಣ ಮಹಾನಿರ್ದೇಶನಾಲಯ(ಡಿಸಿಜಿಐ) ಒಪ್ಪಿಗೆ ನೀಡಿದ ಬಳಿಕ ಪ್ರಧಾನಿ ಮತ್ತು ಸಿಎಂಗಳ ನಡುವೆ ನಡೆಯುತ್ತಿರುವ ಮೊದಲ ಸಂವಾದ ಇದಾಗಿದೆ. ದೇಶದ ಕೊರೊನಾ ಸ್ಥಿತಿಗತಿ ಹಾಗೂ ಸುಸೂತ್ರವಾಗಿ ಲಸಿಕೆ ವಿತರಣೆ ಪ್ರಕ್ರಿಯೆ ನಡೆಸುವ ಕುರಿತು ಅವರು ಚರ್ಚಿಸುವ ಸಾಧ್ಯತೆಯಿದೆ.




ರಾಜ್ಯ ಸಂಗ್ರಹಾಗಾರ

ಪ್ರಾದೇಶಿಕ ಸಂಗ್ರಹಾಗಾರ

ಜಿಲ್ಲಾ ಸಂಗ್ರಹಾಗಾರ

ಕೋಲ್ಡ್ ಚೈನ್ ಪಾಯಿಂಟ್
**2096**

ಪಾಲಿಕೆ ಸಂಗ್ರಹಾಗಾರ
**01**

**02** ವಾಕ್ ಇನ್ ಕೂಲರ್

**900** ವ್ಯಾಕ್ಸಿನ್ ಕ್ಯಾರಿಯರ್

**45** ಲಕ್ಷ ಡೋಸ್ ಸಂಗ್ರಹ ಸಾಮರ್ಥ್ಯ

## ವಿತರಣೆ ಮಾರ್ಗ

ಕೇಂದ್ರ ಸರ್ಕಾರದಿಂದ ವಿಮಾನ ಮೂಲಕ ಬೆಂಗಳೂರು ಮತ್ತು ಬೆಳಗಾವಿಯ ರಾಜ್ಯ ಮಟ್ಟದ ಸಂಗ್ರಹಾಗಾರಕ್ಕೆ ಲಸಿಕೆ ಬರಲಿವೆ. ಅಲ್ಲಿಂದ ಶೀತಲೀಕರಣ ಟ್ರಕ್‌ಗಳ ಮೂಲಕ ನೇರವಾಗಿ ಐದು ಪ್ರಾದೇಶಿಕ ಸಂಗ್ರಹಾಗಾರಕ್ಕೆ ಸಾಗಿಸಲಾಗುತ್ತದೆ. ಅಲ್ಲಿಂದ ಜಿಲ್ಲಾ ಸಂಗ್ರಹಾಗಾರಕ್ಕೆ ಸಂಗ್ರಹದ ಮೂಲಕ ಕೋಲ್ಡ್ ಚೈನ್ ಪಾಯಿಂಟ್‌ಗೆ ಕಳುಹಿಸಲಾಗುತ್ತದೆ. ಅಲ್ಲಿ ಶೇಖರಿಸಿಟ್ಟು ಸ್ಥಳೀಯ ಆರೋಗ್ಯ ಕೇಂದ್ರಗಳಿಗೆ ಲಸಿಕೆ ಕ್ಯಾರಿಯರ್‌ಗಳ (ಬಾಕ್ಸ್) ಮೂಲಕ ಕಳುಹಿಸಲಾಗುತ್ತದೆ. ಆ ಕೇಂದ್ರಗಳಲ್ಲಿ ಲಸಿಕೆ ಫಲಾನುಭವಿಗಳಿಗೆ ವಿತರಿಸಲಾಗುತ್ತದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.



**ಕೊರೊನಾ ಲಸಿಕೆ ಸಂಗ್ರಹಕ್ಕೆ ಹಾಗೂ ವಿತರಣೆಗೆ ಬೇಕಾದ ಎಲ್ಲ ವ್ಯವಸ್ಥೆ ಪೂರ್ಣಗೊಂಡಿದೆ. ಮೊದಲ ಹಂತದಲ್ಲಿ ರಾಜ್ಯಕ್ಕೆ 13.90 ಲಕ್ಷ ಡೋಸ್ ಲಸಿಕೆ ಸಿಗಲಿದೆ.**

• **ಡಾ. ಕೆ. ಸುಧಾಕರ್**, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ

ಸಂಯುಕ್ತ ಕರ್ನಾಟಕ

# ಇಂದಿನಿಂದ ವಾರ್ಡ್‌ಗಳ ಹೆಚ್ಚಳ ಪ್ರಕ್ರಿಯೆ

ಸಂ.ಕ. ಸಮಾಚಾರ ಬೆಂಗಳೂರು

ಬಿಬಿಎಂಪಿ ವಿಧೇಯಕಕ್ಕೆ ರಾಜ್ಯಪಾಲರು ಅಂಕಿತ ಹಾಕಿರುವುದರಿಂದ ಜನವರಿ 11ರಿಂದ ವಿಧೇಯಕದ ನಿಯಮಗಳು ಜಾರಿಗೆ ಬರುವುದರ ಜೊತೆಗೆ 198 ವಾರ್ಡ್‌ಗಳು 243ಕ್ಕೆ ಏರಿಕೆಯಾಗುವ ಪ್ರಕ್ರಿಯೆಗಳೂ ಆರಂಭವಾಗಲಿವೆ.

ಈಗಿನ ವಿಧೇಯಕ ಅಂಗೀಕಾರವಾಗಿರುವುದರಿಂದ ಬಿಬಿಎಂಪಿ ವಾರ್ಡ್‌ಗಳನ್ನು 243ಗೆ ಹೆಚ್ಚಿಸುವ ಮರುವಿಂಗಡನೆ ಪ್ರಕ್ರಿಯೆ ಪ್ರಾರಂಭವಾಗಿದ್ದು, ಇನ್ನಷ್ಟು ಚುರುಕಿನಿಂದ ನಡೆಯಲಿದೆ. ಮೇಯರ್ ಮತ್ತು ಉಪಮೇಯರ್ ಅಧಿಕಾರಾವಧಿ ಈಗಿನ ಒಂದು ವರ್ಷದಿಂದ ಎರಡೂವರೆ ವರ್ಷಕ್ಕೆ ಹೆಚ್ಚಾಗಲಿದೆ.

ನೂತನ ಕಾಯ್ದೆಯ ಪ್ರಕಾರ ಬಿಬಿಎಂಪಿ ಸುತ್ತಲೂ ಇರುವ 1 ಕಿಲೋ ಮೀಟರ್ ವ್ಯಾಪ್ತಿಯ ಗ್ರಾಮ, ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ ಹಾಗೂ ನಗರಸಭೆಗೆ ಸೇರಿದ ಪ್ರದೇಶಗಳು ಪಾಲಿಕೆ ವ್ಯಾಪ್ತಿಗೆ ಸೇರ್ಪಡೆಯಾಗಲಿದೆ. ಆ ಮೂಲಕ ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆ ಹಾಲಿ ಇರುವ 198ರಿಂದ 243ಕ್ಕೆ ಏರಿಕೆಯಾಗಲಿದೆ. ಪ್ರಮುಖವಾಗಿ ಮೇಯರ್ ಅಧಿಕಾರಾವಧಿ ಎರಡೂವರೆ ವರ್ಷ ಇರಲಿದೆ.

- ಜಾರಿಗೆ ಬಂದ ಬಿಬಿಎಂಪಿ ವಿಧೇಯಕ
- ವಾರ್ಡ್‌ಗಳ ಮರುವಿಂಗಡನೆ ಪ್ರಕ್ರಿಯೆ
- 198 ವಾರ್ಡ್‌ಗಳಿರುವುದು 243ಕ್ಕೆ ಹೆಚ್ಚಳ
- ಪಾಲಿಕೆ ಸುತ್ತಲ 1 ಕಿ.ಮೀ ವ್ಯಾಪ್ತಿ ಗ್ರಾಮಗಳ ಸೇರ್ಪಡೆ
- ಮೇಯರ್ ಅಧಿಕಾರಾವಧಿ ಎರಡೂವರೆ ವರ್ಷಕ್ಕೆ ಏರಿಕೆ

ಬಿಬಿಎಂಪಿ ನೂತನ ಕಾಯ್ದೆ ಜಾರಿಗೆ ಬರುವುದರಿಂದ ಪ್ರಸ್ತುತ ಇರುವ ಬಿಬಿಎಂಪಿ ಆಯುಕ್ತ ಹುದ್ದೆಯನ್ನು ಮುಖ್ಯ ಆಯುಕ್ತರ ಹುದ್ದೆಯಾಗಿ ಮಾಡಲಾಗುತ್ತದೆ. ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯ ಹುದ್ದೆಗಿಂತ ಕಡಿಮೆ ಇಲ್ಲದವರನ್ನು ಮುಖ್ಯ ಹುದ್ದೆಗೆ ನೇಮಕ ಮಾಡಲಾಗುವುದು. ಮುಖ್ಯ ಆಯುಕ್ತರ ಅಧಿಕಾರವಧಿ ಎರಡು ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ನಿಯೋಜನೆ ಮಾಡಬೇಕು. ಅವಧಿಗೆ ಮೊದಲು ವರ್ಗಾವಣೆ ಮಾಡಬೇಕಾದರೆ



ಬಿಬಿಎಂಪಿ ಮೇಯರ್ ಅವರಿಗೆ ಕಾರಣಗಳನ್ನು ತಿಳಿಸಬೇಕಾಗುತ್ತದೆ.

ನಗರದಲ್ಲಿ ಮಳೆಗಾಲ ಸೇರಿದಂತೆ ಇನ್ನಿತರ ಅವಘಡಗಳನ್ನು ತಪ್ಪಿಸಲು ವಿಪತ್ತು ನಿರ್ವಹಣಾ ಸಮಿತಿ ರಚನೆಯಾಗಲಿದೆ. ನಗರದಲ್ಲಿ ಸಾರ್ವಜನಿಕರಿಗೆ ತುರ್ತಾಗಿ ಸ್ಪಂದಿಸುವ ಉದ್ದೇಶದಿಂದ ವಿಪತ್ತು ನಿರ್ವಹಣಾ ಸಮಿತಿ ರಚನೆಯಾಗಲಿದೆ.

ಪಾಲಿಕೆಯ ವ್ಯಾಪ್ತಿಯಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡುವ ಉದ್ದೇಶದಿಂದ ವಿಧಾನಸಭಾ ಕ್ಷೇತ್ರವಾರು ಹಾಗೂ ವಾರ್ಡ್‌ನಲ್ಲಿ 'ಪ್ರಾಂತ್ಯ ಸಭೆ'ಗಳು ಅಥವಾ ಏರಿಯಾ ಸಭಾಗಳ ರಚನೆಯಾಗಲಿದೆ. ಏರಿಯಾ ಸಭಾಗಳಲ್ಲಿ ವಾರ್ಡಿನ ಪ್ರತಿಯೊಬ್ಬ ಮತದಾರರೂ ಸದಸ್ಯರಾಗಿರಲಿದ್ದಾರೆ. ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆಯಾಗಲಿದೆ. ಇದರಿಂದ ಶಾಸಕರಿಗೆ ಬಿಬಿಎಂಪಿ ಆಡಳಿತದಲ್ಲಿ ಹೆಚ್ಚಿನ ಪ್ರಾತಿನಿಧ್ಯ ಸಿಗಲಿದೆ.

ಕ್ಷೇತ್ರ ಸಮಾಲೋಚನಾ ಸಮಿತಿಗಳ ರಚನೆ ಮಾಡಲಾಗುವುದು. ಪಾಲಿಕೆ ವ್ಯಾಪ್ತಿಯ ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಂದು ವಿಧಾನಸಭಾ ಸಮಾಲೋಚನಾ ಸಮಿತಿಯನ್ನು ರಚನೆ ಮಾಡಲಾಗುವುದು. ಆಯಾ ವಿಧಾನಸಭಾ ಕ್ಷೇತ್ರದ ಶಾಸಕರೇ ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಆಯಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ವಾರ್ಡ್‌ಗಳ ಸದಸ್ಯರು ಈ ವಾರ್ಡ್‌ನಲ್ಲಿ ಸದಸ್ಯರಾಗಿರುತ್ತಾರೆ. ಈ ಸಮಿತಿಯ ಅಧಿಕಾರಾವಧಿ 30 ತಿಂಗಳು ಇರಲಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿ ವಲಯಕ್ಕೂ ಒಂದು ಸಮಿತಿಯನ್ನು ರಚನೆ ಮಾಡಲಾಗುವುದು.

ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯಲ್ಲಿ 8 ವಲಯಗಳಿದ್ದು ಅವರುಗಳನ್ನು 15 ವಲಯಗಳನ್ನಾಗಿ ಮರುವಿಂಗಡನೆ ಮಾಡಲಾಗುವುದು. ಪ್ರತಿ ವಲಯಗಳಿಗೂ ಸಮಿತಿ ರಚನೆ ಮಾಡಲಾಗುತ್ತದೆ.

## 243 ಮಂದಿಗೆ ಜಾಗದ ಕೊರತೆ

ಪ್ರಸ್ತುತ ಬಿಬಿಎಂಪಿಯಲ್ಲಿ 198 ಸದಸ್ಯರಿದ್ದಾರೆ. ಹಾಗೆಯೇ ಅಧಿಕಾರಕ್ಕೆ ಬಂದ ಸರ್ಕಾರಗಳು 20 ಮಂದಿಯನ್ನು ನಾಮಕರಣ ಮಾಡುತ್ತದೆ. ಇನ್ನು ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರದ ಶಾಸಕರು, ಐವರು ಸಂಸದರು, 10ಕ್ಕೂ ಹೆಚ್ಚು ಮಂದಿ ವಿಧಾನಪರಿಷತ್ ಸದಸ್ಯರು ಇರುತ್ತಾರೆ.

ಮೇಯರ್ ಚುನಾವಣೆ ಸಂದರ್ಭದಲ್ಲಿ ಇಷ್ಟು ಮಂದಿಗೇ ಜಾಗದ ಕೊರತೆ ಎದುರಾಗುತ್ತದೆ. ಇನ್ನು 243 ವಾರ್ಡ್‌ಗಳಿಗೆ ಹೆಚ್ಚಳ ಮಾಡಿದರೆ ಶಾಸಕರು, ಸಂಸದರು, ನಾಮಕರಣ ಸದಸ್ಯರು ಸೇರಿದರೆ 330ಕ್ಕೂ ಹೆಚ್ಚು ಸದಸ್ಯರುಗಳಾಗುತ್ತಾರೆ. ಇದರಿಂದ ಈಗಿರುವ ಪೌರಸಭಾಂಗಣದಲ್ಲಿ ಕೌನ್ಸಿಲ್ ಸಭೆ ಮಾಡುವುದು ಕಷ್ಟಕರ. ಇದಕ್ಕೆ ಸರ್ಕಾರ ಪರಿಹಾರ ಸೂಚಿಸಿಲ್ಲ. ವಾರ್ಡ್‌ಗಳ ಹೆಚ್ಚಳ ಮಾಡಿ ಬಿಬಿಎಂಪಿಗೆ ಚುನಾವಣೆ ನಡೆಸುವ ವೇಳೆಗೆ ಪರ್ಯಾಯ ಸಭಾಂಗಣವನ್ನು ಗುರುತಿಸಬೇಕಾಗುತ್ತದೆ.

ಸಂಯುಕ್ತ ಕರ್ನಾಟಕ

# 2000 ಸ್ಥಳಗಳಲ್ಲಿ ಬಯಲಲ್ಲೇ ಮೂತ್ರ ವಿಸರ್ಜನೆ

**ಸಂ.ಕ. ಸಮಾಚಾರ ಬೆಂಗಳೂರು**

ನಗರದಲ್ಲಿ ಶೌಚಾಲಯಗಳ ಕೊರತೆ ಎದುರಾಗಿರುವ ಹಿನ್ನೆಲೆಯಲ್ಲಿ ನಗರದ ಪ್ರಮುಖ ಪ್ರದೇಶಗಳಲ್ಲೇ ಜನರು ಬಯಲಿನಲ್ಲಿ ಮೂತ್ರ ವಿಸರ್ಜನೆ ಮಾಡುತ್ತಿರುವುದು ಬೆಳಕಿಗೆ ಬಂದಿದೆ.

ಬಿಬಿಎಂಪಿ ಹಾಗೂ ಜನಾಗ್ರಹ ಸೇರಿದಂತೆ 40ಕ್ಕೂ ಹೆಚ್ಚು ಸ್ವಯಂ ಸೇವಾ ಸಂಸ್ಥೆಗಳು ಈ ವಿಚಾರವಾಗಿ ಅಭಿಯಾನ ನಡೆಸಿವೆ. ಜನರು ಬಯಲಲ್ಲೆ ಮೂತ್ರ ಮಾಡಲು ಪ್ರಮುಖ ಕಾರಣ ಎಂದರೆ ಸಾರ್ವಜನಿಕ ಶೌಚಾಲಯಗಳ ಕೊರತೆ.

ಹಾಗೆಯೇ ಖಾಸಗಿಯವರು ನಡೆಸುತ್ತಿರುವ ಶೌಚಾಲಯಗಳಲ್ಲಿ ಹಣ ನೀಡಬೇಕು ಎಂಬ ಕಾರಣಕ್ಕೆ ನಾಗರಿಕರು ಬಯಲನ್ನೇ ಆಶ್ರಯಿಸುತ್ತಿರುವುದು ಅಧ್ಯಯನದಿಂದ ಗೊತ್ತಾಗಿದೆ.

- **'ನನ್ನ ನಗರ, ನನ್ನ ಬಜೆಟ್' ಅಭಿಯಾನ**
- **ಸಾರ್ವಜನಿಕ ಶೌಚಾಲಯಗಳ ಕೊರತೆ**
- **ಖಾಸಗಿ ಶೌಚಾಲಯಗಳಲ್ಲಿ ಹಣ ವಸೂಲಿ**

ಪಾಲಿಕೆ ವ್ಯಾಪ್ತಿಯ ಸಾರ್ವಜನಿಕ ಪ್ರದೇಶಗಳಲ್ಲಿ ಮೂತ್ರ ವಿಸರ್ಜನೆ ಮಾಡುವುದನ್ನು ತಪ್ಪಿಸುವುದು ಹಾಗೂ ಸಾರ್ವಜನಿಕರಿಗೆ ಅವಶ್ಯವಿರುವ ಪ್ರದೇಶಗಳಲ್ಲಿ ಶೌಚಾಲಯ ನಿರ್ಮಾಣ ಮಾಡುವ ಉದ್ದೇಶದಿಂದ 'ನನ್ನ ನಗರ, ನನ್ನ ಬಜೆಟ್' ಎಂಬ ಅಭಿಯಾನ ಪ್ರಾರಂಭಿಸಲಾಗಿತ್ತು. ಇದಕ್ಕೆ ಸಾರ್ವಜನಿಕರಿಂದ ಉತ್ತಮ ಅಭಿಪ್ರಾಯ ವ್ಯಕ್ತವಾಗಿದೆ.

ಐದು ಸಾವಿರಕ್ಕೂ ಹೆಚ್ಚು ಜನ ನಗರದ ವಿವಿಧೆಡೆಯಿಂದ ಎಲ್ಲೆಲ್ಲಿ ಶೌಚಾಲಯ ಸಮಸ್ಯೆ ಇದೆ ಎಂದು ತಿಳಿಸಿದ್ದಾರೆ. ಇದರಲ್ಲಿ ನಗರದ ಎರಡು ಸಾವಿರಕ್ಕೂ ಹೆಚ್ಚು ಪ್ರದೇಶಗಳಲ್ಲಿ ಜನ ಮೂತ್ರ ವಿಸರ್ಜನೆ ಮಾಡುತ್ತಿದ್ದಾರೆ ಎಂದು ದೂರಿದ್ದಾರೆ ಎಂದು ಜನಾಗ್ರಹ ಸಂಸ್ಥೆಯ ಸದಸ್ಯೆ ಸ್ವಪ್ನಾ ಮಾಹಿತಿ ನೀಡಿದ್ದಾರೆ.

ಯೋಜನೆಯನ್ನು ಪಾಲಿಕೆಯ 2021-22ನೇ ಸಾಲಿನಲ್ಲಿ ಸೇರಿಸಿಕೊಳ್ಳುವ ಉದ್ದೇಶವಿದೆ ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ತಿಳಿಸಿದ್ದು, ಈ ಅಭಿಯಾನ ಮಹತ್ವ ಪಡೆದುಕೊಂಡಿದೆ.

ಸಂಯುಕ್ತ ಕರ್ನಾಟಕ

# ಶನಿವಾರದಿಂದ ರಾಜ್ಯದಲ್ಲಿ ಲಸಿಕೆ ವಿತರಣೆ

ಸಂ.ಕ. ಸಮಾಚಾರ ಬೆಂಗಳೂರು: ಶನಿವಾರದಿಂದ ರಾಜ್ಯಾದ್ಯಂತ ಕೊರೊನಾ ಲಸಿಕೆ ವಿತರಣೆಯಾಗಲಿದ್ದು ಇದಕ್ಕಾಗಿ ಎಲ್ಲ ರೀತಿಯ ಸಿದ್ಧತೆಗಳನ್ನು ಪೂರ್ಣಗೊಳಿಸಲಾಗಿದೆ.

ಕೊರೊನಾ ಸೋಂಕು ಹರಡಿದಾಗಿನಿಂದ ಹಗಲಿರುಳು ಸೋಂಕನ್ನು ತಡೆಯಲು ಕೊರೊನಾ ಯೋಧರಾಗಿ ಕರ್ತವ್ಯ ನಿರ್ವಹಿಸಿದ ಕೊರೊನಾ ವಾರಿಯರ್ಸ್‌ಗೆ ಮೊದಲ ಆದ್ಯತೆಯಾಗಿ ನೀಡಲು ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

ಕೊರೊನಾ ಲಸಿಕೆ ನೀಡುವ ಕುರಿತು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಅವರು ಆನಂದ್ ರಾವ್ ಸರ್ಕಲ್‌ನಲ್ಲಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಟ್ಟಡದಲ್ಲಿ ಲಸಿಕೆ ದಾಸ್ತಾನಿಗೆ ಕೈಗೊಂಡಿರುವ ಸಿದ್ಧತೆಗಳ ಬಗ್ಗೆ ಪರಿಶೀಲನೆ ನಡೆಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನವರಿ 16ರಿಂದ ದೇಶದ ಜನರಿಗೆ ಕೊರೊನಾ ಲಸಿಕೆ ನೀಡಲಾಗುತ್ತದೆ. ಕೊರೊನಾ ಯೋಧರಿಗೆ ಮೊದಲನೆಯದಾಗಿ ವ್ಯಾಕ್ಸಿನ್ ನೀಡಲಾಗುತ್ತದೆ. ಲಸಿಕೆ ದಾಸ್ತಾನು ಸೌಲಭ್ಯವನ್ನು ವೀಕ್ಷಣೆ ಮಾಡಿದ್ದೇನೆ ಎಂದರು. ಮೊದಲ ಹಂತದಲ್ಲಿ ಬೆಂಗಳೂರಿಗೆ 1,13,400 ಮತ್ತು ಬೆಳಗಾವಿಗೆ 25,800 ಲಸಿಕೆ ಬಾಟಲ್‌ಗಳು ಬರಲಿದೆ. ಆನಂದ್ ರಾವ್ ಸರ್ಕಲ್ ಬಳಿಯ ಔಷಧ ಉಗ್ರಾಣದಲ್ಲಿ ಲಸಿಕೆ ಶೇಖರಣೆಗೆ ವ್ಯವಸ್ಥೆ ಮಾಡಲಾಗಿದೆ ಎಂದರು.



**ಶನಿವಾರದಿಂದ ಕೊರೊನಾ ಲಸಿಕೆ ವಿತರಣೆಗೆ ಸಂಬಂಧಿಸಿದಂತೆ ಬೆಂಗಳೂರಿನ ಆರೋಗ್ಯ ಇಲಾಖೆಯಲ್ಲಿ ಕೊರೊನಾ ಲಸಿಕೆ ದಾಸ್ತಾನಿಗೆ ಕೈಗೊಂಡಿರುವ ಸಿದ್ಧತೆಗಳ ಬಗ್ಗೆ ಸಚಿವ ಡಾ. ಕೆ. ಸುಧಾಕರ್ ಪರಿಶೀಲನೆ ನಡೆಸಿದರು.**

ಬೆಂಗಳೂರಿನ ಉಗ್ರಾಣದಿಂದ ಬೆಂಗಳೂರು, ಚಿತ್ರದುರ್ಗ, ಮೈಸೂರು, ದಕ್ಷಿಣ ಕನ್ನಡ ಮತ್ತು ಕಲ್ಬುರ್ಗಿಗೆ ರವಾನೆ ಮಾಡಲಾಗುತ್ತದೆ. ಬಾಗಲಕೋಟೆ ಮತ್ತು ಬೆಳಗಾವಿಯಲ್ಲಿ ಕೂಡಾ ಇದೇ ಬಗೆಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಬೆಂಗಳೂರು 2, ಮೈಸೂರು 2, ದಕ್ಷಿಣ ಕನ್ನಡ 1, ಚಿತ್ರದುರ್ಗ 1, ಕಲ್ಬುರ್ಗಿ 2, ಬಾಗಲಕೋಟೆ 1, ಬೆಳಗಾವಿ 1 ವಾಕ್‌ಇನ್ ಕೂಲರ್‌ಗಳು ರಾಜ್ಯದ ಬಳಿ ಇವೆ. ರಾಜ್ಯದಲ್ಲಿ 5 ಪ್ರಾದೇಶಿಕ ದಾಸ್ತಾನು ಕೇಂದ್ರಗಳಿವೆ. ಪ್ರತಿ ಜಿಲ್ಲೆಯಲ್ಲಿ ಒಂದು ಲಸಿಕಾ ದಾಸ್ತಾನು ಸೌಲಭ್ಯವಿದೆ. ಬಿಬಿಎಂಪಿಯಲ್ಲಿ ಒಂದು ಲಸಿಕೆ ದಾಸ್ತಾನು ಕೇಂದ್ರವಿದೆ. ಇಲ್ಲಿಂದ ಐದು ರೀಜನಲ್ ಸ್ಟೋರ್‌ಗಳಿಗೆ ಲಸಿಕೆ ಸರಬರಾಜು ಮಾಡಲಾಗುತ್ತದೆ.

40 ಲಕ್ಷ ಡೋಸೆಜ್ ವ್ಯಾಕ್ಸಿನ್ ಸ್ಟೋರ್ ಮಾಡುವ ಸಾಮರ್ಥ್ಯವಿದೆ. ಒಂದು ವಾಕ್‌ಇನ್ ಫ್ರೀಜರ್ ಇದೆ, ಕೇಂದ್ರ ಸರ್ಕಾರ ಮತ್ತೊಂದು ವಾಕ್‌ಇನ್ ಫ್ರೀಜರ್ ನೀಡಲಿದೆ. 900 ವ್ಯಾಕ್ಸಿನ್ ಕ್ಯಾರಿಯರ್ಸ್ ಇವೆ. ಮೊದಲನೆ ಕಂತಿನಲ್ಲಿ 14 ಲಕ್ಷದಷ್ಟು ವ್ಯಾಕ್ಸಿನ್ ಬರಲಿದೆ. ಒಟ್ಟು 24 ಲಕ್ಷ ಸಿರಿಂಜ್‌ಗಳು ಬಂದಿವೆ. ವ್ಯಾಕ್ಸಿನ್ ವಿತರಣೆಗೆ ರಾಜ್ಯದಾದ್ಯಂತ ಕೋಲ್ಡ್ ಚೈನ್ ರೆಡಿಯಾಗಿದೆ. ವ್ಯಾಕ್ಸಿನ್ ಸಂರಕ್ಷಣೆ, ವಿತರಣೆಗೆ 6 ಹಂತಗಳಲ್ಲಿ ಕೋಲ್ಡ್ ಚೈನ್ ರೂಪಿಸಲಾಗಿದೆ. ಬೆಂಗಳೂರು ವಿಭಾಗದಲ್ಲಿ ನಾಲ್ಕು, ಬೆಳಗಾವಿ ವಿಭಾಗದಲ್ಲಿ ಒಂದು ಪ್ರಾದೇಶಿಕ ಕೋಲ್ಡ್ ಸ್ಟೋರೇಜ್‌ಗಳಿವೆ ಎಂದು ತಿಳಿಸಿದರು.

ಸಂಯುಕ್ತ ಕರ್ನಾಟಕ

# ಲಸಿಕೆ ಅಭಿಯಾನಕ್ಕೆ ಬಿರುಸಿನ ತಯಾರಿ

**ನವದೆಹಲಿ:** ಇದೇ ಶನಿವಾರದಿಂದಲೇ ದೇಶದಲ್ಲಿ ಲಸಿಕಾ ಅಭಿಯಾನ ಆರಂಭವಾಗಲಿದೆ ಎಂದು ಕೇಂದ್ರ ಸರ್ಕಾರ ಘೋಷಿಸಿರುವ ಬೆನ್ನಲ್ಲೇ ರಾಜ್ಯ ಸರ್ಕಾರಗಳಿಂದ ಅದನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ತಯಾರಿ ನಡೆದಿದೆ.

ಈಗಾಗಲೇ ಮೂರು ಸುತ್ತಿನ ಲಸಿಕಾ ಕಾರ್ಯಕ್ರಮದ ಪೂರ್ವಾಭ್ಯಾಸ ಯಶಸ್ವಿಯಾಗಿ ನಡೆದಿದೆ. ತಯಾರಿಗಳು ಸಾಕಷ್ಟು ಆಗಿವೆಯೇ ಅಥವಾ ಕೊರತೆಗಳೇನಾದರೂ ಇವೆಯೇ ಎನ್ನುವುದನ್ನು ಈ ಮೂಲಕ ಕಂಡುಕೊಂಡಿದ್ದು ಅದರಂತೆ ಅನುಷ್ಠಾನ ಯೋಜನೆಗೆ ತಯಾರಿ ನಡೆಸಲಾಗುತ್ತಿದೆ.

ದೆಹಲಿಯಲ್ಲಿ 89 ಆಸ್ಪತ್ರೆಗಳಲ್ಲಿ ಲಸಿಕಾ ಕಾರ್ಯಕ್ರಮ ನಡೆಸಲಾಗುತ್ತದೆ ಎಂದು ಅಲ್ಲಿನ ಆರೋಗ್ಯ ಸಚಿವ ಸತ್ಯೇಂದ್ರ ಜೈನ್ ತಿಳಿಸಿದ್ದಾರೆ. ಈ ಪೈಕಿ 26 ಸರ್ಕಾರಿ ಆಸ್ಪತ್ರೆಗಳಾಗಿದ್ದು, ಉಳಿದ 53 ಖಾಸಗಿ ಆಸ್ಪತ್ರೆಗಳಾಗಿವೆ. ಲಸಿಕೆ ತುಂಬಿರುವ ಬಾಟಲುಗಳು ಮಂಗಳವಾರ ಅಥವಾ ಬುಧವಾರ ರಾಜಧಾನಿಗೆ ಬಂದಿಳಿಯಲಿವೆ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

ರಾಜಸ್ಥಾನದಲ್ಲಿ ಮೊದಲ ಹಂತದ ಲಸಿಕೆ ಕಾರ್ಯಕ್ರಮಕ್ಕೆ ನಾಲ್ಕೂವರೆ ಲಕ್ಷ ವೈದ್ಯಕೀಯ ಸಿಬ್ಬಂದಿಯನ್ನು ಗುರುತಿಸಲಾಗಿದೆ. 4,36,146 ವೈದ್ಯಕೀಯ ಸಿಬ್ಬಂದಿಯ ಮಾಹಿತಿಯನ್ನು ಕೊವಿನ್ ಆಪ್‌ಗೆ ಅಪ್‌ಲೋಡ್ ಮಾಡಲಾಗಿದೆ. ಮೊದಲ ಹಂತದಲ್ಲಿ ಜ.16ರಿಂದ 282 ಕಡೆಗಳಲ್ಲಿ ಲಸಿಕೆ ನೀಡಲಾಗುವುದು ಎಂದು ರಾಜ್ಯ ಆರೋಗ್ಯ ಸಚಿವ ರಘು ಶರ್ಮಾ ತಿಳಿಸಿದ್ದಾರೆ.



**89** ದೆಹಲಿಯಲ್ಲಿ ಶುರುವಾಗಲಿರುವ ಲಸಿಕಾ ಕೇಂದ್ರಗಳು

**4.36** ಲಕ್ಷ ರಾಜಸ್ಥಾನದಲ್ಲಿ ಲಸಿಕೆ ಪಡೆಯಲಿರುವ ವೈದ್ಯಕೀಯ ಸಿಬ್ಬಂದಿ

**4.62** ಲಕ್ಷ ಬಿಹಾರದಲ್ಲಿ ಲಸಿಕೆ ಪಡೆಯಲಿರುವ ವೈದ್ಯಕೀಯ ಸಿಬ್ಬಂದಿ

**139** ಪ.ಬಂಗಾಳದಲ್ಲಿ ಆರಂಭವಾಗಲಿರುವ ಲಸಿಕಾ ಕೇಂದ್ರಗಳು

ಗೋವಾದಲ್ಲಿ ಮೊದಲ ಹಂತದ ಲಸಿಕೆ ಅಭಿಯಾನಕ್ಕೆ ಎಂಟು ಆಸ್ಪತ್ರೆಗಳನ್ನು ಗುರುತಿಸಲಾಗಿದೆ. ಇಲ್ಲಿ 18,000 ವೈದ್ಯಕೀಯ ಸಿಬ್ಬಂದಿಗೆ ಲಸಿಕೆ ನೀಡಲಾಗುತ್ತದೆ. ಪ್ರತಿಯೊಂದು ಸ್ಥಳದಲ್ಲಿ ನೂರು ಜನರಿಗೆ ಲಸಿಕೆ ನೀಡಲಾಗುತ್ತದೆ ಎಂದು ರಾಜ್ಯ ಲಸಿಕಾ ಅಧಿಕಾರಿ ಡಾ.ರಾಜೇಂದ್ರ ಬೊರ್ಕರ್ ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ರಾಜ್ಯದ ಜನರನ್ನು ಉದ್ದೇಶಿಸಿ ಬಹಿರಂಗ ಪತ್ರವೊಂದನ್ನು ಬರೆದಿದ್ದು, ಅದ್ಯತೆ ಮೇರೆಗೆ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡುವುದಾಗಿ ಹೇಳಿದ್ದಾರೆ.

ತೆಲಂಗಾಣದ 139 ಸ್ಥಳಗಳಲ್ಲಿ ಶನಿವಾರದಿಂದ ಲಸಿಕೆ ಕಾರ್ಯಕ್ರಮ ಶುರುವಾಗಲಿದೆ. ಪ್ರತಿಯೊಂದು ಜಿಲ್ಲೆಯಲ್ಲಿ ಎರಡು ಅಥವಾ ಮೂರು ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ಆರೋಗ್ಯ ಸಚಿವ ಈಟೆಲ ರಾಜೇಂದರ್ ತಿಳಿಸಿದ್ದಾರೆ.

ಬಿಹಾರದಲ್ಲಿ ಮೊದಲ ಹಂತದ ಲಸಿಕೆ ನೀಡಲು 4.62 ಲಕ್ಷ ವೈದ್ಯಕೀಯ ಸಿಬ್ಬಂದಿಯನ್ನು ಗುರುತಿಸಲಾಗಿದ್ದು, ಇವರ ಮಾಹಿತಿ ಕೊವಿನ್ ಪೋರ್ಟಲ್‌ಗೆ ಅಪ್‌ಲೋಡ್ ಮಾಡಲಾಗಿದೆ.

ಸಂಯುಕ್ತ ಕರ್ನಾಟಕ

# ಸೋಂಕಿತರ ಸಾವಿನ ಪ್ರಮಾಣ ಕುಸಿತ

**ನವದೆಹಲಿ:** ದೇಶದಲ್ಲಿ ಪ್ರತಿದಿನ ದಾಖಲಾಗುತ್ತಿರುವ ಮೃತರ ಸಂಖ್ಯೆ ಕಳೆದ 16 ದಿನಗಳಿಂದ ಸತತವಾಗಿ 300ಕ್ಕಿಂತ ಕಡಿಮೆ ದಾಖಲಾಗುತ್ತಿದ್ದು, ರಾಷ್ಟ್ರೀಯ ಮೃತ್ಯುಪ್ರಮಾಣ 1.44 ಕುಸಿದಿದೆ. ಕೊರೊನಾ ಸೋಂಕು ನಿಯಂತ್ರಣಕ್ಕೆ ಅಗತ್ಯ ಕ್ರಮ ಕೈಗೊಂಡಿದ್ದಷ್ಟೇ ಅಲ್ಲದೆ ಮೃತ್ಯುಪ್ರಮಾಣ ತಗ್ಗಿಸುವ ನಿಟ್ಟಿನಲ್ಲಿಯೂ ಸರ್ಕಾರ ಕಾರ್ಯಪ್ರವೃತ್ತರಾದ್ದರಿಂದ ದೇಶದಲ್ಲಿ ರಾಷ್ಟ್ರೀಯ ಮೃತ್ಯುಪ್ರಮಾಣದಲ್ಲಿ ಇಳಿಕೆ ಕಂಡುಬರುತ್ತಿದೆಯೆಂದು ಕೇಂದ್ರ ಆರೋಗ್ಯ ಸಚಿವಾಲಯ ಅಭಿಪ್ರಾಯಪಟ್ಟಿದೆ.

ದೇಶದ ಸಕ್ರಿಯ ಸೋಂಕಿತರ ಸಂಖ್ಯೆ ಹಲವು ದಿನಗಳಿಂದ ಇಳಿಮುಖವಾಗಿ ಸಾಗಿದ್ದು, ಭಾನುವಾರ 2,23,335 ದಾಖಲಾಗಿದೆ. ಕಳೆದ 24 ಗಂಟೆಗಳಲ್ಲಿ 19,299 ಸೋಂಕಿತರು ಗುಣಮುಖರಾದ ಪರಿಣಾಮ, ಅಲ್ಲದೆ ಪ್ರತಿದಿನ ಪತ್ತೆಯಾಗುತ್ತಿರುವ ಸೋಂಕಿತರ ಸಂಖ್ಯೆಯೂ 20,000ಕ್ಕಿಂತ ಕಡಿಮೆ ದಾಖಲಾಗುತ್ತಿರುವುದರಿಂದ ಸಕ್ರಿಯ ಸೋಂಕಿತರ ಸಂಖ್ಯೆ ಇಳಿಯುತ್ತಿದೆ. ಸತತ 20 ದಿನಗಳಿಂದ ಸಕ್ರಿಯ ಸೋಂಕಿತರ ಸಂಖ್ಯೆ 3 ಲಕ್ಷದ ಗಡಿ ಮೀರಿಲ್ಲ ಎನ್ನುವುದು ನೆಮ್ಮದಿಯ ಸಂಗತಿ. ಕಳೆದ ಒಂದು ದಿನದಲ್ಲಿ 201 ಮಂದಿ ಸೋಂಕಿತರು ಮೃತಪಟ್ಟಿದ್ದು, ಒಟ್ಟು ಮೃತರ ಸಂಖ್ಯೆ 1,50,999ಕ್ಕೆ ಏರಿಕೆಯಾಗಿದೆ.

**ಮೆದುಳು ನಿಷ್ಕ್ರಿಯತೆ:** ತೀವ್ರ ನಿಗಾ ಘಟಕಕ್ಕೆ ದಾಖಲಾದ ಕೊರೊನಾ ಸೋಂಕಿತರು ಶ್ವಾಸಕೋಶ ಕಾಯಿಲೆ ಪೀಡಿತರಿಗಿಂತಲೂ ತೀವ್ರವಾಗಿ ಕೋಮಾ ಮತ್ತು ಡೆಲಿರಿಯಂ (ವಾಸ್ತವದ ಮೇಲೆ ಹಿಡಿತವಿಲ್ಲದಿರುವ ಮಾನಸಿಕ ಸಮಸ್ಯೆ)ನಿಂದಬಳಲುತ್ತಿರುವ ಸಂಗತಿ ಸಂಶೋಧನೆಯೊಂದರಿಂದ ದೃಢಪಟ್ಟಿದೆ. ಲ್ಯಾನ್ಸೆಟ್ ರೆಸ್ಪಿರೇಟರಿ ಮೆಡಿಸಿನ್ ಜರ್ನಲ್‌ನಲ್ಲಿ ಪ್ರಕಟಗೊಂಡಿರುವ ಅಮೆರಿಕದ ಸಂಶೋಧಕರ ಅಂಕಣದಲ್ಲಿ ಏಪ್ರಿಲ್ 28ಕ್ಕೂ ಹಿಂದೆ ಆಸ್ಪತ್ರೆಗೆ ದಾಖಲಾದ 2,000 ಕೊರೊನಾ ಸೋಂಕಿತರಲ್ಲಿ ಡೆಲಿರಿಯಂ ಮತ್ತು ಕೋಮಾ ಸಮಸ್ಯೆಗಳು ಕಂಡುಬಂದಿತ್ತು. 14 ದೇಶಗಳ 69 ಐಸಿಯುಗಳಲ್ಲಿ ಈ ಸಂಶೋಧನೆ ಕೈಗೊಳ್ಳಲಾಗಿತ್ತು. ಕೊರೊನಾ ವೈರಾಣು ಮೆದುಳಿನ ನಿಷ್ಕ್ರಿಯತೆ ಉಂಟುಮಾಡುವ ಸಾಮರ್ಥ್ಯವನ್ನು ಹೊಂದಿದೆಯೆಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

## ದೇಶದಲ್ಲಿ ಭಾರಿ ಪ್ರಮಾಣದ ಕೊರೊನಾ ತ್ಯಾಜ್ಯ ಸಂಗ್ರಹ

**ನವದೆಹಲಿ:** ಕೊರೊನಾ ಸಾಂಕ್ರಾಮಿಕದಿಂದಾಗಿ ಕಳೆದ 7 ತಿಂಗಳಲ್ಲಿ ಭಾರತ ಸುಮಾರು 33,000 ಟನ್‌ಗಳಷ್ಟು ವೈದ್ಯಕೀಯ ಜೈವಿಕ ತ್ಯಾಜ್ಯ ಉತ್ಪಾದಿಸಿದೆ. ಪಿಪಿಇ ಕಿಟ್, ಮುಖಗವಸುಗಳು, ಶೂಗಳು, ಪಾದರಕ್ಷೆಗಳು, ಕೈಗವಸು ಗಳು, ಬ್ಯಾಂಡೇಜು, ಹತ್ತಿ ಉಂಡೆಗಳು, ರಕ್ತ ಮೆತ್ತಿದ ಹಾಸಿಗೆ, ಸಿರಿಂಜುಗಳು, ಖಾಲಿಯಾದ ರಕ್ತದ ಪ್ಯಾಕೆಟ್‌ಗಳು ಮತ್ತಿತರ ವಸ್ತುಗಳನ್ನು ವೈದ್ಯಕೀಯ ಜೈವಿಕ ತ್ಯಾಜ್ಯ ಒಳಗೊಂಡಿದೆ. ಅತ್ಯಧಿಕ ವೈದ್ಯಕೀಯ ಜೈವಿಕ ತ್ಯಾಜ್ಯ ಉತ್ಪಾದಿಸಿರುವ ರಾಜ್ಯಗಳಲ್ಲಿ ಅತ್ಯಧಿಕ ಸೋಂಕು ಪ್ರಕರಣಗಳು ದೃಢಪಟ್ಟಿದ್ದ ಮಹಾರಾಷ್ಟ್ರ ಅಗ್ರಸ್ಥಾನ ಕಾಯ್ದುಕೊಂಡಿದೆ. ಈ ಪಟ್ಟಿಯಲ್ಲಿ 2,026 ಟನ್ ತ್ಯಾಜ್ಯ ಉತ್ಪಾದಿಸಿರುವ ಕರ್ನಾಟಕ 8ನೇ ಸ್ಥಾನದಲ್ಲಿದೆ. ಕಳೆದ ಅಕ್ಟೋಬರ್ ತಿಂಗಳಲ್ಲಿ ಅತ್ಯಧಿಕ ವೈದ್ಯಕೀಯ ಜೈವಿಕ ತ್ಯಾಜ್ಯ (5,500 ಟನ್) ಉತ್ಪಾದನೆಯಾಗಿದೆ. ಈ ತ್ಯಾಜ್ಯವನ್ನು ವ್ಯವಸ್ಥಿತವಾಗಿ ಸಂಗ್ರಹಿಸಲಾಗಿದ್ದು, ದೇಶದ 198 ಜೈವಿಕತ್ಯಾಜ್ಯ ಸಂಸ್ಕರಣಾ ಘಟಕಗಳು ಅದರ ಸುರಕ್ಷಿತ ವಿಲೇವಾರಿ ಪ್ರಕ್ರಿಯೆಯಲ್ಲಿ ನಿರತವಾಗಿವೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ತಿಳಿಸಿದೆ. ವೈದ್ಯಕೀಯ ಜೈವಿಕ ತ್ಯಾಜ್ಯದ ನಿರ್ವಹಣೆಗಾಗಿ ಸ್ಮಾರ್ಟ್‌ಫೋನ್ ಆ್ಯಪ್‌ನ್ನು ಕಡ್ಡಾಯವಾಗಿ ಬಳಸುವಂತೆ ಸರ್ವೋಚ್ಚ ನ್ಯಾಯಾಲಯ ಸೂಚಿಸಿತ್ತು.

ಸಂಯುಕ್ತ ಕರ್ನಾಟಕ

# ಬ್ರಿಟನ್‌ನಿಂದ 289 ಪ್ರಯಾಣಿಕರ ಆಗಮನ

**ಸಂ.ಕ. ಸಮಾಚಾರ ಬೆಂಗಳೂರು**

ಭಾನುವಾರ ಬೆಳಗ್ಗೆ ಬ್ರಿಟನ್‌ನಿಂದ ಮತ್ತೆ 289 ಮಂದಿ ಬೆಂಗಳೂರಿಗೆ ಆಗಮಿಸಿದ್ದು ಅವರಲ್ಲಿ ನಾಲ್ವರಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಒಬ್ಬ ವ್ಯಕ್ತಿಗಂತೂ ಬ್ರಿಟನ್ ಸೋಂಕು ತಗಲಿರುವ ಶಂಕೆ ವ್ಯಕ್ತವಾಗಿದೆ.

ಕೊರೊನಾ ವೈರಸ್ ಎರಡನೇ ಅಲೆ ಇಂಗ್ಲೆಂಡ್‌ನಲ್ಲಿ ಶುರುವಾದ ಹಿನ್ನೆಲೆ, ಇಂಗ್ಲೆಂಡ್‌ಗೆ ಹೋಗುವ ಹಾಗೂ ಅಲ್ಲಿಂದ ಬರುವ ವಿಮಾನಯಾನ ರದ್ದು ಮಾಡಲಾಗಿತ್ತು. ಭಾನುವಾರದಿಂದ ಇಂಗ್ಲೆಂಡ್‌ನಿಂದ ವಿಮಾನಯಾನ ಪ್ರಾರಂಭವಾಗಿದ್ದು, ಮೊದಲ ವಿಮಾನ ಮುಂಜಾನೆ 4–30 ಕ್ಕೆ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದೆ.



ಬ್ರಿಟನ್‌ನಿಂದ ಬಂದ ಪ್ರಯಾಣಿಕರಿಗೆ ವಿಮಾನ ನಿಲ್ದಾಣದಲ್ಲೇ ಕೊರೊನಾ ಪರೀಕ್ಷೆ ಮಾಡುತ್ತಿರುವುದು.

ವಿಮಾನದಲ್ಲಿ 289 ಪ್ರಯಾಣಿಕರು ಆಗಮಿಸಿದ್ದಾರೆ. ಅವರಲ್ಲಿ ನಾಲ್ವರ ಕೊರೊನಾ ವರದಿ ಅನುಮಾನಾಸ್ಪದವಾಗಿ ಕಂಡು ಬಂದಿರುವುದರಿಂದ ಅವರೆಲ್ಲರನ್ನೂ ಸುಮಾರು ನಾಲ್ಕೂವರೆ ಗಂಟೆಗಳ ಕಾಲ ವಿಮಾನ ನಿಲ್ದಾಣದಲ್ಲೇ ಐಸೋಲೇಷನ್ ಮಾಡಲಾಗಿತ್ತು. ಒಟ್ಟು 289 ಪ್ರಯಾಣಿಕರಲ್ಲಿ 146 ಪುರುಷರು, 95 ಮಹಿಳೆಯರು, 32 ಮಕ್ಕಳು ಮತ್ತು 16 ಸಿಬ್ಬಂದಿ ಆಗಮಿಸಿದ್ದರು. ಎಲ್ಲರಿಗೂ ವಿಮಾನ ನಿಲ್ದಾಣದಲ್ಲೇ ಕೊರೊನಾ ಪರೀಕ್ಷೆ ಮಾಡಲಾಗಿದ್ದು ನಾಲ್ವರನ್ನು ಹೊರತುಪಡಿಸಿದರೆ ನೆಗೆಟಿವ್ ಬಂದವರ ಕೈಗೆ 'ಬ್ರಿಟನ್ ಪ್ಯಾಸೆಂಜರ್' ಎಂಬ ಸೀಲ್ ಹಾಕಲಾಗಿದ್ದು, ಇವರೆಲ್ಲರೂ 14 ದಿನ ಹೋಂ ಕ್ವಾರಂಟೈನ್ ಆಗುವಂತೆ ಸೂಚನೆ ನೀಡಲಾಗಿದೆ. ಸೋಂಕು ಇರುವವರನ್ನು ಕೂಡಲೇ ನಿಗದಿತ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ಆರಂಭಿಸಲಾಗಿದೆ.

ಪ್ರಸ್ತುತ ನೆಗೆಟಿವ್ ಬಂದಿರುವವರಲ್ಲಿ 14 ದಿನಗಳ ನಂತರ ಒಂದು ವೇಳೆ ಸೋಂಕಿನ ಲಕ್ಷಣಗಳು ಕಂಡುಬಂದಲ್ಲಿ ಅವರುಗಳು ಆರೋಗ್ಯ ಇಲಾಖೆಗೆ ಮಾಹಿತಿ ನೀಡಿ ಕಡ್ಡಾಯವಾಗಿ ಕೊರೊನಾ ಪರೀಕ್ಷೆ ಮಾಡಿಸಲು ಸೂಚಿಸಲಾಗಿದೆ.

ಸಂಯುಕ್ತ ಕರ್ನಾಟಕ

# 1507 ಲಸಿಕೆ ಕೇಂದ್ರಗಳಲ್ಲಿ ಸಿದ್ಧತೆ

**ಬೆಂಗಳೂರು:** ಈ ವಾರದಲ್ಲಿ ಬರಲಿರುವ ಕೊರೊನಾ ಲಸಿಕೆ ವಿತರಣೆಗೆ ಬಿಬಿಎಂಪಿ ಎಲ್ಲ ರೀತಿಯ ತಯಾರಿ ಮಾಡಿಕೊಳ್ಳುತ್ತಿದ್ದು 1507 ಕೇಂದ್ರಗಳಲ್ಲಿ ಸಿದ್ಧತಾ ಕಾರ್ಯ ನಡೆದಿದೆ.

ಈ ವಿಷಯವಾಗಿ ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಸುದ್ದಿಗಾರರಿಗೆ ವಿವರಿಸಿರುವ ಪ್ರಕಾರ, ಈಗಾಗಲೇ ಕೊರೊನಾ ಲಸಿಕೆ ವಿತರಣೆಗೆ ಸಿದ್ಧತೆ ನಡೆಸಲಾಗಿದ್ದು, ಮೂರು ಹಂತದಲ್ಲಿ ಕೊರೊನಾ ಲಸಿಕೆ ನೀಡಲಾಗುತ್ತದೆ. ಮೊದಲ ಹಂತದಲ್ಲಿ ಆರೋಗ್ಯ ಕಾರ್ಯಕರ್ತರಿಗೆ, ಎರಡನೇ ಹಂತದಲ್ಲಿ ಕೋವಿಡ್ ಸಮಯದಲ್ಲಿ ಕರ್ತವ್ಯ ನಿರ್ವಹಿಸಿದ ಪಾಲಿಕೆ ಸಿಬ್ಬಂದಿ, ಶಿಕ್ಷಕರು, ಪೊಲೀಸರು, ಕಂದಾಯ ಅಧಿಕಾರಿಗಳಿಗೂ ಸೇರಿದಂತೆ ಇತರೆ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಲಾಗುವುದು. ಮೂರನೇ ಹಂತದಲ್ಲಿ 50 ವರ್ಷ ಹಾಗೂ ಅದಕ್ಕಿಂತ ಮೇಲ್ಪಟ್ಟವರು ಹಾಗೂ ಅನ್ಯ ಕಾಯಿಲೆಯಿಂದ ಬಳಲುತ್ತಿರುವ 50 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಲಸಿಕೆ ವಿತರಿಸಲಾಗುವುದು ಎಂದು ಹೇಳಿದರು. ಇನ್ನು ಪಾಲಿಕೆ ವ್ಯಾಪ್ತಿಯಲ್ಲಿ ಲಸಿಕೆ ನೀಡಲು ಗುರುತಿಸಿರುವ 1507 ಕೇಂದ್ರಗಳಿಗೆ ತಲಾ ಐದು ಮಂದಿಯಂತೆ 300 ಸೆಕ್ಟರ್ ಅಧಿಕಾರಿಗಳನ್ನು ನಿಯೋಜಿಸಬೇಕು. ಪ್ರತಿ ಕೇಂದ್ರದಲ್ಲಿ ದಿನಕ್ಕೆ 100 ಮಂದಿಗೆ ಲಸಿಕೆ ನೀಡಲು ವ್ಯವಸ್ಥೆ ಮಾಡಬೇಕು. ಪ್ರತಿ ಕೇಂದ್ರ ಆಂಬುಲೆನ್ಸ್ ಮತ್ತು ಆಸ್ಪತ್ರೆಯನ್ನು ಲಿಂಕ್ ಮಾಡಬೇಕು ಎಂದು ಸೂಚನೆ ನೀಡಿದ್ದಾರೆ.

ಸಂಯುಕ್ತ ಕರ್ನಾಟಕ Mon, 11 January 2021
epaper.samyukthakarnataka.com/c/576477

ಹೊಸ ದಿಗಂತ

ಹೊಸ ದಿಗಂತ



11 Jan 2021

## ಬ್ರಿಟನ್‌ನಿಂದ ಬಂದವರಿಗೆ ಕೋವಿಡ್ ಟೆಸ್ಟ್, ಕ್ವಾರಂಟೈನ್ ಕಡ್ಡಾಯ

# 273 ಮಂದಿ ಆಗಮನ

**ಬೆಂಗಳೂರು:** ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ(ಕೆಐಎ)ಕ್ಕೆ ಭಾನುವಾರ ಬೆಳಿಗ್ಗೆ 4 ಗಂಟೆಗೆ ಬ್ರಿಟನ್‌ನಿಂದ ಮೊದಲ ವಿಮಾನದಲ್ಲಿ 273 ಪ್ರಯಾಣಿಕರು ಬಂದಿದ್ದಾರೆ.

ವಿಮಾನದಲ್ಲಿ ಬಂದಿಳಿದವರಲ್ಲಿ 196 ಮಂದಿ ಪುರುಷರು ಹಾಗೂ 95 ಮಂದಿ ಮಹಿಳೆಯರಿದ್ದು, 32 ಮಕ್ಕಳು ಕೂಡ ಇದ್ದಾರೆ. ಇವರ ಜೊತೆಯಲ್ಲಿ 16 ಮಂದಿ ವಿಮಾನ ಸಿಬ್ಬಂದಿಯ ಗಂಟಲಿನ ದ್ರವದ ಮಾದರಿವನ್ನು ವಿಮಾನ ನಿಲ್ದಾಣದಲ್ಲಿಯೇ ಸಂಗ್ರಹಿಸಿ, ಆರ್‌ಟಿಪಿಸಿಆರ್ ಪರೀಕ್ಷೆ ನಡೆಸಲಾಗಿದೆ. ಬ್ರಿಟನ್ ರೂಪಾಂತರ ಕೊರೋನಾ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಡಿ.23ರಿಂದ ವಿಮಾನಯಾನ ಸ್ಥಗಿತಗೊಳಿಸಿತ್ತು. ಇದೀಗ ಬ್ರಿಟನ್ ನಿಂದ ಮತ್ತೆ ವಿಮಾನಗಳ ಹಾರಾಟಕ್ಕೆ ಅವಕಾಶ ನೀಡಿದೆ.

**ಹೋಮ್ ಕ್ವಾರಂಟೈನ್ ಕಡ್ಡಾಯ:** ಈ ಹಿಂದೆ ಬ್ರಿಟನ್‌ನಿಂದ ರಾಜ್ಯಕ್ಕೆ ಬಂದವರಲ್ಲಿ ಕೆಲವರು ಕ್ವಾರಂಟೈನ್ ನಿಯಮವನ್ನು ಉಲ್ಲಂಘಿಸಿ ಪ್ರಯಾಣಿಸಿದ್ದರು. ಇದರಿಂದ ಆರೋಗ್ಯ ಸಿಬ್ಬಂದಿಗೆ ಅವರ ಕ್ವಾರಂಟೈನ್ ಮಾಡುವುದು ಸವಾಲಾಗಿತ್ತು. ಈಗ ಬ್ರಿಟನ್‌ನಿಂದ ಬಂದ ಎಲ್ಲ ಪ್ರಯಾಣಿಕರಿಗೆ 14 ದಿನಗಳ ಹೋಮ್ ಕ್ವಾರಂಟೈನ್ ಮಾಡಲಾಗುತ್ತಿದೆ. ಈ ಹಿಂದೆ ಕೆಲ ಪ್ರಯಾಣಿಕರು ಬ್ರಿಟನ್ ದೂರವಾಣಿ ಸಂಖ್ಯೆ ಹಾಗೂ ತಪ್ಪು ವಿಳಾಸವನ್ನು ನೀಡಿದ್ದರು. ಇದರಿಂದಾಗಿ 70ಕ್ಕೂ ಅಧಿಕ ಮಂದಿಯ ಪತ್ತೆ ಸಾಧ್ಯವಾಗಿರಲಿಲ್ಲ. ಹೀಗಾಗಿ ಈಗ ಬಂದವರನ್ನು ಕಡ್ಡಾಯವಾಗಿ ಮುಂದಿನ 14 ದಿನಗಳು ನಿಗದಿತ ಸ್ಥಳದಲ್ಲಿಯೇ ವಾಸವಿರಬೇಕು ಎಂದು ಸೂಚನೆ ನೀಡಲಾಗಿದೆ. ಬ್ರಿಟನ್‌ನಿಂದ ಬಂದವರಿಗೆ ಎಲ್ಲರನ್ನೂ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಒಳಪಡಿಸಲಾಯಿತು. ಆರ್‌ಟಿ ಪಿಸಿಆರ್ ಪರೀಕ್ಷೆಯ ಮಾದರಿಗಳನ್ನು ಸಂಗ್ರಹಿಸಿ, ಅಲ್ಲಿನ ಪ್ರಯೋಗಾಲಯಕ್ಕೆ ಕಳಿಸಲಾಗಿದೆ. ಪ್ರತಿ ಪ್ರಯಾಣಿಕರಿಗೆ ವಿಮಾನ ನಿಲ್ದಾಣ ಪ್ರವೇಶಿಸುತ್ತಿದ್ದಂತೆಯೇ ಥರ್ಮಲ್ ಸ್ಕ್ಯಾನರ್ ಹಾಗೂ ಪಲ್ಸ್ ಆಕ್ಸಿಮೀಟರ್ ತಪಾಸಣೆ ನಡೆಸಿ ವಿಶ್ರಾಂತಿ ಕೊಠಡಿಯಲ್ಲಿ ವರದಿಗೆ ಕಾಯುವಂತೆ ಸೂಚಿಸಲಾಗಿತ್ತು. ಕೆಲವರು ಪರೀಕ್ಷೆಯ ಫಲಿತಾಂಶ ಬರುವ ಮುನ್ನವೇ ತೆರಳು ಮುಂದಾದರೂ ಸಿಬ್ಬಂದಿ ಅವಕಾಶ ನೀಡಲಿಲ್ಲ. ಸೋಂಕಿತರಾಗಿಲ್ಲ ಎನ್ನುವುದು ಪರೀಕ್ಷೆಯ ವರದಿ ಬಂದ ಬಳಿಕ ಖಾಸಗಿ ವಾಹನಗಳಲ್ಲಿ ತೆರಳಲು ಅವಕಾಶ ಮಾಡಿಕೊಂಡಲಾಗಿತ್ತು.



### ಪ್ರತಿ ಪ್ರಯಾಣಿಕರಿಗೆ ಹೊಸ ಸಿಮ್

ಪ್ರತಿ ಪ್ರಯಾಣಿಕರಿಗೆ ಇಲ್ಲಿನ ಸ್ಥಳೀಯ ದೂರವಾಣಿ ಸಂಖ್ಯೆ ಹೊಂದಿರದವರಿಗೆ ಗುರುತಿನ ಚೀಟಿಯ ಪ್ರತಿ ಪಡೆದು, ಸಿಮ್ ಕಾರ್ಡ್ ವಿತರಿಸಲಾಗಿದೆ. ಪ್ರತಿ ಪ್ರಯಾಣಿಕರಿಗೆ ಹೊಸ ಸಿಮ್ ನೀಡಿದ್ದು, ಈ ಮೊಬೈಲ್ ಎಲ್ಲಾ ಅವಧಿಯಲ್ಲಿ ಸಕ್ರೀಯವಾಗಿರಬೇಕು. ಈ ಅವಧಿಯಲ್ಲಿ ಆರೋಗ್ಯದಲ್ಲಿ ಯಾವುದೇ ರೀತಿಯ ವ್ಯತ್ಯಾಸ ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಕೋವಿಡ್ ಮಾರ್ಗಸೂಚಿಯನ್ನು ಉಲ್ಲಂಘಿಸಿದಲ್ಲಿ ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಪ್ರಯಾಣಿಕರಿಗೆ ಸೂಚಿಸಲಾಗಿದೆ.

ಹೊಸ ದಿಗಂತ

ಹೊಸ ದಿಗಂತ



11 Jan 2021

**ಇಡೀ ದೇಶವೇ ಎದುರು ನೋಡುತ್ತಿರುವ ಲಸಿಕೆ ವಿತರಣೆ ಅಭಿಯಾನಕ್ಕೆ ದಿನಾಂಕ ನಿಗದಿಯಾಗಿದ್ದು, ಜನವರಿ 16ರಿಂದ ಲಸಿಕೆ ವಿತರಣೆ ಆರಂಭವಾಗಲಿದೆ. ಹಾಗಾಗಿ ವಿತರಣೆಗೆ ಆಯಾ ರಾಜ್ಯಗಳು ಭರದಿಂದ ಸಿದ್ಧತೆ ನಡೆಸಿವೆ. ವಿಶ್ವದಲ್ಲೇ ಲಸಿಕೆಯ ಬೃಹತ್ ಅಭಿಯಾನ ಇದಾಗಿದ್ದು, ಹಲವು ರಾಜ್ಯಗಳು ಮಾಡಿಕೊಂಡಿರುವ ಸಿದ್ಧತೆ ಬಗ್ಗೆ ಮಾಹಿತಿ ಇಲ್ಲಿದೆ.**

# ಲಸಿಕಾಂದೋಲನ




**ರಾಜ್ಯ ಹೇಗೆ ಸಿದ್ಧ?**

**24**
ಸಿರಿಂಜ್ ಈಗಾಗಲೇ ಲಭ್ಯ

**2,767**
ಕೋಲ್ಡ್ ಚೈನ್ ಪಾಯಿಂಟ್

**45**
ಲಕ್ಷ ಲಸಿಕೆ ಸಂಗ್ರಹಿಸಲು ಒಂದು ವಾಕ್‌ಇನ್ ಫ್ರೀಜರ್

**5**
ಸಮೀಪದ ಜಿಲ್ಲೆಗೆ ಪೂರೈಸಲು ಪ್ರಾದೇಶಿಕ ಸಂಗ್ರಹಾಲಯ ಗುರುತು

## ಕರ್ನಾಟಕಕ್ಕೆ ನಾಳೆ ಬರಲಿದೆ ಲಸಿಕೆ

**ಬೆಂಗಳೂರು:** ಲಸಿಕೆ ವಿತರಣೆ ಕುರಿತು ರಾಜ್ಯದಲ್ಲೂ ಆರೋಗ್ಯ ಇಲಾಖೆ ಲಸಿಕೆ ಸಂಗ್ರಹಿಸಲು ಸಕಲ ಸಿದ್ಧತೆಗಳನ್ನು ಪೂರ್ಣಗೊಳಿಸಿದೆ. ಸದ್ಯ 24 ಲಕ್ಷ ಸಿರಿಂಜ್‌ಗಳು ಬಂದಿದ್ದು, ಮಂಗಳವಾರ ಲಸಿಕೆ ರಾಜ್ಯ ತಲುಪುವ ನಿರೀಕ್ಷೆ ಇದೆ. ರಾಜ್ಯದಲ್ಲಿ ಬೆಂಗಳೂರು ಮತ್ತು ಬೆಳಗಾವಿಯಲ್ಲಿ ಲಸಿಕೆ ಸಂಗ್ರಹವನ್ನು ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳಲಾಗಿದೆ. ನಾನಾ ಜಿಲ್ಲೆಗಳಿಗೆ ಲಸಿಕೆ ಪೂರೈಸಲು 5 ಪ್ರಾದೇಶಿಕ ಸಂಗ್ರಹಾಲಯ ಗುರುತಿಸಲಾಗಿದೆ. ಚಿತ್ರದುರ್ಗ, ಕಲಬುರಗಿ, ದಕ್ಷಿಣಕನ್ನಡ, ಮೈಸೂರು, ಬಾಗಲಕೋಟೆಯಲ್ಲಿ ಪ್ರಾದೇಶಿಕ ಸ್ಟೋರೇಜ್‌ಗಳಿದ್ದು, ಇಲ್ಲಿಂದ ಹತ್ತಿರದ ಜಿಲ್ಲೆಗಳಿಗೆ ಪೂರೈಸಲಾಗುತ್ತದೆ.

## ಯಾವ ರಾಜ್ಯದಲ್ಲಿ ಹೇಗಿದೆ ಸಿದ್ಧತೆ, ವಿತರಣೆ ಹೇಗೆ?

### ದಿಲ್ಲಿ

ಮೊದಲ ಹಂತದ ಲಸಿಕೆ ವಿತರಣೆಗಾಗಿ 89 ಆಸ್ಪತ್ರೆ ನಿಗದಿ ಪಡಿಸಿರುವುದಾಗಿ ದಿಲ್ಲಿ ಆರೋಗ್ಯ ಸಚಿವ ಸತ್ಯೇಂದರ್ ಜೈನ್ ಭಾನುವಾರ ತಿಳಿಸಿದ್ದಾರೆ. ಈ ಪೈಕಿ 26 ಸರ್ಕಾರಿ ಆಸ್ಪತ್ರೆಗಳಾಗಿದ್ದರೆ, 53 ಖಾಸಗಿ ಆಸ್ಪತ್ರೆಗಳಾಗಿವೆ. ಜನವರಿ 12 ಅಥವಾ 13ಕ್ಕೆ ರಾಜ್ಯಕ್ಕೆ ಲಸಿಕೆ ತಲುಪಲಿದೆ ಎಂದೂ ಸಚಿವ ಮಾಹಿತಿ ನೀಡಿದ್ದಾರೆ.

### ರಾಜಸ್ಥಾನ

ಮೊದಲ ಹಂತದಲ್ಲಿ ಒಟ್ಟು 4.5 ಲಕ್ಷ ಆರೋಗ್ಯ ಸಿಬ್ಬಂದಿಗೆ ಲಸಿಕೆ ನೀಡಲಾಗುತ್ತಿದೆ. ಫಲಾನುಭವಿಗಳ ಪಟ್ಟಿಯನ್ನು ಈಗಾಗಲೇ ಕೋ-ವಿನ್ ಆ್ಯಪ್‌ನಲ್ಲಿ ರಾಜ್ಯ ಸರ್ಕಾರ ಅಪ್‌ಲೋಡ್ ಮಾಡಿದೆ. ಜ.16ರಿಂದ ಒಟ್ಟು 282 ಲಸಿಕೆ ಕೇಂದ್ರಗಳಲ್ಲಿ ನೀಡ ಲಾಗುತ್ತಿದೆ. ಈ ಪೈಕಿ ಜೈಪುರ ಹಾಗೂ ಅಜ್ಮೇರ್ ನಿವಾಸಿಗಳಿಗೆ ಜಂಟಿಯಾಗಿ ಲಸಿಕೆ ವಿತರಣಾ ಕೇಂದ್ರ ಸ್ಥಾಪಿಸಲಾಗಿದೆ.

### ಗೋವಾ

18,000 ಆರೋಗ್ಯ ಸಿಬ್ಬಂದಿಗೆ ಲಸಿಕೆ ನೀಡಲಾಗುತ್ತಿದ್ದು, ಇದಕ್ಕಾಗಿ 8 ಆಸ್ಪತ್ರೆಗಳನ್ನು ನಿಗದಿಪಡಿಸಲಾಗಿದೆ. 8 ಆಸ್ಪತ್ರೆಗಳಲ್ಲೂ ದಿನಕ್ಕೆ 100 ಮಂದಿಗೆ ಲಸಿಕೆ ನೀಡಲು ತೀರ್ಮಾನಿಸಲಾಗಿದೆ. ಈ ಮೂಲಕ ದಿನಕ್ಕೆ ರಾಜ್ಯದಲ್ಲಿ ಒಟ್ಟು 800 ಮಂದಿಗೆ ಲಸಿಕೆ ನೀಡಲಾಗುವುದು. 5 ಸರ್ಕಾರಿ, 3 ಖಾಸಗಿ ಆಸ್ಪತ್ರೆಗಳನ್ನು ಸರ್ಕಾರಿ ನಿಗದಿಪಡಿಸಿದೆ.

### ಪಶ್ಚಿಮ ಬಂಗಾಳ

ಆರೋಗ್ಯ ಸಿಬ್ಬಂದಿ, ಪೊಲೀಸ್, ವಿಪತ್ತು ನಿರ್ವಹಣಾ ಸಿಬ್ಬಂದಿ, ಸ್ವಚ್ಛತಾ ಕಾರ್ಯಕರ್ತರಿಗೆ ಆದ್ಯತೆಯ ಮೇರೆಗೆ ಮೊದಲು ಲಸಿಕೆ ನೀಡಲಾಗುವುದು ಎಂದು ಮುಖ್ಯಮಂತ್ರಿ, ಮಮತಾ ಬ್ಯಾನರ್ಜಿ ಈಗಾಗಲೇ ಪತ್ರ ಬರೆದಿದ್ದಾರೆ. ಇವರ ಬಳಿಕ ರಾಜ್ಯದ ಸರ್ವರಿಗೂ ಉಚಿತವಾಗಿ ಲಸಿಕೆ ನೀಡಲು ಸರ್ಕಾರ ತೀರ್ಮಾನಿಸಿದೆ.

### ಬಿಹಾರ

4.62 ಲಕ್ಷ ಆರೋಗ್ಯ ಸಿಬ್ಬಂದಿಗೆ ಲಸಿಕೆ ನೀಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಲಸಿಕೆ ವಿತರಣೆ ಕೇಂದ್ರ ಗಳ ಹೊರಗೆ ಬಯೋವೇಸ್ಟ್ (ಜೈವಿಕ ತ್ಯಾಜ್ಯ) ನಿರ್ವಹಣೆಗಾಗಿ ಬ್ಯಾಗ್‌ಗಳನ್ನು ಸಹ ಇಡಲಾಗಿದೆ. ನಳಂದಾ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯಿಂದ ಎಲ್ಲ ಲಸಿಕೆ ಕೇಂದ್ರಗಳಿಗೂ ಲಸಿಕೆ ಸರಬರಾಜು ಆಗಲಿದೆ.

### ತೆಲಂಗಾಣ

ಒಟ್ಟು 139 ಕೇಂದ್ರಗಳಲ್ಲಿ ಲಸಿಕೆ ವಿತರಿಸ ಲಾಗುತ್ತಿದ್ದು, ಪ್ರತಿಯೊಂದು ಜಿಲ್ಲೆಯಲ್ಲಿ ಎರಡರಿಂದ ಮೂರು ಲಸಿಕೆ ಕೇಂದ್ರ ಸ್ಥಾಪಿಸಲಾಗಿದೆ. ಕೋ-ವಿನ್ ಆ್ಯಪ್‌ನಲ್ಲಿ ನೋಂದಣಿ ಮಾಡಿಕೊಂಡಿರುವ 2.9 ಲಕ್ಷ ಆರೋಗ್ಯ ಸಿಬ್ಬಂದಿಗೆ ಮೊದಲ ಹಂತದಲ್ಲಿ ಲಸಿಕೆ ನೀಡಲಾಗುವುದು. ಲಸಿಕೆ ಅಭಿಯಾನದ ಮೊದಲ ದಿನ 13,900 ಮಂದಿ ಲಸಿಕೆ ಪಡೆಯಲಿದ್ದಾರೆ.

ಜನದನಿಯ ಸಾರಥಿ
ವಾರ್ತಾ ಭಾರತಿ

ಜನದನಿಯ ಸಾರಥಿ
ವಾರ್ತಾ ಭಾರತಿ

# 'ಲಸಿಕೆ' ಸಂಗ್ರಹಕ್ಕೆ ಸಿದ್ಧತೆ ಪೂರ್ಣ

## ಡಾ.ಕೆ.ಸುಧಾಕರ್

ಬೆಂಗಳೂರು, ಜ. 10: ರಾಜ್ಯದಲ್ಲಿ ಕೊರೋನ ಲಸಿಕೆ ಸಂಗ್ರಹಕ್ಕೆ ಬೇಕಾದ ವ್ಯವಸ್ಥೆಗಳನ್ನು ಮಾಡಿಕೊಂಡಿದ್ದು, ವಿತರಣೆಗೂ ಸಿದ್ಧತೆ ಪೂರ್ಣಗೊಂಡಿದೆ. ಮೊದಲ ಹಂತದಲ್ಲಿ ರಾಜ್ಯಕ್ಕೆ 13.90 ಲಕ್ಷ ಡೋಸ್ ಲಸಿಕೆ ಸಿಗಲಿದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ರವಿವಾರ ಲಸಿಕೆ ಸಂಗ್ರಹ ವ್ಯವಸ್ಥೆಯನ್ನು ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಿ ಮೋದಿಯವರು ಜ.11ರಂದು ಸಂಜೆ ಎಲ್ಲ ರಾಜ್ಯಗಳ ಸಿಎಂಗಳ ಜತೆ ವೀಡಿಯೊ ಸಂವಾದ ನಡೆಸಲಿದ್ದಾರೆ. ಈಗಾಗಲೇ ಪ್ರಧಾನಿ ಜ.16ರಿಂದ ಲಸಿಕೆ ನೀಡುವ ಬಗ್ಗೆ ತಿಳಿಸಿದ್ದಾರೆ. ಆರೋಗ್ಯ ಕ್ಷೇತ್ರದ ಸಿಬ್ಬಂದಿಗೆ 3 ಕೋಟಿ ಲಸಿಕೆ ನೀಡಲಾಗುವುದು ಎಂದು ಪ್ರಧಾನಿ ಹೇಳಿದ್ದಾರೆ. ಇದಕ್ಕೆ ಪೂರ್ವಭಾವಿಯಾಗಿ ಸಂಗ್ರಹ ವ್ಯವಸ್ಥೆಯನ್ನು ಪರಿಶೀಲಿಸಲಾಗಿದೆ ಎಂದರು. ಒಟ್ಟು 2,767 ಕೋಲ್ಡ್ ಚೇನ್ ಪಾಯಿಂಟ್‌ಗಳು ಇವೆ. ಇವೆಲ್ಲ ಮೂಲ ಸೌಕರ್ಯದೊಂದಿಗೆ ಲಸಿಕೆ ವಿತರಣೆ ಮಾಡಲಾಗುವುದು ಎಂದು ಸುಧಾಕರ್ ವಿವರಿಸಿದರು. ರಾಜ್ಯದಲ್ಲಿ ಎಲ್ಲ ಬಗೆಯ ಸಿದ್ಧತೆ ಪೂರ್ಣಗೊಂಡಿದೆ. ಮೊದಲ ಹಂತದಲ್ಲಿ 13.90 ಲಕ್ಷ ಲಸಿಕೆ ಬರಲಿದೆ. 24 ಲಕ್ಷ ಸಿರಿಂಜ್‌ಗಳು ಕೇಂದ್ರದಿಂದ ಈಗಾಗಲೇ ಬಂದಿವೆ. ರಾಜ್ಯಕ್ಕೆ ಒಟ್ಟು 24ಲಕ್ಷ ಡೋಸ್ ಬರಲಿದೆ ಎಂದು ವಿವರಿಸಿದರು.

Bengaluru Edition
Jan 11, 2021 Page No.8

ಜನದನಿಯ ಸಾರಥಿ
ವಾರ್ತಾ ಭಾರತಿ

ಜನದನಿಯ ಸಾರಥಿ
ವಾರ್ತಾ ಭಾರತಿ

# ದೇಶದಲ್ಲಿ ಸಾವಿನ ಸಂಖ್ಯೆ ಶೇ.1.44ಕ್ಕೆ ಇಳಿಕೆ

## ಕಳೆದ 16 ದಿನಗಳಲ್ಲಿ ಪ್ರತಿ ದಿನ 300ಕ್ಕಿಂತ ಕಡಿಮೆ ಸಾವು

ಹೊಸದಿಲ್ಲಿ, ಜ.10: ಭಾರತದಲ್ಲಿ ಕೋವಿಡ್-19 ಸಾವಿನ ಪ್ರಮಾಣದಲ್ಲಿ ಸ್ಥಿರವಾದ ಇಳಿಕೆ ಕಂಡು ಬಂದಿದೆ ಹಾಗೂ ಆಸ್ಪತ್ರೆಗೆ ದಾಖಲಾದ ಪ್ರಕರಣಗಳಲ್ಲಿ ಕೇಂದ್ರ, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಪರಿಣಾಮಕಾರಿ ಕ್ಲಿನಿಕಲ್ ನಿರ್ವಹಣೆಯಲ್ಲಿನ ಕೇಂದ್ರೀಕೃತ ಪ್ರಯತ್ನಗಳಿಂದಾಗಿ ಅದು ಇನ್ನಷ್ಟು ಶೇ. 1.44ಕ್ಕೆ ಇಳಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ರವಿವಾರ ಹೇಳಿದೆ.

ಸರಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಪರಿಣಾಮಕಾರಿ ಕಂಟೈನ್ಮೆಂಟ್ ಕಾರ್ಯತಂತ್ರ, ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆ ಹಾಗೂ ಆರೈಕೆ ಶಿಷ್ಟಾಚಾರದ ಸಮಗ್ರ ಗುಣಮಟ್ಟ ಆಧರಿಸಿದ ಪ್ರಮಾಣೀಕೃತ ಕ್ಲಿನಿಕಲ್ ನಿರ್ವಹಣಾ ಶಿಷ್ಟಾಚಾರದಿಂದಾಗಿ ಹೊಸ ಸಾವಿನ ಸಂಖ್ಯೆಯಲ್ಲಿ ತೀವ್ರ ಇಳಿಕೆಯಾಗಿದೆ ಎಂದು ಅದು ಹೇಳಿದೆ.

ದೇಶದಲ್ಲಿ ಕಳೆದ 16 ದಿನಗಳಲ್ಲಿ ದಿನ ನಿತ್ಯ 300ಕ್ಕಿಂತ ಕಡಿಮೆ ಕೋವಿಡ್-19 ಸಾವು ದಾಖಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಕೋವಿಡ್ ನಿರ್ವಹಣೆ ಹಾಗೂ ಪ್ರತಿಕ್ರಿಯೆ ನೀತಿಯ ಒಂದು ಭಾಗವಾಗಿ ಕೇಂದ್ರ ಸರಕಾರ ಕೋವಿಡ್-19ರ ಕಂಟೈನ್ಮೆಂಟ್ ಬಗ್ಗೆ ಮಾತ್ರ ಗಮನ ಕೇಂದ್ರೀಕರಿಸಿಲ್ಲ. ಬದಲಾಗಿ ಗಂಭೀರ ಹಾಗೂ ಚಿಂತಾಜನಕ ಸ್ಥಿತಿಯಲ್ಲಿರುವ ಕೋವಿಡ್ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ

ಕೋವಿಡ್-19



ನೀಡುವಲ್ಲಿ ಕೂಡ ಗಮನ ಹರಿಸಿತು. ಇದರಿಂದ ಜೀವಗಳು ಉಳಿದವು ಹಾಗೂ ಸಾವಿನ ಸಂಖ್ಯೆ ಕಡಿಮೆಯಾಯಿತು ಎಂದು ಅದು ಹೇಳಿದೆ.

ಕೇಂದ್ರ, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸಹಭಾಗಿತ್ವದ ಪ್ರಯತ್ನದ ಪರಿಣಾಮ ದೇಶಾದ್ಯಂತ ಆರೋಗ್ಯ ಸೌಲಭ್ಯಗಳು ಸಶಕ್ತಗೊಂಡವು ಎಂದು ಸಚಿವಾಲಯ ತಿಳಿಸಿದೆ.

"ಪ್ರತಿ 10 ಲಕ್ಷ ಜನಸಂಖ್ಯೆಗೆ ಅತಿ ಕಡಿಮೆ ಸಾವು ಸಂಭವಿಸಿದ ದೇಶಗಳಲ್ಲಿ ಭಾರತ ಕೂಡ ಒಂದು. ರಶ್ಯ, ಜರ್ಮನಿ, ಬ್ರೆಝಿಲ್, ಫ್ರಾನ್ಸ್, ಅಮೆರಿಕ, ಬ್ರಿಟನ್ ಹಾಗೂ ಇಟಲಿಯಂತಹ ದೇಶಗಳಲ್ಲಿ ಪ್ರತಿ 10 ಲಕ್ಷ ಜನಸಂಖ್ಯೆಯಲ್ಲಿ ಅತಿ ಹೆಚ್ಚು ಸಾವು ಸಂಭವಿಸಿದೆ" ಎಂದು ಅದು ಹೇಳಿದೆ.

6ನೇ ಪುಟಕ್ಕೆ

# ಭಾರತದಲ್ಲಿ 7 ತಿಂಗಳಲ್ಲಿ 33,000 ಟನ್ ಕೊರೋನ ತ್ಯಾಜ್ಯ ಉತ್ಪನ್ನ: ವರದಿ

ಹೊಸದಿಲ್ಲಿ, ಜ.10: ಕಳೆದ 7 ತಿಂಗಳಲ್ಲಿ ಭಾರತದಲ್ಲಿ ಸುಮಾರು 33,000 ಟನ್ ನಷ್ಟು ಕೋವಿಡ್-19 ಬಯೋಮೆಡಿಕಲ್ ತ್ಯಾಜ್ಯ ಉತ್ಪನ್ನವಾಗಿದ್ದು ಇದರಲ್ಲಿ ಮಹಾರಾಷ್ಟ್ರದ ಕೊಡುಗೆ ಅತ್ಯಧಿಕ(3,587 ಟನ್)ವಾಗಿದೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ(ಸಿಪಿಸಿಬಿ)ಯ ಅಂಕಿಅಂಶ ತಿಳಿಸಿದೆ.

2020 ಜೂನ್‌ನಿಂದ ಎಲ್ಲಾ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ 32,994 ಟನ್ ಬಯೋಮೆಡಿಕಲ್ ತ್ಯಾಜ್ಯ ಉತ್ಪನ್ನವಾಗಿದ್ದು ಇದರಲ್ಲಿ ಅಕ್ಟೋಬರ್ ತಿಂಗಳಿನಲ್ಲೇ 5,500 ಟನ್ ತ್ಯಾಜ್ಯ ಉತ್ಪನ್ನವಾಗಿದೆ. ದೇಶದಾದ್ಯಂತದ 198 ಸಾಮಾನ್ಯ ಬಯೊಮೆಡಿಕಲ್ ತ್ಯಾಜ್ಯ ಸಂಸ್ಕರಣಾ ಕೇಂದ್ರಗಳ ಮೂಲಕ ಸಂಗ್ರಹಿಸಿ ವಿಲೇವಾರಿ ಮಾಡಲಾಗಿದೆ ಎಂದು ವರದಿ ತಿಳಿಸಿದೆ. ಪಿಪಿಇ ಕಿಟ್‌ಗಳು, ಮಾಸ್‌ಗಳು, ಶೂ ಕವರ್‌ಗಳು, ಕೈಗವಸು, ರಕ್ತಸಿಕ್ತ ಬಟ್ಟೆ ಬ್ಯಾಂಡೇಜ್, ಗಾಯಕ್ಕೆ ಹಾಕುವ ಪಟ್ಟಿಗಳು, ಹತ್ತಿಯ ತುಂಡುಗಳು, ರಕ್ತ ಅಥವಾ ದೇಹದ ದ್ರವ ಒಳಗೊಂಡಿರುವ ಹಾಸಿಗೆಯ ಕವರ್, ಬಟ್ಟೆ ಇತ್ಯಾದಿಗಳು ಬಯೋಮೆಡಿಕಲ್ ತ್ಯಾಜ್ಯಗಳಾಗಿವೆ. ಮಹಾರಾಷ್ಟ್ರದಲ್ಲಿ 3,587 ಟನ್, ಕೇರಳ- 3,300 ಟನ್, ಗುಜರಾತ್-3,086 ಟನ್, ತಮಿಳುನಾಡು-2,806 ಟನ್, ಉತ್ತರಪ್ರದೇಶ-2,502 ಟನ್, ದಿಲ್ಲಿ-2,471 ಟನ್, ಪ.ಬಂಗಾಳ-2,095 ಟನ್, ಕರ್ನಾಟಕ- 2,026 ಟನ್ ಅತೀ ಹೆಚ್ಚು ತ್ಯಾಜ್ಯ ಉತ್ಪನ್ನವಾದ 8 ರಾಜ್ಯಗಳಾಗಿವೆ.

ಡಿಸೆಂಬರ್‌ನಲ್ಲಿ ಸುಮಾರು 4,530 ಟನ್, ನವೆಂಬರ್‌ನಲ್ಲಿ 4,864 ಟನ್, ಅಕ್ಟೋಬರ್‌ನಲ್ಲಿ 5,597 ಟನ್, ಸೆಪ್ಟಂಬರ್‌ನಲ್ಲಿ 5,490 ಟನ್ ತ್ಯಾಜ್ಯ ಉತ್ಪನ್ನವಾಗಿದೆ.

6ನೇ ಪುಟಕ್ಕೆ

## ಶೇ.1.44ಕ್ಕೆ ಇಳಿಕೆ

ದೇಶದಲ್ಲಿ ಗುಣಮುಖವಾದ ಪ್ರಕರಣಗಳ ಒಟ್ಟು ಸಂಖ್ಯೆ 10,075,950ಕ್ಕೆ ಏರಿಕೆಯಾಗಿದೆ ಹಾಗೂ ರಾಷ್ಟ್ರೀಯ ಚೇತರಿಕೆ ಪ್ರಮಾಣ ಶೇ. 96.42ಕ್ಕೆ ಏರಿಕೆಯಾಗಿದೆ. ಭಾರತದಲ್ಲಿ ಪ್ರಸ್ತುತ ಸಕ್ರಿಯ ಪ್ರಕರಣಗಳ ಸಂಖ್ಯೆ 2,23,335 ಇದೆ. ಇದು ಒಟ್ಟು ಪ್ರಕರಣಗಳ ಶೇ. 2.14. ಕಳೆದ 24 ಗಂಟೆಗಳಲ್ಲಿ 19,299 ರೋಗಿಗಳು ಚೇತರಿಕೆಯಾಗಿದ್ದಾರೆ.

## ಕೊರೋನ ತ್ಯಾಜ್ಯ ಉತ್ಪನ್ನ

ಹೀಗೆ ಉತ್ಪನ್ನವಾಗುವ ಬಯೋಮೆಡಿಕಲ್ ತ್ಯಾಜ್ಯಗಳನ್ನು ಆರೋಗ್ಯ ಕೇಂದ್ರ, ಕ್ವಾರಂಟೈನ್ ಕೇಂದ್ರ, ಮನೆ, ಸ್ಯಾಂಪಲ್ ಸಂಗ್ರಹ ಕೇಂದ್ರ, ಪ್ರಯೋಗಾಲಯಗಳು, ಮಾಲಿನ್ಯ ನಿಯಂತ್ರಣ ಮಂಡಳಿಗಳು, ನಗರಾಡಳಿತ ಸಂಸ್ಥೆಗಳು ಮತ್ತು ಸಾಮಾನ್ಯ ಬಯೋಮೆಡಿಕಲ್ ತ್ಯಾಜ್ಯ ಸಂಸ್ಕರಣಾ ಕೇಂದ್ರಗಳಲ್ಲಿ ವಿಲೇವಾರಿ ಮಾಡುವ ಬಗ್ಗೆ ಕಳೆದ ಮಾರ್ಚ್‌ನಲ್ಲಿ ಸಿಪಿಸಿಬಿ ಮಾರ್ಗಸೂಚಿಯನ್ನು ಬಿಡುಗಡೆಗೊಳಿಸಿದೆ. ಅಲ್ಲದೆ ಕೊರೋನ ಸೋಂಕಿಗೆ ಸಂಬಂಧಿಸಿ ಬಯೋಮೆಡಿಕಲ್ ತ್ಯಾಜ್ಯದ ಸಂಗ್ರಹ ಮತ್ತು ವಿಲೇವಾರಿ ಪ್ರಕ್ರಿಯೆಯ ಮೇಲೆ ನಿಗಾ ಇರಿಸಲು ಕಳೆದ ಮೇ ತಿಂಗಳಿನಲ್ಲಿ 'ಕೋವಿಡ್-19 ಬಿಡಬ್ಲ್ಯೂಎಂ' ಮೊಬೈಲ್ ಆ್ಯಪ್ ಅನ್ನು ರೂಪಿಸಿದೆ.

ಜನದನಿಯ ಸಾರಥಿ
ವಾರ್ತಾ ಭಾರತಿ

ಜನದನಿಯ ಸಾರಥಿ
ವಾರ್ತಾ ಭಾರತಿ

# ರಾಜ್ಯದಲ್ಲಿ 792 ಕೊರೋನ ಪ್ರಕರಣ ದೃಢ, ಎರಡು ಸಾವು

ಬೆಂಗಳೂರು, ಜ.10: ರಾಜ್ಯದಲ್ಲಿ ರವಿವಾರ 792 ಹೊಸ ಕೊರೋನ ಪ್ರಕರಣಗಳು ದೃಢವಾಗಿವೆ. 2 ಜನರು ಸೋಂಕಿಗೆ ಬಲಿಯಾಗಿದ್ದು, 593 ಜನರು ಗುಣಮುಖರಾಗಿದ್ದಾರೆ.

ರಾಜ್ಯದಲ್ಲಿ ಈಗಾಗಲೇ ಒಟ್ಟು ಸೋಂಕಿತರ ಸಂಖ್ಯೆ 9,27,559ಕ್ಕೆ ತಲುಪಿದ್ದು, 202 ಜನ ಸೋಂಕಿತರು ಐಸಿಯುನಲ್ಲಿದ್ದಾರೆ.

ಇಲ್ಲಿಯವರೆಗೆ ಒಟ್ಟು ಸಾವಿನ ಸಂಖ್ಯೆ 12,140ಕ್ಕೆ ತಲುಪಿದ್ದು, ಒಟ್ಟು ಸಕ್ರಿಯ ಕೊರೋನ ಪ್ರಕರಣ ಸಂಖ್ಯೆ 9,649ಕ್ಕೆ ಏರಿಕೆಯಾಗಿದ್ದು, ಇವರೆಲ್ಲ ಸೋಂಕಿತರು ಆಸ್ಪತ್ರೆ, ಕೊರೋನ ಕೇರ್ ಸೆಂಟರ್ ಹಾಗೂ ಮನೆಗಳಲ್ಲಿ ಚಿಕಿತ್ಸೆ ಮತ್ತು ಆರೈಕೆಯಲ್ಲಿದ್ದಾರೆ.

2 ಸೋಂಕಿತರು ಬಲಿ: ಮೈಸೂರು 1, ತುಮಕೂರು ಜಿಲ್ಲೆಯಲ್ಲಿ ಒಬ್ಬರು ಸಾವನ್ನಪ್ಪಿದ್ದಾರೆ.

ಎಲ್ಲೆಲ್ಲಿ ಎಷ್ಟು: ರಾಜ್ಯದಲ್ಲಿ ಹೊಸದಾಗಿ 792 ಪ್ರಕರಣಗಳು ದೃಢವಾಗಿದ್ದು, ಅದರಲ್ಲಿ ಬಳ್ಳಾರಿ




18, ಬೆಳಗಾವಿ 12, ಬೆಂಗಳೂರು ಗ್ರಾಮಾಂತರ 22, ಬೆಂಗಳೂರು ನಗರ 453, ಬೀದರ್ 10, ಚಾಮರಾಜನಗರ 7, ಚಿಕ್ಕಬಳ್ಳಾಪುರ 27, ಚಿಕ್ಕಮಗಳೂರು 13, ಚಿತ್ರದುರ್ಗ 5, ದಕ್ಷಿಣ ಕನ್ನಡ 39, ದಾವಣಗೆರೆ 19, ಧಾರವಾಡ 9, ಹಾಸನ 23, ಕಲಬುರಗಿ 18, ಕೊಡಗು 15, ಕೋಲಾರ 13, ಕೊಪ್ಪಳ 3, ಮಂಡ್ಯ 3, ಮೈಸೂರು 20, ರಾಯಚೂರು 7, ರಾಮನಗರ 1, ಶಿವಮೊಗ್ಗ 5, ತುಮಕೂರು 16, ಉಡುಪಿ 6, ಉತ್ತರ ಕನ್ನಡ 13, ವಿಜಯಪುರ 6, ಯಾದಗಿರಿ ಜಿಲ್ಲೆಯಲ್ಲಿ 7 ಪ್ರಕರಣ ಪತ್ತೆಯಾಗಿವೆ.

## ರಾಜಧಾನಿಯಲ್ಲಿ 453 ಕೊರೋನ ಪ್ರಕರಣ ದೃಢ

ಬೆಂಗಳೂರು, ಜ.10: ರಾಜಧಾನಿಯಲ್ಲಿ ರವಿವಾರದಂದು 453 ಜನರಿಗೆ ಕೊರೋನ ಸೋಂಕು ದೃಢಪಟ್ಟಿದೆ. 261 ಸೋಂಕಿತರು ಬಿಡುಗಡೆಯಾಗಿದ್ದಾರೆ.

ನಗರದಲ್ಲಿ ಇಲ್ಲಿಯವರೆಗೆ ಒಟ್ಟು 3,92,581 ಕೊರೋನ ಸೋಂಕಿತರು ದೃಢಪಟ್ಟಿದ್ದು, 4,346 ಜನರು ಸೋಂಕಿಗೆ ಬಲಿಯಾಗಿದ್ದಾರೆ. 3,82,166 ಜನರು ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ.

ಕೋವಿಡ್ ನಿಗದಿತ ಆಸ್ಪತ್ರೆಗಳು ಹಾಗೂ ಆರೋಗ್ಯ ಕೇಂದ್ರಗಳು ಹಾಗೂ ಆರೈಕೆ ಕೇಂದ್ರಗಳಲ್ಲಿ ಸಕ್ರಿಯ ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ.

Bengaluru Edition
Jan 11, 2021 Page No.2

ಸಂಜೆ ವಾಣಿ
1982

# ಕೊರೊನಾ ಲಸಿಕೆ ದಾಸ್ತಾನು ಸುಧಾಕರ್ ಪರಿಶೀಲನೆ



ಜನವರಿ 16 ರಿಂದ ಲಸಿಕೆ ಅಭಿಯಾನ ಆರಂಭ ಹಿನ್ನೆಲೆಯಲ್ಲಿ ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಸಚಿವ ಡಾ. ಸುಧಾಕರ್, ಆರೋಗ್ಯ ಇಲಾಖೆಯಲ್ಲಿ ಕೋವಿಡ್ ಲಸಿಕೆ ದಾಸ್ತಾನನ್ನು ಪರಿಶೀಲಿಸಿದರು.

(ನಮ್ಮ ಪ್ರತಿನಿಧಿಯಿಂದ)

ಬೆಂಗಳೂರು, ಜ. 10– ರಾಜ್ಯದಲ್ಲಿ ಕೊರೊನಾ ಲಸಿಕೆ ದಾಸ್ತಾನು, ಸಂಗ್ರಹ, ಸರಬರಾಜು, ಹಂಚಿಕೆಗೆ ವ್ಯವಸ್ಥಿತ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ. ಸುಧಾಕರ್ ಹೇಳಿದರು.

ನಗರದ ಆನಂದರಾವ್ ವೃತ್ತದಲ್ಲಿರುವ ಆರೋಗ್ಯ ಇಲಾಖೆಯಲ್ಲಿ ಕೊರೊನಾ ಲಸಿಕೆ ಸಂಗ್ರಹಣೆಗೆ ರೂಪಿಸಿರುವ ಶೈತ್ಯಾಗಾರ ಕೊಠಡಿಗೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆಗಳನ್ನು ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಕ್ಕೆ 13 ಲಕ್ಷದ 90 ಸಾವಿರ ಕೊರೊನಾ ಲಸಿಕೆ ಬರಲಿದ್ದು, ಲಸಿಕೆ ಸಂಗ್ರಹಕ್ಕೆ ಎಲ್ಲ ವ್ಯವಸ್ಥೆಗಳನ್ನು ಮಾಡಿಕೊಂಡಿದ್ದೇವೆ ಎಂದರು.

ಬೆಂಗಳೂರು ಮತ್ತು ಬೆಳಗಾವಿಯಲ್ಲಿ ರಾಜ್ಯಮಟ್ಟದ ಲಸಿಕಾ ದಾಸ್ತಾನು ಸಂಗ್ರಹ ಕೇಂದ್ರಗಳಿದ್ದು, ಈ ಕೇಂದ್ರಗಳಲ್ಲಿ 40 ರಿಂದ 45 ಲಕ್ಷ ಡೋಸ್ ಲಸಿಕೆಯನ್ನು ಸಂಗ್ರಹಿಸಿಡಬಹುದಾಗಿದೆ ಎಂದರು.

(ಎರಡನೇ ಪುಟ ನೋಡಿ)

# ಕೊರೊನಾ ಲಸಿಕೆ ದಾಸ್ತಾನು ಸುಧಾಕರ್ ಪರಿಶೀಲನೆ

ರಾಜ್ಯಮಟ್ಟದ 2 ಲಸಿಕಾ ಕೇಂದ್ರಗಳ ಜತೆ ಕಲ್ಬುರ್ಗಿ, ಚಿತ್ರದುರ್ಗ, ದಕ್ಷಿಣ ಕನ್ನಡ, ಮೈಸೂರು ಮತ್ತು ಬಾಗಲಕೋಟೆಗಳಲ್ಲೂ ವಿಭಾಗೀಯ ಲಸಿಕಾ ದಾಸ್ತಾನು ಕೇಂದ್ರಗಳು ಇವೆ. ಹಾಗೆಯೇ ರಾಜ್ಯದ 30 ಜಿಲ್ಲೆಗಳಲ್ಲೂ ಲಸಿಕಾ ಸಂಗ್ರಹಣ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದರು.

ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಂದು ಕೇಂದ್ರ ದಾಸ್ತಾನು ಇದ್ದು, ಉಳಿದಂತೆ 50 ಬ್ಲಾಕ್‌ಗಳಲ್ಲೂ ಬಿಬಿಎಂಪಿ ದಾಸ್ತಾನು ಸಂಗ್ರಹಣೆಗೆ ಕೇಂದ್ರಗಳನ್ನು ಸ್ಥಾಪಿಸಿದೆ ಎಂದರು.

ಕೊರೊನಾ ಲಸಿಕೆಗಳು ಮೊದಲು ರಾಜ್ಯದ ಪ್ರಮುಖ ದಾಸ್ತಾನು ಕೇಂದ್ರಗಳಾದ ಬೆಂಗಳೂರು ಮತ್ತು ಬೆಳಗಾವಿಗೆ ಬರಲಿದ್ದು, ಅಲ್ಲಿಂದ ವಿಭಾಗವಾರು ದಾಸ್ತಾನು ಕೇಂದ್ರಗಳಿಗೆ, ವಿಭಾಗವಾರು ದಾಸ್ತಾನು ಕೇಂದ್ರಗಳಿಂದ ಜಿಲ್ಲಾ ದಾಸ್ತಾನು ಕೇಂದ್ರಗಳಿಗೆ, ಅಲ್ಲಿಂದ ಲಸಿಕಾ ನೀಡಿಕೆ ಕೇಂದ್ರಗಳಿಗೆ ಸರಬರಾಜು ಆಗಲಿದೆ ಎಂದರು.

ಆರೋಗ್ಯ ಇಲಾಖೆ ಲಸಿಕೆಗಳ ಸಾಗಾಣಿಕೆಗೆ 900 ವ್ಯಾಕ್ಸಿನ್ ಕ್ಯಾರಿಯರ್‌ಗಳನ್ನು ಹೊಂದಿದೆ ಎಂದು ಅವರು ಹೇಳಿದರು.

ರಾಜ್ಯದಲ್ಲಿ ಈಗಾಗಲೇ ಇರುವ ಲಸಿಕಾ ಸಂಗ್ರಹಣಾ ಜಾಲವನ್ನು ಬಳಸಿಕೊಂಡು ಕೊರೊನಾ ಲಸಿಕೆಯನ್ನು ತಲುಪಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಕೊರೊನಾ ಲಸಿಕೆ ಸಂಗ್ರಹಣೆಗೆ ಒಂದು ವಾಕ್–ಇನ್ ಫ್ರೀಜರ್ ಇದ್ದು, ಇದರಲ್ಲಿ 40 ಲಕ್ಷ ಡೋಸ್ ಲಸಿಕೆಯನ್ನು ಸಂಗ್ರಹಿಸಬಹುದು. ಮತ್ತೊಂದು ವಾಕ್–ಇನ್ ಫ್ರೀಜರ್‌ನ್ನು ಕೇಂದ್ರ ಸರ್ಕಾರ ನೀಡುವುದಾಗಿ ಹೇಳಿದೆ ಎಂದು ಅವರು ತಿಳಿಸಿದರು.

ಇದರ ಜತೆಗೆ ಆರೋಗ್ಯ ಇಲಾಖೆ ಎರಡು ವಾಕ್–ಇನ್ ಕೂಲರ್‌ಗಳನ್ನು ಹೊಂದಿದೆ ಎಂದು ಅವರು ಹೇಳಿದರು.

ಲಸಿಕಾ ಸಂಗ್ರಹಣೆ, ಸರಬರಾಜು ಎಲ್ಲದಕ್ಕೂ ವ್ಯವಸ್ಥೆ ಮಾಡಿಕೊಂಡಿದ್ದೇವೆ. ನಾಳೆ ಪ್ರಧಾನಿ ನರೇಂದ್ರ ಮೋದಿಯವರು ವಿಡಿಯೋ ಸಂವಾದದಲ್ಲಿ ನೀಡುವ ಮಾರ್ಗದರ್ಶನ, ಮಾರ್ಗಸೂಚಿಗಳಂತೆ ಲಸಿಕೆ ನೀಡಿಕೆ ಕಾರ್ಯ ನಡೆಯಲಿದೆ ಎಂದು ಅವರು ಹೇಳಿದರು.

ಎರಡು ತಿಂಗಳು

ಕೊರೊನಾ ಲಸಿಕೆ ಎಲ್ಲರಿಗೂ ನೀಡಲು 2–3 ತಿಂಗಳು ಬೇಕಾಗುತ್ತದೆ. ಇದು ಜನಾಂದೋಲನವಾಗಿ ನಡೆಯಬೇಕಾಗಿದೆ. ಎಲ್ಲರಿಗೂ ಲಸಿಕೆ ನೀಡಬೇಕೇ, ಬೇಡವೇ ಎಂಬ ಬಗ್ಗೆ ತಜ್ಞರು ತೀರ್ಮಾನಿಸುತ್ತಾರೆ. ಆರಂಭಿಕವಾಗಿ ಆರೋಗ್ಯ ಕಾರ್ಯಕರ್ತರು, ಕೊರೊನಾ ವಾರಿಯರ್ಸ್‌ಗೆ ಲಸಿಕೆ ನೀಡುತ್ತೇವೆ. ನಂತರ 50 ವರ್ಷ ಮೇಲ್ಪಟ್ಟ ಕೆಲವು ರೋಗ ಬಾಧಿತರಿಗೆ ಲಸಿಕೆ ನೀಡಲಾಗುತ್ತದೆ. ನಾಳೆ ಪ್ರಧಾನಿಯವರು ಎಲ್ಲದರ ಬಗ್ಗೆಯೂ ಸ್ಪಷ್ಟ ಮಾರ್ಗಸೂಚಿ ನೀಡುವರು ಎಂದರು.

## ಬ್ರಿಟನ್‌ನಿಂದ ಬಂದವರ ಪೈಕಿ ನಾಲ್ವರಿಗೆ ಸೋಂಕು

ಬೆಂಗಳೂರು, ಜ.10– ರೂಪಾಂತರ ಕೊರೋನಾ ಸೋಂಕಿನ ಭೀತಿ ನಡುವೆ ಬ್ರಿಟನ್ ನಿಂದ ಬೆಂಗಳೂರಿಗೆ ಆಗಮಿಸಿದ ಪ್ರಯಾಣಿಕರ ಪೈಕಿ ನಾಲ್ವರಲ್ಲಿ ಕೋವಿಡ್ ಗುಣಲಕ್ಷಣಗಳು ಕಾಣಿಸಿಕೊಂಡಿದೆ ಎಂದು ತಿಳಿದುಬಂದಿದೆ.

ಇಂದು ಮುಂಜಾನೆ ಬ್ರಿಟನ್ ನಿಂದ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಒಂದು ವಿಮಾನ ಬಂದಿಳಿದಿದ್ದು, ಎಲ್ಲರನ್ನೂ ಕೊರೋನಾ ಪರೀಕ್ಷೆಗೆ ಒಳಪಡಿಸಲಾಗಿದ್ದು, ನಾಲ್ವರ ವರದಿ ಅನುಮಾನಸ್ಪದವಾಗಿದೆ ಎಂದು ಹೇಳಲಾಗುತ್ತಿದೆ.

ಬ್ರಿಟನ್ ನಿಂದ ಮೊದಲ ವಿಮಾನದಲ್ಲಿ 289 ಪ್ರಯಾಣಿಕರು ಆಗಮಿಸಿದ್ದು, ಅದರಲ್ಲಿ ನಾಲ್ವರ ಕೋವಿಡ್?–19 ತಪಾಸಣಾ ವರದಿಯು ಅನುಮಾನಾಸ್ಪದವಾಗಿ ಕಂಡು ಬಂದಿರುವುದರಿಂದ ಅವರೆಲ್ಲರನ್ನೂ ಐಸೋಲೇಷನ್ ಮಾಡಲಾಗಿದೆ ಎಂದು ಆರೋಗ್ಯಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಂಜೆವಾಣಿ
1982

# ನನ್ನ ನಗರ, ನನ್ನ ಬಜೆಟ್ ಸಮಸ್ಯೆಗಳ ಸರಮಾಲೆ

ಬೆಂಗಳೂರು,ಜ.10–ನಗರವ್ಯಾಪ್ತಿಯಲ್ಲಿ ತ್ವರಿತವಾಗಿ ಸಾರ್ವಜನಿಕ ಶೌಚಾಲಯ, ಪಾದಚಾರಿ ಮಾರ್ಗ ಸರಿಪಡಿಸುವಂತೆ ಕೋರಿ ಸಾವಿರಾರು ನಾಗರೀಕರು, ಬಿಬಿಎಂಪಿಯ 2021–22ನೇ ಸಾಲಿನ ಬಜೆಟ್‌ಗೆ ಸಲಹೆ ನೀಡಿದ್ದಾರೆ.

ಬಜೆಟ್ ಸಂಬಂಧ ಜನರಿಂದ ಸಲಹೆ ಪಡೆಯಲು ಜನಾಗ್ರಹ ಸಂಸ್ಥೆಯು ಪಾಲಿಕೆ ಸಹಭಾಗಿತ್ವದಲ್ಲಿ ಹಮ್ಮಿಕೊಂಡಿದ್ದ 'ನನ್ನ ನಗರ ನನ್ನ ಬಜೆಟ್' ಅಭಿಯಾನದ ಮೂಲಕ ಇದುವರೆಗೆ 5 ಸಾವಿರಕ್ಕೂ ಅಧಿಕ ಮಂದಿ ಸಲಹೆಗಳನ್ನು ನೀಡಿದ್ದಾರೆ.

ಜನರು ಸಾರ್ವಜನಿಕ ಪ್ರದೇಶದಲ್ಲಿ ಮೂತ್ರ ವಿಸರ್ಜನೆ ಮಾಡುವ ತಾಣಗಳ (ಹಳದಿ ತಾಣಗಳು) ನಿರ್ಮೂಲನೆ, ಹೊಸ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮತ್ತು ಪಾದಚಾರಿ ಮಾರ್ಗದ ಅವಶ್ಯಕತೆಗಳ ಕುರಿತು ಸಲಹೆ ಮಾಡಿದ್ದಾರೆ.

ಬಿಬಿಎಂಪಿಯ ಪೋರ್ಟಲ್‌ನಲ್ಲಿ, ವಾಟ್ಸ್ ಆಪ್ ಮೂಲಕ ಹಾಗೂ ಬಜೆಟ್ ವಾಹನದ ಮೂಲಕ ಹಾಗೂ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ (ಆರ್‌ಡಬ್ಲ್ಯುಎ) ಮೂಲಕ ಸಲಹೆಗಳನ್ನು ಸಲ್ಲಿಸಿದ್ದಾರೆ.

ಈ ಅಭಿಯಾನ ನಗರದ ಮಕ್ಕಳು, ಪೌರಕಾರ್ಮಿಕರು ಮತ್ತು ನಗರ ಬಡಜನರೇ ಹೆಚ್ಚು ಇರುವ ಪ್ರದೇಶಗಳನ್ನೂ ತಲುಪಿದೆ ಎಂದು ಜನಾಗ್ರಹ ಸಂಸ್ಥೆ ತಿಳಿಸಿದೆ.

ಸಂಜೆವಾಣಿ
1982

# ಬ್ರಿಟನ್‌ನಿಂದ ಬಂದ 160ಮಂದಿಗೆ ಹುಡುಕಾಟ



ಬೆಂಗಳೂರು, ಜ.10– ರೂಪಾಂತರ ಕೊರೋನಾ ಸೋಂಕು ಭೀತಿ ನಡುವೆ ಯುಕೆಯಿಂದ ಬೆಂಗಳೂರಿಗೆ ಬಂದವರ ಪೈಕಿ ಈಗಲೂ 160 ಮಂದಿ ನಾಪತ್ತೆಯಾಗಿದ್ದು, ಇವರ ಹುಡುಕಾಟಕ್ಕಾಗಿ ಬಿಬಿಎಂಪಿ ಸಿಬ್ಬಂದಿ ಹರಸಾಹಸ ಪಡುತ್ತಿದೆ.

ಈವೆರಗೂ ರಾಜಧಾನಿ ಬೆಂಗಳೂರಿಗೆ ಒಟ್ಟು 4,844 ಪ್ರಯಾಣಿಕರು ಬ್ರಿಟನ್‌ನಿಂದ ಬಂದಿದ್ದು, ಅವರಲ್ಲಿ 2,062 ಮಂದಿ ಬೆಂಗಳೂರಿಗೆ ಸೇರಿದವರಾಗಿದ್ದಾರೆ. ಅದರಲ್ಲಿ 1897 ಮಂದಿಯನ್ನು ಪರೀಕ್ಷೆಗೆ ಒಳಪಡಿಸಲಾಗಿದ್ದು ಆರು ಮಂದಿಯನ್ನು ಸೋಂಕು ಪರೀಕ್ಷೆಗೆ ಒಳಪಡಿಸಬೇಕಿದೆ.

ಮತ್ತೊಂದೆಡೆ 28 ಹಾಗೂ ಅವರ ಸಂಪರ್ಕದಲ್ಲಿದ್ದ 16 ಮಂದಿ ಸೇರಿ ಒಟ್ಟು 44 ಮಂದಿಗೆ ಕೊರೋನಾ ಸೋಂಕು ದೃಢಪಟ್ಟಿದ್ದು, ಒಟ್ಟು ಬ್ರಿಟನ್‌ನಿಂದ ಬಂದು ಸೋಂಕು ದೃಢಪಟ್ಟವರ ಪ್ರಾಥಮಿಕ ಸಂಪರ್ಕದಲ್ಲಿ 90 ಮಂದಿ ಹಾಗೂ 110 ಮಂದಿ ದ್ವಿತೀಯ ಸಂಪರ್ಕಿತರಿದ್ದಾರೆ.

ಇನ್ನು, ನಾಪತ್ತೆಯಾಗಿರುವ 160 ಮಂದಿಯನ್ನು ಹುಡುಕಿಕೊಡುವಂತೆ ಪಾಲಿಕೆಯು ಪೊಲೀಸ್ ಇಲಾಖೆ ಮೊರೆ ಹೋಗಿದೆ ಎಂದು ಪಾಲಿಕೆ ಆರೋಗ್ಯಾಧಿಕಾರಿ ತಿಳಿಸಿದ್ದಾರೆ.

ಸಂಜೆ ವಾಣಿ
1982

# ಇಂಗ್ಲೆಂಡ್ ನಿಂದ ಬೆಂಗಳೂರಿಗೆ 240 ಮಂದಿ ಆಗಮನ

**ಬೆಂಗಳೂರು,ಜ.10**- ಇಂಗ್ಲೆಂಡ್ ನಲ್ಲಿ ಕೊರೊನಾ ರೂಪಾಂತರ ಸೋಂಕು ಕಾಣಿಸಿಕೊಂಡ ಬಳಿಕ ರದ್ದುಮಾಡಲಾಗಿದ್ದ ವಿಮಾನಯಾನ ಸಂಚಾರ ಬೆಂಗಳೂರು ಮತ್ತು ಇಂಗ್ಲೆಂಡ್ ನಡುವೆ ಇಂದಿನಿಂದ ಆರಂಭವಾಗಿದೆ.

ಭಾರತ – ಇಂಗ್ಲೆಂಡ್ ವಿಮಾನಯಾನ ಪುನರಾರಂಭಕ್ಕೆ ಅವಕಾಶ ಮಾಡಿಕೊಟ್ಟ ಹಿನ್ನಲೆಯಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮುಂಜಾನೆ 4–30ಕ್ಕೆ ಮೊದಲ ವಿಮಾನದಲ್ಲಿ 240 ಪ್ರಯಾಣಿಕರು ಆಗಮಿಸಿದ್ದಾರೆ.

ವಿಮಾನನಿಲ್ದಾಣದಲ್ಲಿಪ್ರಯಾಣಿಕರಿಗೆ ಆರ್‌ಟಿ–ಪಿಸಿಆರ್ ಪರೀಕ್ಷೆಗೆ ರಾಜ್ಯಸರ್ಕಾರ ಎಲ್ಲ ವ್ಯವಸ್ಥೆ ಮಾಡಿದೆ.



ಪರೀಕ್ಷಾ ವರದಿ ಕೈ ಸೇರಲು ಸುಮಾರು 5 ಗಂಟೆ ತೆಗೆದುಕೊಳ್ಳಲಿದೆ ಪರೀಕ್ಷೆಗಾಗಿ ಪ್ರಯಾಣಿಕರು ತಮ್ಮ ಸರದಿಯಲ್ಲಿ ಕಾಯುತ್ತಿದ್ದಾರೆ.

ಸುಮಾರು 30 ಕ್ಕೂ ಅಧಿಕ ಸಿಬ್ಬಂದಿ ಟರ್ಮಿನಲ್ ಒಳಭಾಗದಲ್ಲಿ ನಿಯೋಜನೆಗೊಂಡಿದ್ದು, ಪ್ರಯಾಣಿಕರ ಪರೀಕ್ಷಾ ಕಾರ್ಯದಲ್ಲಿ ನಿರತರಾಗಿದ್ದಾರೆ .

ಪರೀಕ್ಷೆ ವರದಿಯಲ್ಲಿ ಪಾಸಿಟಿವ್ ಬಂದವರನ್ನು ನೇರವಾಗಿ ಆಸ್ಪತ್ರೆಗೆ ದಾಖಲು ಮಾಡಲು ಎಲ್ಲ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.

ಪರೀಕ್ಷಾ ವರದಿಯಲ್ಲಿ ನೆಗೆಟಿವ್ ಬಂದವರನ್ನು ಒಂದಷ್ಟು ದಿನಗಳ ಕಾಲ ಮನೆಯಲ್ಲಿ ಕ್ವಾರಂಟೈನ್ ನಲ್ಲಿಡಲು ಸರ್ಕಾರ ಮುಂದಾಗಿದೆ.

ರೂಪಾಂತರ ಸೋಂಕು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಭಾರತ–ಇಂಗ್ಲೆಂಡ್ ನಡುವೆ ವಿಮಾನಯಾನ ಸಂಚಾರ ರದ್ದುಪಡಿಸಲಾಗಿತ್ತು.

ತದನಂತರ ಕೇಂದ್ರ ಸರ್ಕಾರ ಜನವರಿ 8ರಿಂದ ಜನವರಿ 23ರ ತನಕ ವಿಮಾನ ಸಂಚಾರಕ್ಕೆ ಅನುವು ಮಾಡಿಕೊಟ್ಟಿದೆ.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

# ಅವಕಾಶ ಸಿಕ್ಕರೆ ನಾನೇ ಮೊದಲ ಲಸಿಕೆ ಪಡೆಯುವೆ

**ಬೆಂಗಳೂರು,ಜ.10-** ರಾಜ್ಯದಲ್ಲಿ ಕೊರೊನಾ ಲಸಿಕೆಯನ್ನು ನಾನೇ ಮೊದಲು ಪಡೆಯಲು ಸಿದ್ಧ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ನಗರದ ಆನಂದರಾವ್ ವೃತ್ತದ ಬಳಿ ಇರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಟ್ಟಡದಲ್ಲಿ ಕೊರೊನಾ ಲಸಿಕೆ ದಾಸ್ತಾನಿಗೆ ನಡೆದಿರುವ ಸಿದ್ಧತೆಗಳನ್ನು ಪರಿಶೀಲಿಸಿದ ನಂತರ ಸಚಿವರು ಸುದ್ದಿಗಾರರೊಂದಿಗೆ ಮಾತನಾಡಿದರು. ...ಪುಟ 2

## ಪಡೆಯುವೆ

ಕೇಂದ್ರ ಸರ್ಕಾರದ ಮಾರ್ಗಸೂಚಿಯಲ್ಲಿ ಅವಕಾಶವಿದ್ದರೆ ರಾಜ್ಯದಲ್ಲಿ ಕೊರೊನಾ ಲಸಿಕೆಯನ್ನು ಮೊದಲು ನಾನೇ ಪಡೆಯುತ್ತೇನೆ ಎಂದರು.

ನಾಳೆ ಲಸಿಕೆ ನೀಡಿಕೆಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರ ಮಾರ್ಗಸೂಚಿ ಹೊರಡಿಸಲಿದೆ. ಅದರಲ್ಲಿ ಯಾರಿಗೆ, ಹೇಗೆ, ಯಾವಾಗ? ಲಸಿಕೆ ನೀಡಬೇಕು ಎಂಬ ಅಂಶವನ್ನು ತಿಳಿಸಲಾಗುತ್ತದೆ ಎಂದು ಹೇಳಿದರು.

ಕೋವಿಡ್ ಲಸಿಕೆಯನ್ನು ಜನಪ್ರತಿನಿಧಿಗಳು ಪಡೆಯಬಹುದೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಲಸಿಕೆ ಕುರಿತು ಯಾವುದೇ ಅನುಮಾನವಿಲ್ಲ, ಯಾವುದೇ ಆತಂಕವೂ ಇಲ್ಲ, ಅವಕಾಶವಿದ್ದರೆ ನಾನೇ ಮೊದಲು ಲಸಿಕೆ ಪಡೆದು ಆರೋಗ್ಯ ಕಾರ್ಯಕರ್ತರ, ಜನಸಾಮಾನ್ಯರಲ್ಲಿ ಆತ್ಮವಿಶ್ವಾಸ ಹೆಚ್ಚಿಸುತ್ತೇನೆ ಎಂದರು.

ಕೊರೊನಾ ಲಸಿಕೆಯ ಮೊದಲ ಕಂತು ಒಂದೆರಡು ದಿನಗಳಲ್ಲಿ ರಾಜ್ಯಕ್ಕೆ ಬರಲಿದ್ದು, ಅದನ್ನು ಸುರಕ್ಷಿತವಾಗಿ ದಾಸ್ತಾನು ಮಾಡಲು ನಡೆದಿರುವ ಸಿದ್ಧತೆಗಳನ್ನು ಸಚಿವರು ವಿವರಿಸಿದರು.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

# ಜ.16 ರಿಂದ ಕೊರೊನಾ ಲಸಿಕೆ ಹಂಚಿಕೆ

**ಬೆಂಗಳೂರು,ಜ.10-** ಜನವರಿ 16ರಿಂದ ರಾಜ್ಯದಲ್ಲಿ ಕೋವಿಡ್ ಲಸಿಕೆ ನೀಡಲಾಗುವುದು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಐದು ಪ್ರಾದೇಶಿಕ ಲಸಿಕಾ ಕೇಂದ್ರಗಳಲ್ಲಿ ಲಸಿಕೆಗಳನ್ನು ದಾಸ್ತಾನು ಮಾಡಲಾಗುವುದು. ಬೆಂಗಳೂರು ವಿಭಾಗದಲ್ಲಿ ನಾಲ್ಕು ಕಡೆಗಳಲ್ಲಿ ಹಾಗೂ ಬೆಳಗಾವಿ ವಿಭಾಗದ ಒಂದು ಕೇಂದ್ರದಲ್ಲಿ ಲಸಿಕೆಗಳನ್ನು ದಾಸ್ತಾನು ಮಾಡಲಾಗುವುದು ಎಂದರು.

ಬೆಳಗಾವಿ ವಿಭಾಗದ 8 ಜಿಲ್ಲೆಗಳಿಗೆ ಆ ಕೇಂದ್ರದಿಂದಲೇ ಲಸಿಕೆ ಪೂರೈಕೆ ಮಾಡಲಾಗುತ್ತದೆ. ಉಳಿದ ಜಿಲ್ಲೆಗಳಿಗೆ ಬೆಂಗಳೂರು ವಿಭಾಗದಿಂದ ಲಸಿಕೆ ಸರಬರಾಜು ಮಾಡಲಾಗುವುದು.

ಪ್ರತಿ ಜಿಲ್ಲೆಯಲ್ಲೂ ಒಂದೊಂದು ಲಸಿಕೆ ಕೇಂದ್ರವನ್ನು ತೆರೆಯಲಾಗುವುದು. 40 ಲಕ್ಷ ಡೋಸ್ ಲಸಿಕೆ ಸಂಗ್ರಹಿಸುವ ಸಾಮರ್ಥ್ಯ ಇದೆ ಎಂದು ಸುಧಾಕರ್ ತಿಳಿಸಿದರು.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ



**ತೀವ್ರ ತಪಾಸಣೆ...** ಬ್ರಿಟನ್‌ನಿಂದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರತಿಯೊಬ್ಬ ಪ್ರಯಾಣಿಕರನ್ನು ಕೋವಿಡ್ ತಪಾಸಣೆಗೆ ಒಳಪಡಿಸಿ, ಅವರ ಕೈಗೆ ಸೀಲ್ ಹಾಕಿ ಆರೋಗ್ಯ ಇಲಾಖೆ ಭಾರೀ ಕಟ್ಟೆಚ್ಚರ ವಹಿಸಿತ್ತು .